
ಬಾ ಮತ್ತು ಬಾಪು 150ನೇ ವರ್ಷಾಚರಣೆ - ಪುಸ್ತಕ ಮಾಲಿಕೆ

ಖಾದಿ-ಗ್ರಾಮೋದ್ಯೋಗ

ಮೋಹನದಾಸ್ ಕರಮಚಂದ್ ಗಾಂಧಿ



ಕನ್ನಡಾನುವಾದ : ವಿ.ಜಿ. ಭಟ್ಟ

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಖಾದಿ - ಗ್ರಾಮೋದ್ಯೋಗ

ಮೋಹನದಾಸ್ ಕರಮಚಂದ್ ಗಾಂಧಿ

ಅನುವಾದಕರು

ವಿ. ಜಿ. ಭಟ್ಟ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು - 560001, ದೂರವಾಣಿ : 080-22261967

ಖಾದಿ ಗ್ರಾಮೋದ್ಯೋಗ
ಲೇಖಕರು : ಮೋ.ಕ. ಗಾಂಧಿ
ಕನ್ನಡಾನುವಾದ : ವಿ.ಜಿ. ಭಟ್ಟ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001
ದೂರವಾಣಿ : 080–22261967

ಮೊದಲ ಮುದ್ರಣ	:	1960
ಎರಡನೆಯ ಮುದ್ರಣ	:	2008
ಪರಿಷ್ಕೃತ 3ನೇ ಆವೃತ್ತಿ	:	2018
ಪ್ರತಿಗಳು	:	1000
ಪುಟಗಳು	:	XIV + 66
ಬೆಲೆ	:	58/–
ಮುದ್ರಕರು	:	ಕ್ರಿಯೇಟಿವ್‌ಗೀಕ್ಸ್ ಯಾಧವ ಕಾಲೇಜು ರಸ್ತೆ, ಮಾಧವನಗರ ಬೆಂಗಳೂರು – 560001 ದೂರವಾಣಿ : 080 40927049



ಅರ್ಪಣೆ

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ
ಕಾರ್ಯದರ್ಶಿಗಳಾಗಿದ್ದ

ಪ್ರೊ. ಎಚ್.ಆರ್. ದಾಸೇಗೌಡ ಅವರಿಗೆ

ಗೌರವಪೂರ್ವಕವಾಗಿ



ನಿಶ್ಚಲವಾದ ಚೈತನ್ಯವುಳ್ಳ ಸಣ್ಣ ಗುಂಪು ತನ್ನ ಗುರಿಯ ಬಗ್ಗೆ ದೃಢ ನಂಬಿಕೆ ಇಟ್ಟು ಹೊರಟರೆ ಇತಿಹಾಸದ ಗತಿಯನ್ನೇ ಬದಲಿಸಬಹುದು.

– ಮಹಾತ್ಮ ಗಾಂಧಿ

ನಿಮ್ಮೊಂದಿಗೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ ಮಹಾತ್ಮಾ ಗಾಂಧಿ "ಅವರ ಖಾದಿ ಗ್ರಾಮೋದ್ಯೋಗ" ಕೃತಿಯನ್ನು ಪ್ರಕಟಿಸಲು ನನಗೆ ಅತ್ಯಂತ ಹರ್ಷವಾಗುತ್ತದೆ.

ಮಹಾತ್ಮಜೀ ಅವರು ಜನರ ಸ್ವಾವಲಂಬನೆ, ಸ್ವಾಭಿಮಾನ, ಸ್ವದೇಶಿಯತೆಯಿಂದ ಮಾತ್ರ ಭಾರತ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವೆಂಬುದನ್ನು ಒಂದು ನಿಮಿಷ ಕೂಡ ವ್ಯರ್ಥಗೊಳಿಸದೆ ಚರಕದಿಂದ ನೂಲುತ್ತಾ ತಾವೇ ಸ್ವತಃ ಬಹುದೊಡ್ಡ ನಿದರ್ಶನವಾದರು. ಭಾರತೀಯರ ನಿರುದ್ಯೋಗ ನಿವಾರಣೆಗೆ ಖಾದಿ ಮತ್ತು ಗ್ರಾಮೋದ್ಯೋಗವೇ ಪರ್ಯಾಯಾವಾಗಿ ಹೊಸ ಆರ್ಥಿಕ ನೀತಿಯನ್ನು ಸೃಜಿಸಿದರು. ಔದ್ಯಮಿಕತೆಯಿಂದ ನಿರುದ್ಯೋಗ, ಹಸಿವು, ಬಡತನ, ಬಡವ-ಶ್ರೀಮಂತರ ಅಂತರ ದ್ವಿಗುಣಗೊಳ್ಳುವುದು ಮತ್ತು ವರ್ಗ ತಾರತಮ್ಯಗಳು, ಗುಲಾಮಗಿರಿ ಹೆಚ್ಚಾಗುವುದರಿಂದ ಯಂತ್ರಗಳ ಬಳಕೆಗೆ ಕಡಿವಾಣ ಹಾಕಲು ಇಂಗ್ಲೆಂಡಿನ ಲ್ಯಾಂಕಸ್‌ಶೈರ್‌ನಲ್ಲಿನ ಬಟ್ಟೆ ಗಿರಣಿಗಳು ಇಂಥಹ ಸ್ವದೇಶಿತನದಿಂದಾಗಿ ಮುಚ್ಚಿದವು. ಭಾರತದಿಂದ ಹತ್ತಿಯನ್ನು ಕೊಂಡೊಯ್ದು ಗಿರಣಿಗಳಲ್ಲಿ ಬಟ್ಟೆ ತಯಾರಿಸಿ, ದುಬಾರಿ ಬೆಲೆಯಲ್ಲಿ ಭಾರತಕ್ಕೆ ಮಾರಾಟ ಮಾಡುತ್ತಿದ್ದ ಬ್ರಿಟಿಷರ ಆರ್ಥಿಕತೆಗೆ ಬಹುದೊಡ್ಡ ಘಾತ, ಭಾರತದ ಖಾದಿ ಚಳುವಳಿಯಿಂದ ಉಂಟಾಯಿತು. ಮಹಾತ್ಮರ ಇಂಥಹ ಕ್ರಾಂತಿಕಾರಕ ಆರ್ಥಿಕ ಚಳುವಳಿ ಇಂದಿಗೂ

ಮಾದರಿಯಾಗಿದೆ. ಗಾಂಧಿ ಅವರ ಖಾದಿ–ಗ್ರಾಮೋದ್ಯೋಗದ ತತ್ವ ಸಿದ್ಧಾಂತ ಮತ್ತು ಆಶಯಗಳನ್ನು ತಿಳಿಸಿಕೊಡುವ ಈ ಕೃತಿ ಅಪೂರ್ವವಾಗಿದೆ. ಇಂಥಹ ಕೃತಿ ರಚಿಸಿಕೊಟ್ಟ ಶ್ರೀ ವಿ.ಜಿ. ಭಟ್ಟ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

"ಖಾದಿ ಗ್ರಾಮೋದ್ಯೋಗ"ದಂಥಹ ಅಪೂರ್ವ ಕೃತಿಯನ್ನು ಪುನರ್ ಪ್ರಕಟಿಸಲು ಶ್ರಮವಹಿಸಿದ ಗೌ॥ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ಆತ್ಮೀಯ ನಮನಗಳು. ಗಾಂಧೀ ಭವನದ ಎಲ್ಲಾ ಸದಸ್ಯರು ಇಂಥಹ ಗಾಂಧಿ ತತ್ವ ಪ್ರಣೀತ ಕಾರ್ಯಕ್ಕೆ ಸಕಲ ಸಹಕಾರವನ್ನು ನೀಡುತ್ತಿರುವುದಕ್ಕೆ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಈ ಪರಿಷ್ಕೃತ ಆವೃತ್ತಿಯನ್ನು ಅಂದವಾದ ವಿನ್ಯಾಸದೊಂದಿಗೆ ಮುದ್ರಿಸಿದ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಮತ್ತು ತಂಡದವರಿಗೆ ಗಾಂಧೀ ಭವನದ ಪರವಾಗಿ ನಮನಗಳು ಸಲ್ಲುತ್ತವೆ.

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬೆಂಗಳೂರು
ನವೆಂಬರ್ 27, 2018

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ಮಹಾತ್ಮಾಜೀ ಅವರ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಗಾಂಧೀಜಿ ಅವರ 'ಖಾದಿ ಗ್ರಾಮೋದ್ಯೋಗ' ಕೃತಿಯ ಸಂಗ್ರಹಣೆಗಳು ಮೂಲ ಆಂಗ್ಲ ಭಾಷೆಯಲ್ಲಿದ್ದು, ಅದನ್ನು ಕನ್ನಡಕ್ಕೆ ಸಮರ್ಪಕವಾಗಿ ಭಾಷಾಂತರಗೊಳಿಸಿದ ಕೀರ್ತಿ ಶ್ರೀ ವಿ.ಜಿ. ಭಟ್ಟ ಅವರಿಗೆ ಸಲ್ಲುತ್ತದೆ.

ಭಾರತದ ಸ್ವಾತಂತ್ರಕ್ಕೆ, ಸ್ವಾವಲಂಬನೆಯ ಶಕ್ತಿಯನ್ನು ಕೊಟ್ಟ ಖಾದಿ-ಗ್ರಾಮೋದ್ಯೋಗ, ಮನೆಮನೆಯ ಉದ್ಯೋಗವಾಗಿ 19ನೇ ಶತಮಾನದ ಭಾರತ ಆರ್ಥಿಕತೆಯನ್ನು ವಿಮೋಚನಾ ಹೋರಾಟವಾಗಿಸಿದ ಘನತೆ ಸಲ್ಲುತ್ತದೆ. ಅಂತೆಯೇ ಅಂತರರಾಷ್ಟ್ರೀಯ ಮಹಿಳಾ ಚಳುವಳಿಯನ್ನು ಕಟ್ಟುವಲ್ಲಿಯೂ ಸಹ ಲಂಡನ್, ಫ್ರಾನ್ಸ್, ಮೆಸ್ಯಾಚುಸೆಟ್ಸ್ ಇತರೆ ದೇಶದಲ್ಲಿನ ಬಟ್ಟೆ ಗಿರಣಿಗಳು ಮತ್ತು ಸಿದ್ಧ ಉಡುಪು ತಯಾರಿಕಾ ಘಟಕಗಳಲ್ಲಿನ ಲಿಂಗ ತಾರತಮ್ಯ, ವೇತನದ ಅಸಮಾನತೆ, ಕೆಲಸಗಾರರ ದಾಸ್ಯತ್ವಗಳೇ ಪ್ರಮುಖ ಕಾರಣಗಳಾಗಿದ್ದುವೆಂಬುದನ್ನು ಇಲ್ಲಿ ಸ್ಮರಿಸಬಹುದು. ಗಾಂಧೀಜಿ ಅವರು ಸಾಮಾನ್ಯ ಜನರ ಬದುಕು-ದುಡಿಮೆಯ ಬಗ್ಗೆ ಚಿಂತಿಸಿ, ಮಹಿಳೆಯರು, ತಳಸಮುದಾಯದವರ ಕೈಗೆ ಚರಕ-ರಾಟೆಯನ್ನು ಕೊಟ್ಟು, ಸ್ವಉದ್ಯೋಗಿಗಳಾಗಲು, ಬಿಡುವಿನ ವೇಳೆಯನ್ನು ಸದುಪಯೋಗ ಮಾಡಿಕೊಳ್ಳುವ ಮಾರ್ಗಗಳನ್ನು ತೋರಿಸಿಕೊಟ್ಟರು. ಅರೆಉದ್ಯೋಗಗಳು, ಪೂರ್ಣಕಾಲಿಕ ಉದ್ಯೋಗಿಗಳಾಗಲು, ನಿರುದ್ಯೋಗಿಗಳು, ಉದ್ಯೋಗಸ್ಥರಾಗುವ ಮೂಲಕ ಚರಕದಿಂದ ನೂಲು ತೆಗೆದು, ತಮ್ಮ ಉಡುಪು-ತೊಡಪುಗಳನ್ನು ತಾವೇ ಸಿದ್ಧಗೊಳಿಸುವ ಕೈಂಕರ್ಯಕ್ಕೆ ಹಚ್ಚುವ ಮೂಲಕ, ಈ ದೇಶದ ಜನರ ಬಡತನ ನಿವಾರಣಾ ಕಾರ್ಯ ತತ್ಪರರಾದರು. ಇದರಿಂದಾಗಿ ಅಂದಿನ ಬ್ರಿಟಿಷ್ ಆಡಳಿತಕ್ಕೆ,

ಇಲ್ಲಿನ ಸಂಪನ್ಮೂಲವಾದ ಹತ್ತಿಯನ್ನು ಲಂಡನ್ನಿಗೆ ರಫ್ತುಮಾಡಿ, ಸಿದ್ಧ ಉಡುಪನ್ನು ಅಧಿಕ ಬೆಲೆಗೆ ಭಾರತದಲ್ಲಿ ಮಾರಾಟ ಮಾಡುವ ದೊಡ್ಡ ವ್ಯವಹಾರಕ್ಕೆ ಅಗಾಧ ನಷ್ಟವುಂಟಾಯಿತು. ಹೀಗಾಗಿ ಅವರು ದಿನೇ ದಿನೇ ಭಾರತೀಯರಿಗೇ ದೇಶಬಿಟ್ಟು ನಿರ್ಗಮಿಸುವ ಆಲೋಚನೆಯತ್ತ ಸಾಗಿದ್ದನ್ನು ಮತ್ತು "ಗ್ರಾಮೋದ್ಯೋಗದಿಂದ ಸ್ವಾವಲಂಬನೆಯತ್ತ" ಭಾರತ ಚಲಿಸಿದ್ದನ್ನು ಗಾಂಧೀಜಿ ಅವರು ಈ ಕೃತಿಯಲ್ಲಿ ಸವಿವರವಾಗಿ ಕಟ್ಟಿಕೊಟ್ಟಿದ್ದಾರೆ.

ಈ ಕೃತಿಯನ್ನು ಮರುಮುದ್ರಣಗೊಳಿಸಿ ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂಥಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಮೊದಲ ಮಾತು

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು. ನಡೆದಲ್ಲಿ ಪವಿತ್ರ ಭೂಮಿಯಾಯಿತು–ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿಯ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವು ತೋರಿದ ದಾರಿಯನ್ನು ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ಗಾಂಧೀಜಿ ಅವರ ವಿಚಾರಗಳನ್ನು ಈ ರೀತಿ ಜನತೆಯ ಮುಂದಿಡುವ ದೃಷ್ಟಿಯಿಂದ ಗಾಂಧಿ ಸ್ಮಾರಕ ನಿಧಿಯವರು ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಗಾಂಧಿ ಸಾಹಿತ್ಯವನ್ನು ಭಾಷಾಂತರಿಸಿ ಪೂರೈಸುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಇಂಥ ಅನೇಕ ಪ್ರೌಢ ಪ್ರಕಟಣೆಗಳಾಗಿವೆ. ಹೆಚ್ಚು ಸರಳವಾದ ಭಾಷೆಯಲ್ಲಿ ಗಾಂಧಿ ಸಾಹಿತ್ಯವನ್ನು ಒದಗಿಸುವ ದೃಷ್ಟಿಯಿಂದಲೂ, ಇಂಥ ಪ್ರಕಟಣೆಗಳು ಹಣ ಮತ್ತು ಆಕಾರಗಳ ದೃಷ್ಟಿಯಿಂದ ಹೆಚ್ಚು ಸಂಗ್ರಹಾನುಕೂಲವಾಗಿರುವಂತೆಯೂ ಇನ್ನೂ ಎರಡು ಆಕಾರಗಳಲ್ಲಿ ಗಾಂಧಿ ಸಾಹಿತ್ಯವನ್ನು ಪ್ರಕಟಿಸುವುದೆಂದು ನಿರ್ಧರಿಸಿತು. ಈ ಗ್ರಂಥಗಳ ಉದ್ದೇಶ ಗಾಂಧಿ ತತ್ತ್ವಜ್ಞಾನ ಇಲ್ಲವೆ ಸಾಹಿತ್ಯದ ಮೌಲ್ಯಮಾಪನವಾಗಿದೆ, ಭಿನ್ನ ಭಿನ್ನ ವಿಷಯಗಳ ಬಗೆಗೆ ಗಾಂಧೀಜಿ ಅವರು ಹೇಳಿದ ಮಾತುಗಳನ್ನು ತದ್ವತ್ತಾಗಿ ಭಾಷಾಂತರಿಸಿ ಕೊಡುವುದೇ ಆಗಿದೆ. ಪ್ರಸ್ತುತ ಗ್ರಂಥವು ಗಾಂಧೀಜಿ ಅವರ ಆತ್ಮಕಥೆಯ ಭಾಷಾಂತರವಾಗಿದೆ. ಗಾಂಧೀಜಿ ರಾಷ್ಟ್ರದ ಸೊತ್ತು. ರಾಷ್ಟ್ರೀಯ ಪರಂಪರೆಯಾದ ಅವರ ಜೀವನಪ್ರಭಾವವು ಗಾಢವಾಗಿ ಆಗಬೇಕಾದರೆ, ಎಳೆಯ ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಗಾಂಧಿ ಚರಿತ್ರೆಯನ್ನು ಅರಿತಿರಬೇಕು. ಎಳೆಯ ವಯಸ್ಸಿನ ಮಕ್ಕಳಿಗೆ ಹಿಡಿಯುವಂತೆ ತೀರ ಸರಳವಾದ ಮಕ್ಕಳ ಭಾಷೆಯಲ್ಲಿಯೇ ಈ ಅನುವಾದವನ್ನು ಒದಗಿಸಿ ಕೊಡಲಾಗಿದೆ.

ಈ ಪ್ರಕಟಣೆಗಳಲ್ಲಿಯ ಮೊದಲಿನ ಮಾಲಿಕೆಯಲ್ಲಿ ಹೆಚ್ಚು ಸರಳವಾದ ಪ್ರತಿಪಾದನೆಯ ಕಡೆಗೆ ಲಕ್ಷ್ಯವನ್ನು ಪೂರೈಸಿದ್ದರೆ ಜೇಬಿನಾವೃತ್ತಿಯಲ್ಲಿ ಆ ವಿಷಯಗಳ ಬಗೆಗೆ ಗಾಂಧಿ ವಿಚಾರ ಸಾರವು ನೆನಪಿನಲ್ಲಿ ಉಳಿಯುವಂತೆ ಸೂತ್ರಬದ್ಧವಾಗಿ ವಿಷಯಗಳನ್ನು ಕೊಡಲಾಗಿದೆ.

ಮೊದಲಿನ 'ಜನಪ್ರಿಯ' ಆವೃತ್ತಿಯಲ್ಲಿ ಈಗಾಗಲೇ "ಮಹಿಳೆಯರು", "ಒಳ್ಳೆಯ ಜೀವನ", "ಅಸ್ಪೃಶ್ಯತೆ", "ಸತ್ಯ", "ಸರ್ವೋದಯ", "ವಿದ್ಯಾರ್ಥಿಗಳು" ಎಂಬ ಪುಸ್ತಕಗಳು ಪ್ರಕಟವಾಗಿವೆ.

ಶಿಕ್ಷಣ ಮತ್ತು ಇತರ ವಿಧಾಯಕ ಕಾರ್ಯಕ್ಷೇತ್ರಗಳಲ್ಲಿ ಇಂದು ಗಾಂಧಿ ವಿಚಾರದ ತಿಳುವಳಿಕೆ ಮತ್ತು ಅನುಷ್ಠಾನದ ಅವಶ್ಯಕತೆ ಎಷ್ಟಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಯಸ್ಕರ ಶಿಕ್ಷಣ ಸಂಸ್ಥೆಗಳು, ಹಳ್ಳಿ ಮತ್ತು ಪಟ್ಟಣಗಳಲ್ಲಿಯ ವಾಚನಾಲಯಗಳು ಮತ್ತು ವಿಧಾಯಕ ಕಾರ್ಯಕರ್ತರು ಈ ಪ್ರಕಟಣೆಗಳನ್ನು ಸ್ವಾಗತಿಸುವುದಾಗಿ ನಂಬಿದ್ದೇವೆ.

ವಿದ್ಯಾಗಿರಿ, ಧಾರವಾಡ
15-08-1960
ಸ್ವಾತಂತ್ರ್ಯ ದಿನ

ರಾ. ಶ್ರೀ. ಹುಕ್ಕೇರಿಕರ್
ಅಧ್ಯಕ್ಷರು, ಗಾಂಧಿ ಸ್ಮಾರಕ ನಿಧಿ
ಕರ್ನಾಟಕ ಶಾಖೆ

ಪ್ರಕಾಶಕರ ಮಾತು

ಗಾಂಧೀ ತತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ. ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ.

ಈ ಕೃತಿ ಮೊದಲು ಮುದ್ರಣವಾದದ್ದು 1960ರ ಗಾಂಧೀ ಜಯಂತಿ ಸಂದರ್ಭದಲ್ಲಿ. 5000 ಕೃತಿಗಳನ್ನು ಮುದ್ರಿಸಲಾಗಿತ್ತು. ಆ ಕೃತಿಗಳು ಮುಗಿದುಹೋಗಿರುವುದರಿಂದ ಈ ಕೃತಿಯನ್ನು ಪುನರ್‌ಮುದ್ರಣ ಮಾಡಲಾಯಿತು. ಭಾರತದಂತಹ ಅತ್ಯಧಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಅನಕ್ಷರಸ್ಥರು ಇರುವ ದೇಶಕ್ಕೆ ಬೇಸಾಯಕ್ಕೆ ಪರ್ಯಾಯವಾದ ಉದ್ಯೋಗವನ್ನು ನೀಡಿ ಸ್ವಾವಲಂಬನೆಯ ಹಾದಿಯಲ್ಲಿ ಸ್ವದೇಶಿ ಅಭಿಮಾನವನ್ನು ಜಾಗೃತಗೊಳಿಸಲು ಖಾದಿ ಗ್ರಾಮೋದ್ಯೋಗವೇ ಸರಿಯಾದ ಹಾದಿಯೆಂದು ಮನಗಂಡು ಭಾರತದಲ್ಲಿ ಗ್ರಾಮಕ್ಕೆ ಕೈಗಾರಿಕೆಯಾಗಿದ್ದ ನೂಲುವ ವೃತ್ತಿಯನ್ನು ಜಾಗೃತಗೊಳಿಸಿ ಖಾದಿಯನ್ನು ರೂಪಿಸಿದರು. ಗಾಂಧೀಜಿ ಅವರು ದಾರಿದ್ರ್ಯ ನಿವಾರಣೆಗೆ ಖಾದಿಯೇ ಮೂಲವೆಂದು ನಂಬಿದ್ದರು. ಅದಕ್ಕಾಗಿ ಚರಕವನ್ನು ಆಶ್ರಯಿಸಿದರು. ಅವರು ಹೀಗೆ ಹೇಳುತ್ತಾ ಹಣ ಇಲ್ಲದಿರುವುದು ಜನತೆಗೆ ಅಂಟಿದ ರೋಗವಲ್ಲ, ಕೆಲಸ ಇಲ್ಲದಿರುವುದೇ ರೋಗವಾಗಿದೆ. ಶ್ರಮವೇ ಧನವು. ಲಕ್ಷಾಂತರ ಜನರಿಗೆ ಅವರ ಗುಡಿಸಿಲಿನಲ್ಲಿ ಮರ್ಯಾದೆಯಿಂದ ಬಾಳಲು ಕೆಲಸ ಒದಗಿಸಿದರೆ, ಅವರಿಗೆ ಅನ್ನವಸ್ತ್ರ-ಅರ್ಥಾತ್ ಹಣ ದೊರಕಿಸಿ ಕೊಟ್ಟಂತಾಗುವುದು. ಚರಕವು ಅಂಥ ಕೆಲಸವನ್ನು ಒದಗಿಸುತ್ತದೆ ಎಂಬ ಅಭಿಪ್ರಾಯವನ್ನು ಚಿತ್ರಿಸಿದರು. ಇದು ಅವರು ಚರಕಾದ ಮೇಲಿಟ್ಟಿದ್ದ ನಂಬಿಕೆಯನ್ನು ಸೂಚಿಸುತ್ತದೆ. ಅವರು ಹರಿಜನ ಪ್ರವಾಸದ ವೇಳೆಯಲ್ಲಿ "ಸಹಸ್ರಾರು ಹರಿಜನರಿಗೆ ನೂಲುವ ನೇಯುವ ಉದ್ಯಮಗಳೇ ಆಧಾರವಾಗಿದೆಯೆಂಬುದನ್ನು ನನ್ನ ಸಂಚಾರದಲ್ಲಿ ಕಂಡಿದ್ದೇನೆ" ಎಂದು ಹರಿಜನ ಪತ್ರಿಕೆಯಲ್ಲಿ ಬರೆದಿದ್ದಾರೆ. ಇದನ್ನು ಹೆಚ್ಚಿಗೆ ಸಂಘಟಿಸಿದ್ದರೆ ಹೆಚ್ಚು ಹರಿಜನರಿಗೆ ಆಸರೆಯಾಗಬಹುದು ಎಂದಿದ್ದಾರೆ.

ಖಾದಿಯು ಬಹುದೊಡ್ಡ ಧ್ಯೇಯ ಸಾಧಿಸುತ್ತದೆ. ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ನಿರುದ್ಯೋಗಿಯಾಗಿರುವ ಲಕ್ಷಾಂತರ ಜನರಿಗೆ ಅದು ಕೆಲಸ ಒದಗಿಸುತ್ತದೆ. ನೂಲುವುದರಿಂದ ದೊರೆಯುವ ಉತ್ಪನ್ನವನ್ನು ಬಿಟ್ಟರೂ

ಆ ಕೆಲಸವೇ ಅವರಿಗೆ ಪ್ರತಿಫಲವಾಗಿ ಪರಿಣಮಿಸುತ್ತದೆ. ಯಾಕೆಂದರೆ ಲಕ್ಷಾಂತರ ಜನ ನಿರುದ್ಯೋಗಿಯಾಗಿದ್ದಾರೆ. ಅವರು ಆಧ್ಯಾತ್ಮಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸಾಯುತ್ತಾರೆ. ಚರಕವು ಅಸಂಖ್ಯ ಬಡಸ್ತ್ರೀಯರ ಗೌರವವನ್ನು ಉಳಿಸುತ್ತದೆ ಮತ್ತು ಹೆಚ್ಚಿಸುತ್ತದೆ. ಆದ್ದರಿಂದ ಗಿರಣಿ ಬಟ್ಟೆಯನ್ನು ಪುಕ್ಕಟೆಯಾಗಿ ಕೊಟ್ಟರೂ ಜನರು ತಮ್ಮ ಒಳಿತಿಗಾಗಿ ಅದನ್ನು ಸ್ವೀಕರಿಸಬಾರದು. ಅವರ ಪರಿಶ್ರಮದ ಫಲವಾದ ಖಾದಿಯಿಂದಲೇ ಅವರ ಕ್ಷೇಮ ಎಂದಿದ್ದರು. ಹಳ್ಳಿಗಳ ಪುನರುಜ್ಜೀವನ ಚರಕದಿಂದಲೇ ಮತ್ತು ಚರಕವು ಬಡವರ ಬಾಳುವೆಯ ಆಶಾಕಿರಣ, ಚರಕ ಬಿಟ್ಟಿದರಿಂದ ಜನತೆಯ ಸ್ವಾತಂತ್ರ್ಯ ಮತ್ತು ಔದ್ಯಮೀಕರಣದಿಂದ ನಿರುದ್ಯೋಗ ಸಮಸ್ಯೆ, ಬಟ್ಟೆಯ ನಿರ್ಯಾತ, ಖಾದಿಯ ಅರ್ಥನೀತಿ, ಸ್ವದೇಶಿ ಧರ್ಮ, ಗ್ರಾಮೋದ್ಯೋಗಗಳು, ಅದನ್ನು ಆರಂಭಿಸುವ ಬಗ್ಗೆ ಕೂಲಂಕಷವಾಗಿ ಈ ಗ್ರಂಥದಲ್ಲಿ ತಿಳಿಸಿದ್ದಾರೆ.

ಇಂತಹ ಕೃತಿಯನ್ನು ಮಹಿಳೆಯರು ಮತ್ತು ಯುವ ಜನತೆಗೆ ತಲುಪಿಸಲು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮಹತ್ತರ ಕಾರ್ಯವನ್ನು ಕೈಗೊಂಡಿದೆ. ಈ ಕೃತಿ ಯುವ ಜನತೆಗೆ ಮಾರ್ಗದರ್ಶಿಯಾಗುವುದರಲ್ಲಿ ಸಹಕಾರಿಯಾಗುತ್ತದೆ. 1960ರಲ್ಲಿ ಈ ಕೃತಿಯನ್ನು ಪ್ರಕಟಿಸಿ ಮಹಾತ್ಮರ ಅಭಿಪ್ರಾಯಗಳನ್ನು ಜನರಲ್ಲಿ ಪರಿಚಯಿಸಿದ ಅಂದಿನ ಸ್ಮಾರಕ ನಿಧಿಯ ಅಧ್ಯಕ್ಷರು ಹಾಗೂ ಅಂದಿನ ಪ್ರಕಟಣಾ ಸಲಹಾ ಸಮಿತಿಯ ಸದಸ್ಯರೆಲ್ಲರ ಸಹಾಯವನ್ನು ನಾನು ನೆನೆಯುತ್ತೇನೆ.

ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ಕರಡು ತಿದ್ದುಪಡಿ ಮಾಡಿದ ಪ್ರೊ॥ ಜಿ. ಅಶ್ವಥ್‌ನಾರಾಯಣ್ ಹಾಗೂ ಶ್ರೀಮತಿ ಎಂ. ಆರ್. ಲಕ್ಷ್ಮೀದೇವಿ ದಂಪತಿಗಳಿಗೂ ಹಾಗೂ ಅಂದವಾದ ಮುಖಪುಟ ರಚಿಸಿಕೊಟ್ಟ ಡಾ॥ ಬಸವರಾಜ ಪಾಟೀಲ್ ಅವರಿಗೂ ಮತ್ತು ಅಂದವಾಗಿ ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಮೆ॥ ಲಿಬರ್ಟಿ ಎಂಟರ್‌ಪ್ರೈಸಸ್ ಮಾಲೀಕರಾದ ಶ್ರೀಯುತ ಶಿವದೇವ್ ಅವರಿಗೂ ಧನ್ಯವಾದಗಳು ಸಲ್ಲುತ್ತವೆ.


ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಪರಿವಿಡಿ

ಸಂಕ್ಷೇಪ ಸೂಚಿ :

ಯ. ಇ. = ಯಂಗ್ ಇಂಡಿಯಾ

ಹ. = ಹರಿಜನ



ಖಾದಿಯು ಬಹು ದೊಡ್ಡ ಧ್ಯೇಯ ಸಾಧಿಸುತ್ತದೆ. ವರ್ಷದಲ್ಲಿ ಕನಿಷ್ಟ ನಾಲ್ಕು ತಿಂಗಳು ನಿರುದ್ಯೋಗಿಯಾಗಿರುವ ಲಕ್ಷಾಂತರ ಜನರಿಗೆ ಅದು ಕೆಲಸ ಒದಗಿಸುತ್ತದೆ; ನೂಲುವುದರಿಂದ ದೊರೆಯುವ ಉತ್ಪನ್ನವನ್ನು ಬಿಟ್ಟರೂ ಆ ಕೆಲಸವೇ ಅವರಿಗೆ ಪ್ರತಿಫಲವಾಗಿ ಪರಿಣಮಿಸುತ್ತವೆ. ಯಾಕೆಂದರೆ, ಲಕ್ಷಾಂತರ ಜನ ನಿರುದ್ಯೋಗಿಯಾಗಿಬಿಟ್ಟರೆ ಅವರು ಆಧ್ಯಾತ್ಮಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸಾಯುತ್ತಾರೆ. ಚರಕವು ಅಸಂಖ್ಯ ಬಡ ಸ್ತ್ರೀಯರ ಗೌರವವನ್ನು ಉಳಿಸುತ್ತದೆ, ಹೆಚ್ಚಿಸುತ್ತದೆ. ಆದ್ದರಿಂದ ಗಿರಣಿ ಬಟ್ಟೆಯನ್ನು ಪುಕ್ಕಟೆಯಾಗಿ ಕೊಟ್ಟರೂ ಜನರು ತಮ್ಮ ಒಳಿತಿಗಾಗಿ ಅದನ್ನು ಸ್ವೀಕರಿಸಬಾರದು. ಅವರ ಪರಿಶ್ರಮದ ಫಲವಾದ ಖಾದಿಯಿಂದಲೇ ಅವರ ಕ್ಷೇಮ.

–ಮಹಾತ್ಮ ಗಾಂಧಿ

ಖಾದಿಯೇ ಏಕೆ?

ದಾರಿದ್ರ್ಯ ನಿವಾರಣೆ : ಕೈಯಿಂದ ನೂಲುವ ಹಾಗೂ ನೇಯುವ ಉದ್ಯೋಗಗಳ ಪುನರುಜ್ಜೀವನದಿಂದ ಭಾರತದ ಆರ್ಥಿಕ ಹಾಗೂ ನೈತಿಕ ಉದ್ಧಾರಕ್ಕೆ ವಿಶೇಷ ಸಹಾಯವಾಗುವುದೆಂದು ನನಗೆ ಖಾತ್ರಿಯಾಗಿದೆ. ಲಕ್ಷಾಂತರ ಹಳ್ಳಿಗರಿಗೆ ಬೇಸಾಯಕ್ಕೆ ಪೂರಕವಾದ ಸುಲಭ ಉದ್ಯೋಗದ ಅಗತ್ಯವಿದೆ. ಹಲವು ವರ್ಷಗಳ ಹಿಂದೆ ನೂಲುವುದು ಒಂದು ಕೈಗಾರಿಕೆಯಾಗಿತ್ತು. ಇಂದು ಲಕ್ಷಾಂತರ ಜನರನ್ನು ಉಪವಾಸದಿಂದ ಉಳಿಸಲಿಕ್ಕೆ ನೂಲುವುದನ್ನು ಪುನಃ ಶುರು ಮಾಡಬೇಕಾಗಿದೆ; ಹಳ್ಳಿಹಳ್ಳಿಯಲ್ಲಿ ನೇಕಾರರು ಮತ್ತೆ ತಲೆಯೆತ್ತಬೇಕಾಗಿದೆ.

(ಯ. ಇ., 1920)

* * *

ಭಾರತದ ದಿಟ್ಟ ದಾರಿದ್ರ್ಯ ಹಾಗೂ ಅದರಿಂದಾಗಿ ಬೆಳೆದ ಆಲಸ್ಯ–ಇವುಗಳ ನಿರ್ಮೂಲನೆಯಾಗುತ್ತಿದ್ದರೆ ಭಾರೀ ಯಂತ್ರಗಳನ್ನು ಹಾಕಲಿಕ್ಕೂ ಒಪ್ಪುತ್ತಿದ್ದೆ. ಆದರೆ ನೂಲುವುದೊಂದೇ ದಾರಿದ್ರ್ಯ ನಿವಾರಣೆಗೆ ತಾರಕವೆಂದು ನಾನು ಸೂಚಿಸಿದ್ದೇನೆ. ಚರಕವಾದರೂ ಒಂದು ಉಪಯುಕ್ತ ಯಂತ್ರವೇ ಆಗಿದೆ. ನಮ್ಮ ದೇಶದ ವಿಶಿಷ್ಟ ಸ್ಥಿತಿಗನುಗುಣವಾಗಿ ನಾನು ನನ್ನ ಕೈಲಾದ ಮಟ್ಟಿಗೆ ಚರಕದಲ್ಲಿ ಸುಧಾರಣೆ ಮಾಡಲು ಯತ್ನಿಸಿದ್ದೇನೆ. ಭಾರತದ ಹಾಗೂ ಮಾನವತೆಯ ಪ್ರೇಮಿಯು ಬಿಡಿಸಬೇಕಾಗಿರುವ ಒಂದೇ ಒಂದು ಪ್ರಶ್ನೆಯೆಂದರೆ ಈ ದೇಶದ ದುಃಖ ದಾರಿದ್ರ್ಯಗಳ ಉಪಶಮನಕ್ಕಾಗಿ ಉಪಾಯಗಳನ್ನು ಹುಡುಕುವುದಾಗಿದೆ.

ಈ ದೇಶದಲ್ಲಿ ನೂರಕ್ಕೆ ಎಂಬತ್ತರಷ್ಟು ಜನ ಬೇಸಾಯ ಮಾಡುತ್ತಾರೆ. ಅವರಿಗೆ ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ಕೆಲಸವು ಇಲ್ಲವೇ ಇಲ್ಲವೆಂದು ಹೇಳಬೇಕು. ಹೀಗಾಗಿ ಅವರು ಅರೆಹೊಟ್ಟೆ ಜೀವ ಸಾಗಿಸುತ್ತಾರೆ. ಇದು ಸಾಮಾನ್ಯ ಸ್ಥಿತಿ. ಆಗಾಗ್ಗೆ ತಲೆದೋರುವ ಕ್ಷಾಮವು ಈ ಒತ್ತಾಯದ ನಿರುದ್ಯೋಗವನ್ನು ಇನ್ನಿಷ್ಟು ಹೆಚ್ಚಿಸುತ್ತದೆ. ತಮ್ಮ ಅಲ್ಪ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ಈ ಜನ ಮಾಡಬಹುದಾದ ಕೆಲಸವಾದರೂ ಏನು?

ನೂಲುವುದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ. ಈ ಬಗ್ಗೆ ಯಾರಿಗಾದರೂ ಇನ್ನೂ ಸಂದೇಹವಿದೆಯೇ?

(ಯ. ಇ., 1921)

ಮನೆಯಲ್ಲಿ ಮಾಡಿದ ಅಡಿಗೆಯು 'ತುಟ್ಟಿ' ಆಗುವುದಿಲ್ಲ. ಖಾನಾವಳಿಯಿಂದ ಊಟ ತರಿಸಿಕೊಂಡು ನಾವು ಅದನ್ನು 'ಅಗ್ಗ' ಮಾಡಿಕೊಳ್ಳುವುದಿಲ್ಲ. ಅದರಂತೆಯೇ ನಮ್ಮ ಗುಡಿಸಲುಗಳಲ್ಲಿ ತಯಾರಾದ ನೂಲು ಮತ್ತು ಅರಿವೆ ತುಟ್ಟಿಯಾಗುವುದಿಲ್ಲ. ಇಪ್ಪತ್ತೈದು ಕೋಟಿಗೂ ಮಿಕ್ಕದ ಜನ ನಿಂತು ತಮ್ಮ ನೂಲನ್ನು ಸುತ್ತಣ ನೇಕಾರರಿಂದ ನೇಯಿಸಿಕೊಳ್ಳುವರು. ಇವರೆಲ್ಲ ಮಣ್ಣಿನ ಮಕ್ಕಳು, ಭೂಮಿಯನ್ನು ನಂಬಿಕೊಂಡವರು. ಇಷ್ಟು ಜನ ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ನಿರುದ್ಯೋಗಿಗಳಾಗಿರಬೇಕು. ಇವರೆಲ್ಲ ತಮ್ಮ ಬಿಡುವಿನಲ್ಲಿ ನೂತು, ನೇಯ್ದು ತಮ್ಮ ಬಟ್ಟೆಯನ್ನು ತಾವೇ ಮಾಡಿಕೊಂಡರೆ ಗಿರಣಿಯ ಬಟ್ಟೆಯು ಅವರ ಖಾದಿಯೊಡನೆ ಸ್ಪರ್ಧಿಸಲಾರದು. ಹೀಗೆ ಅವರು ತಯಾರಿಸಿದ ಬಟ್ಟೆ ಅವರಿಗೆ ಅತಿ ಅಗ್ಗವೆನಿಸುವುದು.

(ಯ. ಇ., 1921)

ನೂಲುವ ಉದ್ಯೋಗದ ವೈಶಿಷ್ಟ್ಯವೆಂದರೆ:–

1. ಕೆಲಸವಿಲ್ಲದವರಿಗೆ, ಕೆಲವೇ ಕಾಸುಗಳಾದರೂ ಬೇಕಾದವರಿಗೆ ಉದ್ಯೋಗವನ್ನು ಒದಗಿಸುತ್ತದೆ.
2. ಸಹಸ್ರಾರು ಜನರಿಗೆ ಇದು ಗೊತ್ತಿದೆ.
3. ಇದನ್ನು ಸುಲಭವಾಗಿ ಕಲಿಯಬಹುದು.
4. ಇದಕ್ಕೆ ದೊಡ್ಡ ಬಂಡವಲಿನ ಅಗತ್ಯವಿಲ್ಲ.
5. ಚರಕವನ್ನು ಸುಲಭವಾಗಿ, ಅಗ್ಗವಾಗಿ ತಯಾರಿಸಿಕೊಳ್ಳಬರುತ್ತದೆ. ಚಪ್ಪಟೆಯಾದ ಹಂಚಿನ ತುಂಡು, ಬಿದಿರಿನ ಕಡ್ಡಿಯಿಂದಲೂ ನೂಲಬಹುದೆಂಬುದನ್ನು ಹಲವರು ಅರಿಯರು.
6. ಇದರ ಬಗ್ಗೆ ಜನರಿಗೆ ರುಚಿಯಿದೆ.
7. ಬರಗಾಲ ಬಿದ್ದಾಗ ಇದರಿಂದ ಕೂಡಲೇ ಪರಿಹಾರ ಒದಗಿಸಿ ಕೊಡಬಹುದು.

8. ಬಟ್ಟೆಯ ಖರೀದಿಯಿಂದ ಪರದೇಶಗಳಿಗೆ ಹರಿದುಹೋಗುವ ಸಂಪತ್ತನ್ನು ಉಳಿಸಿಕೊಳ್ಳಲು ಇದರಿಂದಲೇ ಸಾಧ್ಯ.
9. ಹೀಗೆ ಉಳಿಸಿಕೊಂಡ ಸಂಪತ್ತನ್ನು ಇದು ಲಕ್ಷಾಂತರ ಜನರಿಗೆ ಸಹಜವಾಗಿ ಹಂಚಿಕೊಡುತ್ತದೆ.
10. ತೀರ ಸ್ವಲ್ಪ ಯಶ ದೊರೆತರೂ ಅದರಿಂದ ಜನತೆಗೆ ಕೂಡಲೇ ಲಾಭವಾಗುತ್ತದೆ.
11. ಜನತೆಯಲ್ಲಿ ಸಹಕಾರೀ ಭಾವನೆಯನ್ನು ಬೆಳೆಸಲು ಇದು ಅತ್ಯುತ್ತಮ ಸಾಧನವು.

ಈ ಕ್ಷೇತ್ರದಲ್ಲಿ ದುಡಿಯುವ ಕಾರ್ಯಕರ್ತರನ್ನು ಮಧ್ಯಮ ವರ್ಗಗಳೇ ಪೂರೈಸುತ್ತವೆ. ಆ ವರ್ಗದ ಜನರಲ್ಲಿ ಖಾದಿಯ ಬಗ್ಗೆ ಸಾಕಷ್ಟು ವಿಶ್ವಾಸವಿಲ್ಲದಿರುವುದೇ ದೊಡ್ಡ ತೊಂದರೆಯಾಗಿದೆ. ಇದಕ್ಕೂ ಹೆಚ್ಚಿನ ತೊಂದರೆಯೆಂದರೆ, ಅಂದವಾಗಿ ತೋರುವ ಗಿರಣಿ ಬಟ್ಟೆಗಳ ಬದಲಾಗಿ ಖಾದಿಯನ್ನುಪಯೋಗಿಸಲು ಜನ ತಯಾರಿಲ್ಲ. ಈ ಸಂಕ್ರಮಣ ಕಾಲದಲ್ಲಿ ಖಾದಿಯ ಬೆಲೆ ಹೆಚ್ಚಾಗಿರುವುದೂ ಒಂದು ಆತಂಕ. ಸಾಕಷ್ಟು ಪ್ರಮಾಣದಲ್ಲಿ ಜನರು ನೂಲಲು ನಿರ್ಧರಿಸಿದರೆ ಖಾದಿಯ ಗಿರಣಿಯ ಬಟ್ಟೆಯೊಡನೆ ಸ್ಪರ್ಧಿಸುವಂತಾಗಬಹುದು. ಈ ಆಂದೋಲನದ ಯಶಸ್ಸಿಗಾಗಿ ಸ್ವಲ್ಪ ತ್ಯಾಗ ಮಾಡಲು ಜನತೆ ಸಿದ್ಧವಾಗಬೇಕು. ರೈತರ ಹಿತ ಚಿಂತಿಸುವ, ವಿದೇಶೀ ಸ್ಪರ್ಧೆಯಿಂದ ಅವರನ್ನು ರಕ್ಷಿಸಲು ನಿಶ್ಚಯಿಸುವ ನಮ್ಮದೇ ಸಹಕಾರವಿದ್ದಿದ್ದರೆ, ಜನತೆಯು ಇಷ್ಟು ತ್ಯಾಗವನ್ನು ಮಾಡುವ ಅಗತ್ಯವಿರುತ್ತಿದ್ದಿಲ್ಲ. ಸರಕಾರವು ರಾಷ್ಟ್ರೀಯವಾಗಿದ್ದರೆ ಅದು ಮಾಡಬಹುದಾದದ್ದನ್ನು ಜನತೆಯ ಸ್ವಸಂತೋಷದ ತ್ಯಾಗವು ಕೆಲಕಾಲ ಮಾಡಬಹುದು.

(ಯ. ಇ., 1924)

* * *

ಹಣ ಇಲ್ಲದಿರುವುದು ಜನತೆಗೆ ಅಂಟಿದ ರೋಗವಲ್ಲ; ಕೆಲಸ ಇಲ್ಲದಿರುವುದೇ ರೋಗವಾಗಿದೆ. ಶ್ರಮವೇ ಧನವು. ಲಕ್ಷಾಂತರ ಜನರಿಗೆ ಅವರ ಗುಡಿಸಲಲ್ಲಿ ಮರ್ಯಾದೆಯಿಂದ ಬಾಳಲು ಕೆಲಸ ಒದಗಿಸಿದರೆ, ಅವರಿಗೆ ಅನ್ನವಸ್ತ್ರ–ಅರ್ಥಾತ್ ಹಣ–ದೊರಕಿಸಿ ಕೊಟ್ಟಂತಾಗುವುದು. ಚರಕವು ಅಂಥ ಕೆಲಸವನ್ನು ಒದಗಿಸುತ್ತದೆ.

ಇದಕ್ಕೂ ಒಳ್ಳೆಯದಾದ ಬೇರೆ ವಿಧಾನವನ್ನು ನಾವು ಹುಡುಕುವವರೆಗೂ ಚರಕವೇ ಗತಿ.

(ಯ. ಇ., 1925)

ನಿರುದ್ಯೋಗವೇ ಕೆಡುಕಿನ ಮೂಲ. ಅದನ್ನು ಕಿತ್ತೊಗೆದರೆ, ಹೆಚ್ಚಿನ ಶ್ರಮವಿಲ್ಲದೆ ಬದುಕಿನ ಬಹಳಷ್ಟು ಕೆಡುಕನ್ನು ನಿವಾರಿಸಬಹುದು. ಉಪವಾಸದಿಂದ ದಿನದೂಡುವ ರಾಷ್ಟ್ರದಲ್ಲಿ ನಿರಾಸೆ, ನಿರುತ್ಸಾಹಗಳು ಸಹಜ. ಅಂಥ ರಾಷ್ಟ್ರವು ಹೊಲಸಿಗೆ, ರೋಗಕ್ಕೆ ಉದಾಸೀನಭಾವ ತಳೆಯುತ್ತದೆ. ಯಾವ ಸುಧಾರಣೆಯನ್ನೇ ಸೂಚಿಸಿದರೂ, 'ಅದರಿಂದ ಏನು ಪ್ರಯೋಜನ?' ಎಂದು ಅದು ಕೇಳುತ್ತದೆ. ಅಂಥ ನಿರಾಶೆಯನ್ನು ತೊಲಗಿಸಲು ಚರಕವೇ ಸಂಜೀವಿನಿ.

(ಯ. ಇ., 1925)

* * *

ನಮ್ಮ ದೇಶದ ದೈನಿಕ ತಲಾ ವರಮಾನವೆಷ್ಟು? ನಮ್ಮ ಅರ್ಥಶಾಸ್ತ್ರಜ್ಞರ ಹೇಳಿಕೆಯಂತೆ ಅದು ಒಂದೂವರೆ ಆಣೆಯಿದೆ. ಈ ಲೆಕ್ಕ ನಮ್ಮನ್ನು ಗೊಂದಲದಲ್ಲಿ ಸಿಗಿಸುತ್ತದೆ. ಒಂದು ಹೊಳೆಯು ಕೆಲವು ಕಡೆ ಆರು ಅಡಿ, ಇನ್ನು ಕೆಲವು ಕಡೆ ಎರಡು ಅಡಿ ಆಳವಿದೆಯೆಂದು ತಿಳಿಯುವ, ಹೊಳೆಯ ಸರಾಸರಿ ಆಳ ನಾಲ್ಕು ಅಡಿಯೆಂದು ಲೆಕ್ಕ ಹಾಕಿ ಯಾರಾದರೂ ಅದನ್ನು ದಾಟಿ ಹೋಗಲು ಯತ್ನಿಸಿದರೆ ಮುಳುಗದೆ ಹೋಗುವುದುಂಟೆ? ಅಂಕಿ ಸಂಖ್ಯೆಗಳು ಮಂಕುಬೂದಿ ಎರಚುವುದು ಹೀಗೆ. ವೈಸರಾಯ್‌ರು, ಲಕ್ಷಾಧೀಶರುಗಳ ಉತ್ಪನ್ನದ ಜತೆಗೆ ಬಡವರ ಉತ್ಪನ್ನದ ಲೆಕ್ಕಹಾಕಿ ಸರಾಸರಿ ವರಮಾನವನ್ನು ಕಂಡುಹಿಡಿಯುತ್ತಾರೆ. ನಿಜವಾಗಿಯೂ ದೈನಿಕ ತಲಾ ಉತ್ಪನ್ನ ಮೂರು ಬಿಲ್ಲಿಯಷ್ಟಾಗುತ್ತದೆ. ಈ ಉತ್ಪನ್ನಕ್ಕೆ ಪೂರಕವಾಗಿ ಚರಕವು ದಿನಕ್ಕೆ ಕೇವಲ ಮೂರೇ ಬಿಲ್ಲಿಯನ್ನು ದೊರಕಿಸಿಕೊಟ್ಟರೂ ಅದನ್ನು ಕಾಮಧೇನುವೆಂದು ಕರೆಯುವುದು ಯೋಗ್ಯವಲ್ಲವೇ? ಭಾರತದಲ್ಲಿ ದಾರಿದ್ರ್ಯವಿಲ್ಲವೆಂದು ಯಾರಾದರೂ ಮನಗಾಣಿಸಿಕೊಟ್ಟರೆ, ದಿನಕ್ಕೆ ಮೂರು

ಬಿಲ್ಲಿಯೂ ಹುಟ್ಟಿದೆ ಉಪವಾಸ ಬೀಳುವವರ ಸಂಖ್ಯೆ ಇಲ್ಲವೇ ಇಲ್ಲವೆನ್ನುವ ಮಟ್ಟಿಗೆ ಕಡಿಮೆಯೆಂದು ತೋರಿಸಿಕೊಟ್ಟರೆ ನನ್ನ ತಪ್ಪು ಒಪ್ಪಿಕೊಂಡು ಚರಕವನ್ನು ಮುರಿದು ಎಸೆಯುವೆ.

(ಯ. ಇ., 1927)

* * *

ಲಕ್ಷಾಂತರ ಶ್ರಮಿಕರು ಗತಿಯಿಲ್ಲದೆ ನಿರುದ್ಯೋಗಿಗಳಾಗಿರಬೇಕಾಗಿದೆ. ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ಅವರಿಗೆ ಕೆಲಸ ಇರುವುದಿಲ್ಲ – ಎಂಬುದು ಮುಖ್ಯ. ಒಮ್ಮೆ ಈ ಸಂಗತಿ ಸ್ಪಷ್ಟವಾದರೆ, ಇಷ್ಟು ಜನರಿಗೆ ಅವರ ಬಿಡುವಿನಲ್ಲಿ ಕೆಲಸ ಒದಗಿಸಿಕೊಡಲು ಒಂದು ನಿಮಿಷವೂ ತಡೆಯಕೂಡದೆಂಬ ವಿಷಯ ಖಂಡಿತವಾಗಿ ವಿದಿತವಾಗುತ್ತದೆ. ನಾವು ತಿಳಿದಿರಬೇಕಾದ ಇನ್ನೂ ಒಂದು ವಿಷಯವೆಂದರೆ ಶ್ರಮಿಕರ ಉತ್ಪನ್ನ ನಮ್ಮ ದೇಶದಲ್ಲಿ ದೈನಿಕ ತಲಾ ವರಮಾನ ಏಳು ಬಿಲ್ಲಿಯಷ್ಟಿದೆಯೆಂದರೆ, ಶ್ರಮಿಕರ ಸರಾಸರಿ ಉತ್ಪನ್ನ ಇನ್ನೂ ಕಡಿಮೆ ಇದೆಯೆಂದಾಯಿತು. ಹೆಚ್ಚಿನ ಬಂಡವಾಳ ಇಲ್ಲದೆ ಅವರ ಈ ಉತ್ಪನ್ನಕ್ಕೆ ದಿನಾ ಎರಡೇ ಬಿಲ್ಲಿಗಳನ್ನು ಕೂಡಿಸಿಕೊಟ್ಟರೂ ಒಳ್ಳೆಯದೇ ಆಯಿತು. ಇದಲ್ಲದೆ ಲಕ್ಷಾಂತರ ಜನರ ಹೃದಯದಲ್ಲಿ ನಂದಿದ ಆಶಾಜ್ಯೋತಿಯನ್ನು ಪುನಃ ಹೊತ್ತಿಸಿದಂತಾಗುವುದು.

ಚರಕವು ಲಾಭದಾಯಕವಲ್ಲವೆಂದು ಅವರ ಟೀಕಾಕಾರರು ಹೇಳುತ್ತಾರೆ. ಅಮೇರಿಕಾ ಇಂಗ್ಲೆಂಡ್ ದೇಶದವರ ದೈನಿಕ ತಲಾ ವರಮಾನ ಕ್ರಮವಾಗಿ ಹದಿನಾಲ್ಕು ರೂಪಾಯಿ, ಆರು ರೂಪಾಯಿಗಳಷ್ಟು ಇರುವಾಗ ನಮ್ಮದು ಕೇವಲ ಆರು ಬಿಲ್ಲೆಯೆಂಬುದನ್ನು ನೆನೆದರೆ, ಚರಕದಿಂದ ದಿನಕ್ಕೆ ಒಂದೇ ಒಂದು ಬಿಲ್ಲಿ ಉತ್ಪನ್ನವಾದರೂ ಅದು ಲಾಭದಾಯಕವೆಂದೇ ಹೇಳಬೇಕು. ಏನೂ ಇಲ್ಲದೆ ಇರುವಾಗ ಸ್ವಲ್ಪವನ್ನಾದರೂ ಉತ್ಪಾದನೆ ಮಾಡುವ ಪ್ರಯತ್ನ ಚರಕದ್ದಾಗಿದೆ. ಚರಕದಿಂದ ನಾವು ವರ್ಷಕ್ಕೆ ಆರು ಕೋಟಿ ರೂಪಾಯಿಗಳನ್ನು ನಮ್ಮ ದೇಶಕ್ಕೆ ಉಳಿಸಿಕೊಂಡರೆ ಅದೇನೂ ಅಸಾಧ್ಯವಲ್ಲ. ಅಷ್ಟರಮಟ್ಟಿಗೆ ರಾಷ್ಟ್ರೀಯ ವರಮಾನವನ್ನು ಹೆಚ್ಚಿಸಿದಂತಾಗುತ್ತದೆ.

ಈ ಕಾರ್ಯಗತಿಯಲ್ಲಿ ನಾವು ಅಪ್ರಯತ್ನವಾಗಿ ನಮ್ಮ ಹಳ್ಳಿಗಳನ್ನು ಸಂಘಟಿಸುತ್ತೇವೆ. ಇದಲ್ಲದೆ ಇಷ್ಟೊಂದು ಹಣ ದರಿದ್ರರಲ್ಲಿ ಹಂಚಿ ಹೋಗುತ್ತದೆ. ಇದರ ಜತೆಗೆ ಈ ರೀತಿ ಸಂಪತ್ತಿನ ವಿತರಣೆ ಮಾಡುವುದರಿಂದಾಗುವ ನೈತಿಕ ಪರಿಣಾಮವನ್ನು ವಿಚಾರಿಸಬೇಕು.

(ಯ. ಇ., 1927)

* * *

ಹರಿಜನರಿಗೆ ನೆರವು : ಸಹಸ್ರಾರು ಹರಿಜನರಿಗೆ ನೂಲುವ ಹಾಗೂ ನೇಯುವ ಉದ್ಯಮಗಳೇ ಆಧಾರವಾಗಿವೆಯೆಂಬುದನ್ನು ನನ್ನ ಸಂಚಾರದಲ್ಲಿ ಕಂಡಿದ್ದೇನೆ. ಸರಿಯಾಗಿ ಸಂಘಟಿಸಿದರೆ ಇನ್ನೂ ಹೆಚ್ಚು ಹರಿಜನರಿಗೆ ಅವು ಆಸರೆಯಾಗಬಹುದು. ಕೆಲವು ಕಡೆಗೆ ಅಸ್ಪೃಶ್ಯರೆನಿಸಿಕೊಳ್ಳುವ ನೇಕಾರರಿದ್ದಾರೆ. ಅವರು ಹೆಚ್ಚಾಗಿ ಒರಟು ಖಾದಿ ನೇಯುತ್ತಾರೆ. ಖಾದಿಯ ಚಳುವಳಿಯಿಂದಾಗಿ ಅವರ ವರ್ಗವೇ ಕಣ್ಮರೆಯಾಗುತ್ತಿತ್ತು. ಅನೇಕ ಹರಿಜನ ಕುಟುಂಬಗಳು ನೂತು ಉದರ ನಿರ್ವಹಣೆ ನಡೆಸಿದ್ದಾರೆಂಬುದೂ ಆಗಲೇ ತಿಳಿಯಿತು. ಹೀಗೆ ಖಾದಿಯ ಎರಡು ಬಗೆಯಿಂದ ಬಡವರ ಊರುಗೋಲಾಗಿದೆ. ದರಿದ್ರರಲ್ಲಿಯೇ ನಿಸ್ಸಹಾಯರಾದ ಹರಿಜನರನ್ನು ಹಿಡಿದು ಅದು ಎಲ್ಲ ಬಡವರಿಗೂ ಸಹಾಯ ನೀಡುತ್ತದೆ. ಇತರರು ಮಾಡಬಹುದಾದ ಎಷ್ಟೋ ಉದ್ಯೋಗಗಳನ್ನು ಮಾಡಲು ಅನುಕೂಲವಿಲ್ಲ. ಖಾದಿಯ ವಿಷಯ ಮಾತ್ರ ಹಾಗಲ್ಲ.

(ಹ. 1934)

* * *

ಚರಕದ ಚಿಕಿತ್ಸೆ : ನೂಲುವುದು ಒಂದು ನಯವಾದ ಕಲೆ. ಅದರ ವಿಧಾನವೇ ಆಹ್ಲಾದಕರವಾದದ್ದು. ಯಾಂತ್ರಿಕವಾಗಿ ಜಗ್ಗಿದ ಮಾತ್ರಕ್ಕೆ ಬೇರೆ ಬೇರೆ ಗಾತ್ರದ ಎಳೆ ಹೊರಡುವುದಿಲ್ಲ. ಕಣ್ಣುಗಳು ಬೆರಳುಗಳು ಕೂಡಿಯೇ ಎಳೆಯ ಗಾತ್ರವನ್ನು ನಿರ್ಧರಿಸಿಕೊಂಡು ಹೋಗುವಾಗ ಆಗುವ ಆನಂದವನ್ನು ಚರಕದ ಕಲಾಗಾರರೆ ಬಲ್ಲರು. ಕಲೆಯು ನಿಜವಾಗಿಯು ಕಲೆಯಾಗಬೇಕಾದರೆ ಸಾಂತ್ವನಗೊಳಿಸುವ ಶಕ್ತಿ ಅದಕ್ಕಿರಬೇಕಾಗುತ್ತದೆ. ಇದಕ್ಕೆ ಸರ್ ಪ್ರಭಾಶಂಕರ

ಪಟ್ಟಣಿಯವರ ಸಾಕ್ಷಿಯನ್ನೇ ನಾನು ಒಂದು ವರ್ಷದ ಹಿಂದೆ ಕೊಟ್ಟೆ. ದಿನದ ದುಡಿತದ ದಣಿವಾರಿಸಿಕೊಳ್ಳಲು ಅವರು ಚರಕ ತಿರುವುತ್ತಿದ್ದರು. ಅದರಿಂದ ಅವರ ನರಗಳಿಗೆ ಉಪಶಮನ ದೊರೆತು ಗಾಢನಿದ್ದೆ ಹತ್ತುತ್ತಿತ್ತು. ಚರಕದಿಂದ ಶಾಂತಿಯನ್ನು ಪಡಕೊಂಡ ಮಿತ್ರರೊಬ್ಬರ ಪತ್ರದ ಸಾರವನ್ನು ಕೊಡುತ್ತೇನೆ.

"ನನ್ನ ಕೋಣೆಯನ್ನು ಪ್ರವೇಶಿಸಿ ಬಾಗಿಲು ಹಾಕಿ ಕತ್ತಲಲ್ಲಿ ನಖಶಿಖಾಂತರ ಯಾತನೆಯಿಂದ ಒದ್ದಾಡುತ್ತಿದ್ದೆ. ಆಗ ಪ್ರಾರ್ಥನೆಯನ್ನು ಮಾಡಿ ಚರಕವನ್ನು ಹಿಡಿದೆ. ಅದರಿಂದ ಆಶ್ಚರ್ಯಕರವಾದ ನೆಮ್ಮದಿ ದೊರೆಯಿತು. ಅದರ ಲಯ ಬದ್ಧ ಗತಿಯಿಂದ ನನ್ನಲ್ಲಿ ಸ್ಥಿರತೆ ಮೂಡಿತು. ಅದರ ಸೇವಾ ಶಕ್ತಿಯ ಧ್ಯಾನವು ನನ್ನನ್ನು ದೇವರ ಹತ್ತಿರ ಒಯ್ದಿತು."

ಇದು ಒಬ್ಬರದಲ್ಲ, ಹಲವು ನೂಲುವವರ ಅನುಭವವಾಗಿದೆ. ಆದರೆ ಬಹಳ ಜನರಿಗೆ ನೂಲುವುದು ಆನಂದದಾಯಕವಾಗಿದೆಯೆಂದು ಎಲ್ಲರಿಗೂ ಹಾಗೇ ಅನಿಸುತ್ತದೆಂದು ಹೇಳಲಾಗದು. ಚಿತ್ರಗಾರಿಕೆಯು ಒಂದು ಶ್ರೇಷ್ಠ ಕಲೆಯಾಗಿದೆ. ಆದರೆ ಎಲ್ಲರೂ ಚಿತ್ರಕಾರರಾಗಲು ಹೋಗುವುದಿಲ್ಲ.

(ಯ. ಇ., 1929)

* * *

"ಚರಕದ ಚಿಕಿತ್ಸಾ ಶಕ್ತಿಯನ್ನು ಕುರಿತು ವಿಚಾರಿಸಿದ್ದೀರಾ?" ಎಂದು ನ್ಯೂಯಾರ್ಕ್ ಪೋಸ್ಟ್, ಪತ್ರಿಕೆಯ ಮಿ. ಫ್ರೀಮನ್ ಕೇಳಿದರು.

<u>ಗಾಂಧೀಜಿ :–</u> "ವಿಚಾರಿಸಿದ್ದೇನೆ. ಗ್ಲಾಸ್ಗೋದಲ್ಲಿಯ ಪ್ರೊಫೆಸರರೊಬ್ಬರು ಕಳುಹಿಸಿದ ಈ ವಿಷಯದ ಸಾಹಿತ್ಯವನ್ನು ಸ್ವಲ್ಪ ಓದಿದ್ದೇನೆ. ಚರಕದ ಲಯಬದ್ಧ ಅಲೆಯಿಂದ ಸಾಂತ್ವನವಾಗುವುದೆಂದು, ಅದರಿಂದ ಹುಚ್ಚರ ಮೇಲೆ ಒಳ್ಳೆಯ ಪರಿಣಾಮವಾಗುವುದೆಂದು ಬಂಗಾಲದ ಒಬ್ಬ ಸೇವಾನಿವೃತ್ತ ಜೇಲ್ ಸೂಪರಿಂಟೆಂಡೆಂಟರೂ ಬರೆದಿದ್ದಾರೆ".

<u>ಮಿ. ಫ್ರೀಮನ್ :–</u> "ಚರಕವೆಂದರೆ ವಿಚಾರಶಕ್ತಿಯುಳ್ಳ ಯಂತ್ರವೆಂದು ನಾನು ಅಮೇರಿಕೆಗೆ ವಿವರಿಸಬೇಕೆಂದಿದ್ದೇನೆ. ಚರಕದ ಜತೆಗೆ ಏಕಾಂತವಾಗಿದ್ದರೆ ಅದು ನಮ್ಮನ್ನು ವಿಚಾರಿಸಹತ್ತುತ್ತದೆಯೆಂಬುದನ್ನು ನೂಲುವ ವರ್ಗಕ್ಕೆ

ಹೋಗುತ್ತಿದ್ದಾಗ ಕಲಿತೆ. ಅಮೇರಿಕನ್ನರು ನೂಲಲಿಕ್ಕೆ ಹತ್ತಿದರೆ ಅವರು ಸ್ವಲ್ಪ ವಿಚಾರವನ್ನು ಮಾಡಬಹುದು. ಅಲ್ಲದಿದ್ದರೆ ವಿಚಾರ ಮಾಡಲು ಅವರಿಗೆ ವೇಳೆಯೇ ಇಲ್ಲ."

(ಹ. 1946)

* * *

ಸಹಕಾರದ ಸೂತ್ರ :- ನೂಲುವುದರಿಂದ ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಸಹಕಾರಿ ಸಂಘವನ್ನು ಕಟ್ಟಲು ಯತ್ನಿಸುತ್ತಿದ್ದೇನೆಂದು ನಾನು ಕಳೆದ ವರ್ಷ ಮದ್ರಾಸದಲ್ಲಿ ಹೇಳಿದೆ. ಈ ಕೆಲಸಕ್ಕೆ ಪ್ರಾರಂಭದಿಂದಲೂ ಸಹಕಾರ ಅಗತ್ಯ.

ಒಂದು ಕೇಂದ್ರವನ್ನೇ ತೆಗೆದುಕೊಳ್ಳೋಣ : ಅಲ್ಲಿ ಹತ್ತಿಯನ್ನು ಕೂಡಿಡಲಾಗುತ್ತದೆ. ಹತ್ತಿ ಅರೆಯುವವರು ಬಹುಶಃ ಕೇಂದ್ರದಲ್ಲಿಯೇ ಅರೆದು ಬೀಜ ಬಿಡಿಸುತ್ತಾರೆ. ಹಂಜೀ ಮಾಡುವವರು ಅದನ್ನು ನೂಲುವವರಿಗೆ ಹಂಚುತ್ತಾರೆ. ಅವರು ವಾರ ವಾರ ಲಡಿಗಳನ್ನು ಕೊಟ್ಟು ಕೂಲಿ ಒಯ್ಯುತ್ತಾರೆ. ನೂಲನ್ನು ನೇಕಾರರಿಗೆ ಕೊಟ್ಟು ನೇಯಿಸಲಾಗುತ್ತದೆ. ತಯಾರಾದ ಖಾದಿಯನ್ನು ಎಲ್ಲರಿಗೂ ಮಾರಲಾಗುತ್ತದೆ. ಹೀಗೆ ಖಾದಿ ಕೇಂದ್ರವು ಜಾತಿ ಮತಪಂಥಗಳ ಭೇದವಿಲ್ಲದೆ ಅನೇಕ ಜನರ ಸಂಪರ್ಕ ಇಟ್ಟುಕೊಳ್ಳುತ್ತದೆ. ಲಾಭಗಳಿಸುವ ಆಸೆ ಕೇಂದ್ರಕ್ಕಿಲ್ಲ. ಬಡವರ ಚಿಂತೆಯೇ ಅದರ ಚಿಂತೆ. ಕೇಂದ್ರವು ಜನತೆಗೆ ಉಪಯುಕ್ತವೆನಿಸಬೇಕಾದರೆ ಸರ್ವವಿಧದಿಂದಲೂ ನಿರ್ಮಲವಾಗಿರಬೇಕು. ಅದರ ಮತ್ತು ಆ ಸಂಘಟನೆಯಲ್ಲಿ ಬರುವವರ ಸಂಬಂಧ ನೈತಿಕವಾದುದು. ಅಂತೂ ಖಾದಿಯ ಕೇಂದ್ರವೆಂದರೆ ಹತ್ತಿ ಅರೆಯುವರ, ಹಿಂಜರಿಯುವವರ, ನೂಲುವವರ, ನೇಕಾರರ ಹಾಗೂ ಗಿರಾಕಿಗಳ ಸಹಕಾರಿ ಸಂಘವಾಗಿದೆ. ಪರಸ್ಪರ ಸೌಹಾರ್ದ, ಸೇವಾಭಾವನೆಗಳೇ ಅದರ ಸೂತ್ರ.

(ಯ. ಇ., 1926)

* * *

ಇದೊಂದೇ ಸಾರ್ವತ್ರಿಕ :- ನೂಲುವುದೊಂದೇ ಸಾರ್ವತ್ರಿಕವಾದ ಉದ್ಯಮವು. ಇತರ ಉದ್ಯಮಗಳು ಇರದಿದ್ದರೂ ನಡೆಯುತ್ತದೆಯೆಂದಲ್ಲ; ಅವು ನಿರುಪಯೋಗಿಯೆಂದೂ ಅಲ್ಲ. ಹಾಗೆ ನೋಡಿದರೆ ಬೇರೆ ಯಾವುದೇ ಉದ್ಯಮವು ನೂಲುವುದಕ್ಕಿಂತ ಹೆಚ್ಚು ಲಾಭಕರವಾಗಿದೆ. ಕೈಗಡಿಯಾರ ತಯಾರಿಸುವುದು ಬಹಳ ಲಾಭದಾಯಕ ಹಾಗೂ ಆಕರ್ಷಕವಾದ ಉದ್ಯಮವು. ಆದರೆ ಅದರಲ್ಲಿ ಎಷ್ಟು ಜನ ದುಡಿಯಬಹುದು? ಲಕ್ಷಾಂತರ ಹಳ್ಳಿಗರಿಗೆ ಅದು ಉಪಯುಕ್ತವೇ? ಆದರೆ ಹಳ್ಳಿಗರು ತಮ್ಮ ಪೂರ್ವಜರಂತೆ ಬದುಕು ಸಾಗಿಸಿ ಹತ್ತಿದರೆ, ತಮ್ಮ ಬಿಡುವಿನ ಸದುಪಯೋಗ ಮಾಡಿಕೊಳ್ಳತೊಡಗಿದರೆ, ಸಹಜವಾಗಿ ಎಲ್ಲ ಉದ್ಯಮಗಳ ಪುನರುಜ್ಜೀವನವಾಗುತ್ತದೆ. ಸಾರ್ವತ್ರಿಕವಾಗಬಲ್ಲ ಉದ್ಯೋಗ ನೂಲುವುದೊಂದೇ ಎಂಬುದನ್ನು ನಾವು ತಿಳಿಯಬೇಕು. ಅದನ್ನು ಬಿಟ್ಟು, ಹಳ್ಳಿಗರಿಗಾಗಿ ಎಲ್ಲ ಬಗೆಯ ಉದ್ಯೋಗಗಳ ಪಟ್ಟಿಯನ್ನೇ ತಯಾರಿಸಿ ಏನನ್ನೂ ಸಾಧಿಸುತ್ತಿದ್ದಿಲ್ಲ. ಎಲ್ಲರೂ ನೂಲುವುದನ್ನೇ ಮಾಡಲಿಕ್ಕಿಲ್ಲ. ಬೇರೆ ಉದ್ಯೋಗಗಳನ್ನು ಮಾಡಬೇಕೆನ್ನುವವರು ಮಾಡಲಿ. ಆದರೆ ರಾಷ್ಟ್ರದ ಸಾಧನ ಸಂಪತ್ತನ್ನು ನೂಲುವುದೊಂದರ ಮೇಲೆ ಕೇಂದ್ರೀಕರಿಸಬೇಕು. ನೂಲುವುದೊಂದೇ ಬಹುಸಂಖ್ಯಾತರು ಮಾಡಬಹುದಾದ ಉದ್ಯೋಗವಾಗಿದೆ.

(ಯ. ಇ., 1926)

* * *

ದುಡಿಮೆಯ ಗೌರವ :- ಹಳ್ಳಿಗಳಿಗೆ ಹೋದಾಗ ಅಲ್ಲಿಯ ಜನರ ಕರುಣಾಜನಕ ಬಿಡುಗಣ್ಣ ನೋಟದಿಂದ ನನಗೆ ಅತೀವ ವ್ಯಥೆಯಾಗುತ್ತದೆ. ತಮ್ಮ ಎತ್ತುಗಳ ಜತೆಗೆ ದುಡಿದು ದುಡಿದು, ಬೇರೆ ಯಾವ ಕೆಲಸವೂ ಇಲ್ಲದೆ, ಅವರೂ ಹೆಚ್ಚು ಕಡಿಮೆ ಆ ಮೂಕ ಪ್ರಾಣಿಗಳಂತಾಗಿದ್ದಾರೆ. ಲಕ್ಷಾಂತರ ಜನ ತಮ್ಮ ಕೈಗಳನ್ನು ಕೈಗಳಂತೆ ಉಪಯೋಗಮಾಡುವುದನ್ನು ಬಿಡಹತ್ತಿದ್ದಾರೆ. ಎಂಥ ದುರಂತ! ತಾನು ಕೊಟ್ಟ ಕಾಣಿಕೆಗಳನ್ನು ಹೀಗೆ ವ್ಯರ್ಥ ಹಾಳು ಮಾಡುವುದನ್ನು ಕಂಡು ನಿಸರ್ಗವು ನಮ್ಮ ಮೇಲೆ ಪ್ರಚಂಡ ಸೇಡು ತೀರಿಸಿಕೊಳ್ಳಹತ್ತಿದೆ. ನಾವು ಇತರ ಪ್ರಾಣಿಗಳಿಗಿಂತ ಹೆಚ್ಚಿನವರೆಂದು

ಅನ್ನಿಸಿಕೊಳ್ಳಲು ನಮ್ಮಲ್ಲಿರುವ ಕೆಲವೇ ವಸ್ತುಗಳಲ್ಲಿ ಕೈಯೂ ಒಂದಾಗಿದೆ. ಅದರ ಪೂರ್ಣ ಉಪಯೋಗವನ್ನು ನಾವು ಮಾಡಿಕೊಳ್ಳುತ್ತಿಲ್ಲ. ನಮ್ಮಲ್ಲಿ ಅಸಂಖ್ಯರು ಕೈಗಳನ್ನು ಕಾಲಿನಂತೆಯೇ ಉಪಯೋಗಿಸುತ್ತಾರೆ. ಅದರ ಪರಿಣಾಮವಾಗಿ ನಮ್ಮ ದೇಹ ಮನಸ್ಸುಗಳೆರಡೂ ಕ್ಷಯಿಸಹತ್ತಿವೆ.

ಈ ಎಚ್ಚರಗೇಡಿತನದ ಪೋಲುಗಾರಿಕೆಯನ್ನು ತಡೆಯಲು ಚರಕವೊಂದೇ ಸಮರ್ಥವಿದೆ. ಅದಕ್ಕೆ ಬಹಳ ಹಣವಾಗಲೀ, ಬುದ್ಧಿಯಾಗಲೀ ಬೇಕಾಗಿಲ್ಲ. ಈ ಬಗೆಯ ಜೀವನದಿಂದ ಉದ್ಧಾರವಾಗಬೇಕಾದರೆ ಮನೆಮನೆಯಲ್ಲೂ ಚರಕ ತಿರುವಬೇಕು. ಹಳ್ಳಿ ಹಳ್ಳಿಯಲ್ಲಿ ನೇಕಾರಿಕೆ ತಲೆಯೆತ್ತಬೇಕು. ಅದರ ಜೊತೆಗೆ ನಮ್ಮ ಗ್ರಾಮೀಣ ಕಲೆ ಚಿಗುರುವುದು, ಹಳ್ಳಿಯ ಹಾಡು ಹೊಮ್ಮುವುದು. ಅರೆಹೊಟ್ಟೆ ದಿನಹಾಕುವ ದೇಶದಲ್ಲಿ ಧರ್ಮ, ಕಲೆ, ಸಂಘಟನೆಗಳೇನೂ ಇರಲಾರವು.

(ಯ. ಇ., 1926)

* * *

ಖಾದಿಯು ಬಹು ದೊಡ್ಡ ಧ್ಯೇಯ ಸಾಧಿಸುತ್ತದೆ. ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ನಿರುದ್ಯೋಗಿಯಾಗಿರುವ ಲಕ್ಷಾಂತರ ಜನರಿಗೆ ಅದು ಕೆಲಸ ಒದಗಿಸುತ್ತದೆ; ನೂಲುವುದರಿಂದ ದೊರೆಯುವ ಉತ್ಪನ್ನವನ್ನು ಬಿಟ್ಟರೂ ಆ ಕೆಲಸವೇ ಅವರಿಗೆ ಪ್ರತಿಫಲವಾಗಿ ಪರಿಣಮಿಸುತ್ತವೆ. ಯಾಕೆಂದರೆ, ಲಕ್ಷಾಂತರ ಜನ ನಿರುದ್ಯೋಗಿಯಾಗಿಬಿಟ್ಟರೆ ಅವರು ಆಧ್ಯಾತ್ಮಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸಾಯುತ್ತಾರೆ. ಚರಕವು ಅಸಂಖ್ಯ ಬಡ ಸ್ತ್ರೀಯರ ಗೌರವವನ್ನು ಉಳಿಸುತ್ತದೆ, ಹೆಚ್ಚಿಸುತ್ತದೆ. ಆದ್ದರಿಂದ ಗಿರಣಿ ಬಟ್ಟೆಯನ್ನು ಪುಕ್ಕಟೆಯಾಗಿ ಕೊಟ್ಟರೂ ಜನರು ತಮ್ಮ ಒಳಿತಿಗಾಗಿ ಅದನ್ನು ಸ್ವೀಕರಿಸಬಾರದು. ಅವರ ಪರಿಶ್ರಮದ ಫಲವಾದ ಖಾದಿಯಿಂದಲೇ ಅವರ ಕ್ಷೇಮ.

(ಹ., 1938)

* * *

ಹಳ್ಳಿಗಳ ಪುನರುಜ್ಜೀವನ :- ಚರಕವು ಬಡವರ ಬಾಳುವೆಯ ಆಶಾಕಿರಣವಾಗಿ ನನಗೆ ತೋರುತ್ತದೆ. ಚರಕ ಬಿಟ್ಟೇ ಜನತೆಯ ಸ್ವಾತಂತ್ರ್ಯ ಹೋಯಿತು. ಬೇಸಾಯಕ್ಕೆ ಪೂರಕವಾಗಿ ಚರಕವು ಒಕ್ಕಲುತನಕ್ಕೆ ಗೌರವವನ್ನು ತಂದುಕೊಟ್ಟಿತು. ಅದು ವಿಧವೆಯರ ಗೆಳತಿಯಾಗಿ ಅವರ ಮನಸ್ಸಿಗೆ ಶಾಂತಿ ಕೊಟ್ಟಿತ್ತು. ನೂಲುವುದರ ಜತೆಗೆ ಹತ್ತಿ ಅರೆಯುವುದು, ಹಿಂಜುವುದು, ಉಂಕಿ ಮಾಡುವುದು, ಗಂಜಿ ಹಾಕುವುದು, ಬಣ್ಣ ಹಾಕುವುದು, ನೇಯುವುದು- ಇವೆಲ್ಲ ನಡೆಯುತ್ತಿದ್ದುದರಿಂದ ಹಳ್ಳಿಗಳಲ್ಲಿ ನಿರುದ್ಯೋಗವಿದ್ದಿಲ್ಲ. ಹಳ್ಳಿಯ ಬಡಿಗ, ಕಮ್ಮಾರರಿಗೂ ತುಂಬ ಕೆಲಸ ಸಿಗುತ್ತಿತ್ತು. ಹೀಗಾಗಿ ಏಳು ಲಕ್ಷ ಹಳ್ಳಿಗಳು ಸ್ವಯಂಪೂರ್ಣವಾಗಿದ್ದವು. ಚರಕದ ಜೊತೆಗೇ ಎಣ್ಣೆಯ ಗಾಣ ಮೊದಲಾದ ಗ್ರಾಮೋದ್ಯೋಗಗಳೂ ಹೋದವು. ಅವುಗಳ ಸ್ಥಳದಲ್ಲಿ ಬೇರೆ ಉದ್ಯೋಗಗಳಾವುವೂ ಬರಲಿಲ್ಲ. ಹೀಗಾಗಿ ಹಳ್ಳಿಗಳ ದಂಧೆ, ಅಲ್ಲಿಯವರ ಕ್ರಿಯಾಶಕ್ತಿ ಹಾಗೂ ಆ ಉದ್ಯೋಗಗಳಿಂದ ಬರುತ್ತಿದ್ದ ಉತ್ಪನ್ನ-ಎಲ್ಲವೂ ನಿರ್ನಾಮವಾದವು.

ಇತರ ಎಷ್ಟೋ ದೇಶಗಳಲ್ಲೂ ಕೈಗಾರಿಕೆಗಳು ನಷ್ಟವಾದವೆಂಬ ಸಾಮ್ಯದಿಂದ ನಮಗೇನೂ ಉಪಯೋಗವಾಗದು. ಯಾಕೆಂದರೆ ಅಂಥ ವಿದೇಶಗಳಲ್ಲಿ ಆ ನಷ್ಟಭರ್ತಿ ಮಾಡಿಕೊಳ್ಳಲು ಇತರ ಸೌಕರ್ಯಗಳಿದ್ದವು. ನಮ್ಮ ದೇಶದಲ್ಲಿ ಮಾತ್ರ ಹಾಗಿಲ್ಲ. ಔದ್ಯಮೀಕರಣವನ್ನು ಸಾಧಿಸಿದ ಪಶ್ಚಿಮದ ದೇಶಗಳು ಇತರ ದೇಶಗಳನ್ನು ತಿಳಿದುಕೊಳ್ಳಹತ್ತಿದವು. ನಮ್ಮ ದೇಶವು ಸ್ವತಃ ಸುಲಿಗೆಗೆ ಒಳಗಾದ ದೇಶ. ಆದ್ದರಿಂದ ನಮ್ಮ ಹಳ್ಳಿಗಳು ಪೂರ್ವಸ್ಥಿತಿಗೆ ಬರಬೇಕಾಧರೆ ಚರಕದ ಪುನರುಜ್ಜೀವನವೊಂದೇ ಹಾದಿ. ಈ ಕಾರ್ಯಕ್ಕೆ ತಿಳುವಳಿಕೆ ಹಾಗೂ ರಾಷ್ಟ್ರಾಭಿಮಾನವುಳ್ಳ ಚರಕದ ಸಂದೇಶವನ್ನು ಸಾರಿ ಅಲ್ಲಿಯವರ ನಿಸ್ತೇಜ ಕಣ್ಣುಗಳಲ್ಲಿ ಆಸೆಯ ಕಿರಣವನ್ನೂ, ಬೆಳಕನ್ನೂ ತಂದುಕೊಡುವ ಒಂದೇ ಒಂದು ಧ್ಯೇಯದಿಂದ ದುಡಿಯಬೇಕು. ಇದು ಭಾರೀ ಕೆಲಸ. ಆದರೆ ಇದರಿಂದ ಸದ್ದಿಲ್ಲದ ಕ್ರಾಂತಿಯಾಗುವುದು ಖಂಡಿತ.

ಇಪ್ಪತ್ತು ವರ್ಷಗಳ ಖಾದೀ ಕೆಲಸದ ಅನುಭವವು ನನ್ನ ವಿಚಾರಸರಣಿ ಸರಿಯಾಗಿದೆಯೆಂದು ಹೇಳುತ್ತದೆ. ಬಡ ಹಿಂದೂ ಮುಸಲ್ಮಾನರಿಗೆ ಸಮನಾಗಿ ಚರಕವು ಸಹಾಯ ನೀಡಿದೆ. ಯಾವ ಆಡಂಬರವೂ ಇಲ್ಲದೆ ಸುಮಾರು

ಐದು ಕೋಟಿ ರೂಪಾಯಿಗಳನ್ನು ಲಕ್ಷಾಂತರ ಹಳ್ಳಿಯ ಕೆಲಸಗಾರರ ಕೈಗೆ ದೊರಕಿಸಿಕೊಡಲಾಗಿದೆ.

(ಹ., 1940)

* * *

ಅಹಿಂಸೆಯ ಸಂಕೇತ :– 1919ರಲ್ಲಿ ಭಾರತದ ಸ್ವಾತಂತ್ರ್ಯ ಪ್ರೇಮಿಗಳಿಗೆ ಸ್ವರಾಜ್ಯಕ್ಕೆ ಅಹಿಂಸೆಯೇ ಮಾರ್ಗವೆಂದೂ ಚರಕವು ಅಹಿಂಸೆಯ ಸಂಕೇತವೆಂದೂ ತಿಳಿಸಲಾಯಿತು. 1921ರಲ್ಲಿ ರಾಷ್ಟ್ರದ ಬಾವುಟದ ಮೇಲೆ ಚರಕವು ಹೆಮ್ಮೆಯ ಸ್ಥಾನ ಪಡೆಯಿತು. ಆದರೆ ಅಹಿಂಸೆಯ ಹೃದಯಾಂತರಾಳದವರೆಗೆ ಹೋಗಲಿಲ್ಲ. ಹಾಗೆಯೇ ಚರಕವೂ ತನ್ನ ಸ್ಥಾನವನ್ನು ಪಡೆಯಲಿಲ್ಲ. ಕಾಂಗ್ರೆಸ್ಸಿಗರಲ್ಲಿ ಅಹಿಂಸೆಯ ಬಗ್ಗೆ ಅಚಲ ವಿಶ್ವಾಸ ಬೆಳೆಯುವವರೆಗೂ ಪರಿಸ್ಥಿತಿ ಹೀಗೇ ಉಳಿಯುವುದು.

(ಹ., 1940)

* * *

ಚರಕವು ವ್ಯಾಪಾರೀ ಯುದ್ಧದ ಸಂಕೇತವಲ್ಲ. ಶಾಂತಿಯ ಚಿಹ್ನೆ, ವಿಶ್ವದ ಯಾವ ದೇಶವನ್ನೂ ಅದು ಕೆಟ್ಟ ದೃಷ್ಟಿಯಿಂದ ನೋಡುವುದಿಲ್ಲ. ಸೌಹಾರ್ದ ಸ್ವಾವಲಂಬನದ ಸಂದೇಶವನ್ನು ಅದು ಸಾರುತ್ತದೆ. ವಿಶ್ವಶಾಂತಿಗೆ ಭಂಗ ತರುವ ಜಲಪಡೆಗಳ ರಕ್ಷಣೆಯೇನೂ ಅದಕ್ಕೆ ಬೇಕಾಗಿಲ್ಲ. ತಂತಮ್ಮ ಮನೆಗಳಲ್ಲಿ ಅಡಿಗೆ ಮಾಡಿಕೊಳ್ಳುವಂತೆ, ತಮ್ಮ ಬಟ್ಟೆಗಾಗಿ ನೂಲುವೆವೆಂಬ ಜನತೆಯ ಧಾರ್ಮಿಕ ನಿರ್ಧಾರ ಮಾತ್ರ ಅದಕ್ಕೆ ಬೇಕು. ನನ್ನ ಹಲವಾರು ತಪ್ಪು–ತಡೆಗಳಿಗಾಗಿ ನಾಳಿನ ಪೀಳಿಗೆಯು ನನ್ನನ್ನು ಶಪಿಸಬಹುದು. ಆದರೆ ಚರಕವನ್ನು ಪುನರುಜ್ಜೀವನಗೊಳಿಸಲು ಸೂಚಿಸಿದ್ದಕ್ಕಾಗಿ ಅವರು ನನ್ನನ್ನು ಹರಸುವರೆಂಬ ವಿಶ್ವಾಸ ನನಗಿದೆ. ನನ್ನ ಸರ್ವಸ್ವವನ್ನೂ ಅದಕ್ಕಾಗಿ ಪಣವಿಡುತ್ತೇನೆ. ಚರಕವನ್ನು ತಿರುಗಿಸುವಾಗೆಲ್ಲ ಅದರ ಪ್ರತಿಯೊಂದು ಸುತ್ತಿನಲ್ಲಿ ಶಾಂತಿ, ಸೌಹಾರ್ದ, ಪ್ರೇಮಗಳ ಧಾರೆ ಹರಿಯುತ್ತದೆ.

(ಯ. ಇ., 1921)

* * *

ಜನತೆಯ ಹೃದಯದಲ್ಲಿ ಬೇರೂರಿದ ಸರಳತೆ, ಸಾಧುತ್ವಗಳನ್ನೇ ಆದರ್ಶವಾಗಿಟ್ಟುಕೊಂಡು, ಅದಕ್ಕನುಗುಣವಾದ ರಾಷ್ಟ್ರೀಯ ಜೀವನ ಸಾಗಿಸುವ. ಇಲ್ಲಿಯವರೆಗೆ ನಾನು ಹೇಳಿದ ತತ್ವಗಳಿಂದ ಅದು ಸಾಧ್ಯ. ಹಾಗಾದರೆ, ದುರ್ಬಲ ಜನಾಂಗಗಳನ್ನು ಸುಲಿದು, ಪ್ರಬಲ ಸೈನ್ಯಗಳಿಂದ ರಕ್ಷಿಸಲ್ಪಟ್ಟ, ಆದಿಭೌತಿಕ ನಾಗರಿಕತೆಯ ಮೇಲೆ ನಿಂತ ಸಾಮ್ರಾಜ್ಯಶಾಹಿತ್ವದ ಸೆಳೆತಕ್ಕೆ ನಾವು ಸಿಗಲಿಕ್ಕಿಲ್ಲ. ಅದರ ಬದಲಾಗಿ ಸಾಮ್ರಾಜ್ಯ ಶಾಹಿತ್ವವನ್ನೇ ಪರಿಶುದ್ಧಗೊಳಿಸಿ ಸಮಾನತೆಯ ತಳಹದಿಯ ಮೇಲೆ ರಾಷ್ಟ್ರಗಳ ಸಂಘವನ್ನೇ ರಚಿಸಬಹುದು. ಹಾಗಾದರೆ ಪ್ರತಿಯೊಂದು ರಾಷ್ಟ್ರವೂ ತನ್ನಲ್ಲಿರುವ ಅತ್ಯುತ್ತಮ ವಿಷಯಗಳನ್ನು ವಿಶ್ವಕ್ಕೆ ಅರ್ಪಿಸಬಹುದು; ಪ್ರಬಲ ರಾಷ್ಟ್ರಗಳು – ತಮ್ಮ ಸೈನ್ಯ ಬಲದಿಂದಲ್ಲ – ತ್ಯಾಗದಿಂದ ದುರ್ಬಲ ರಾಷ್ಟ್ರಗಳನ್ನು ರಕ್ಷಿಸಬಹುದು. ಚರಕದ ಸಂಪೂರ್ಣ ವಿಜಯದಿಂದಲೇ ಅಂಥ ಬದಲಾವಣೆ ಸಾಧ್ಯ. ಅನ್ನ–ಬಟ್ಟೆಗಳ ವಿಷಯದಲ್ಲಿ ಸ್ವಯಂಪೂರ್ಣವಾದ ಹೊರಗಿನ ಆಕರ್ಷಣೆ ಆಘಾತಗಳಿಗೆ ಬಲಿಬೀಳದ ಭಾರತವು ಇಂಥ ಸಂದೇಶವನ್ನು ಸಾರಬಲ್ಲದು.

(ಯ. ಇ., 1921)

* * *

"ಅಮೇರಿಕೆಗೆ ಚರಕದ ಸಂದೇಶವೇನಾದರೂ ಇದೆಯೆ? ಅದು ಅಣುಬಾಂಬನ್ನು ಎದುರಿಸುವ ಅಸ್ತ್ರವಾಗಬಹುದೆ?" ಎಂದು "ನ್ಯೂಯಾರ್ಕ್ ಪೋಸ್ಟ್" ಪತ್ರಿಕೆಯ ಮಿ. ಫ್ರೀಮನ್ ಕೇಳಿದರು.

"ಅಮೆರಿಕೆಗೆ ಇಡೀ ಜಗತ್ತಿಗೆ ಅದು ಸಾರುವ ಸಂದೇಶವಿದೆಯೆಂದು ನನಗೆ ಅನಿಸುತ್ತದೆ. ಆದರೆ ಭಾರತವು ಮೊದಲು ಚರಕವನ್ನು ತನ್ನ ಅಸ್ತ್ರವಾಗಿ ಮಾಡಿ ತೋರಿಸಬೇಕಾಗಿದೆ. ಇನ್ನೂ ಅದು ಆಗಿಲ್ಲ. ಆ ದೋಷವು ಚರಕದ್ದೇನೂ ಅಲ್ಲ; ಭಾರತದ ಹಾಗೂ ವಿಶ್ವದ ಮುಕ್ತಿ ಚರಕದಲ್ಲಿದೆ ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಭಾರತವು ಯಂತ್ರದ ಗುಲಾಮಗಿರಿ ಸ್ವೀಕರಿಸಿದರೆ ದೇವರೇ ಜಗತ್ತನ್ನು ಕಾಪಾಡಬೇಕು!

ಭಾರತದ ಧ್ಯೇಯವು ಉದಾತ್ತವಾಗಿದೆ. ಜಗತ್ತಿನಲ್ಲಿ ಶಾಂತಿ, ಮೈತ್ರಿಯನ್ನು ಸ್ಥಾಪಿಸುವುದೇ ಆ ಉದಾತ್ತ ಧ್ಯೇಯವಾಗಿದೆ. ಪರಿಷತ್ತುಗಳಿಂದ ಶಾಂತಿಸ್ಥಾಪನೆಯಾಗಲಾರದು. ಪರಿಷತ್ತುಗಳು ನಡೆಯುತ್ತಿರುವಾಗಲೇ ಶಾಂತಿಭಂಗವಾಗುತ್ತಿರುವುದನ್ನು ನಾವು ಕಾಣುತ್ತೇವೆ.

ಫ್ರೀಮನ್ : "ಸಾಕಷ್ಟು ತಿಳುವಳಿಕೆಯುಳ್ಳ ಮಾನವನಾಗಿ, ಅಮೇರಿಕನ್ನರಾಗಿ ಹೇಳುತ್ತೇನೆ; ಅನೇಕ ಅಮೇರಿಕನ್ನರು ಕೈಯಿಂದ ನೂಲುವವರನ್ನು ಹುಚ್ಚರೆಂದು ಕರೆದರೂ ಈ ದೇಶೆಯಲ್ಲಿ ಗಂಭೀರವಾಗಿ ವಿಚಾರ ಮಾಡುತ್ತಿರುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ನಾಗರಿಕತೆಯನ್ನು ಉಳಿಸುವಂತಹದ್ದೇನಾದರೂ ಕಂಡುಹಿಡಿಯಬೇಕಾಗಿದೆ. ಬದುಕು ಸರಳವಾಗಬೇಕಾಗಿದೆ."

ಗಾಂಧೀಜಿ : "ಬೇರೆ ಯಾವ ರೀತಿಯಿಂದಲೂ ಮಾನವನ ವ್ಯಕ್ತಿತ್ವ ಉಳಿಯಲಾರದು. 'ಸರ್ವೋದಯ" ಎಂಬ ಶಬ್ದದಲ್ಲಿ ಇದು ಅಡಕವಾಗಿದೆ. ಎಲ್ಲರಿಗೂ ಸಮಾನವಾದ ಸದವಕಾಶವಿರಬೇಕು. ಅದು ದೊರೆತರೆ ಪ್ರತಿಯೊಬ್ಬನಿಗೂ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಲು ಸಾಧ್ಯವಿದೆ. ಚರಕವು ಅದರ ಸಂಕೇತ."

"ಅಮೇರಿಕನ್ನರು ಚರಕ ತಿರುವಬೇಕೆ?"

"ತಿರುವಬೇಕು. ಇಲ್ಲಿಯೇ ಅದು ಭದ್ರವಾದನಕ ಅಲ್ಲಿಯವರು ಅದನ್ನು ಅಂಗೀಕರಿಸುವರೋ ಇಲ್ಲವೋ ಎಂದು ಹೇಳಲಾರೆ. ಭಾರತವು ತನ್ನ ಬಟ್ಟೆಗಾಗಿ ಚರಕವನ್ನು ಸ್ವೀಕರಿಸಿದರೆ ನಾನು ಈ ಕುರಿತು ಜಗತ್ತಿಗೆ ಹೇಳುವ ಅಗತ್ಯವಿಲ್ಲ. ತಂತಾನೇ ಜಗತ್ತು ಅದನ್ನು ಸ್ವೀಕರಿಸುವುದು. ಇಂದು ಭಾರತದ ಮೇಲೆ ವಿದೇಶೀ ಯಂತ್ರಗಳ ದಾಳಿಯೇ ನಡೆದಿದೆ. ಅದನ್ನು ಯಶಸ್ವಿಯಾಗಿ ಎದುರಿಸುವುದು ಪವಾಡವೇ ಅನ್ನಿಸಿತು. ಇಂದು ಎಲ್ಲವೂ ಚರಕದ ಸಂದೇಶಗಳಿಗೆ ವ್ಯತಿರಿಕ್ತವಾಗಿಯೇ ನಡೆದಿದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ."

"ಆದರೆ ನೀವೇನೂ ನಿರಾಶೆ ತಳೆದಿಲ್ಲ"

"ನಾವು ತಿಳಿದುದಕ್ಕಿಂತ ಹೆಚ್ಚಾಗಿ ನಮ್ಮೊಡನೆ ಇರುವ ಆ ಪರಾಶಕ್ತಿಯಲ್ಲಿ ನನಗೆ ನಂಬುಗೆಯಿರುವವರೆಗೂ ನಾನು ನಿರಾಶೆ ತಳೆಯಲಾರೆ."

ಔದ್ಯಮೀಕರಣ ಹಾಗೂ ಯಂತ್ರಗಳು

ಔದ್ಯಮೀಕರಣವನ್ನು ತಡೆಯಲು ಸಾಧ್ಯವೇ? : ಸರ್ವ ಉಜ್ವಲ ಖಾದೀ ಪ್ರೇಮಿಯ ಪತ್ರದ ಸಾರವನ್ನು ಕೆಳಗೆ ಕೊಡಲಾಗಿದೆ.

"ನನಗೆ ಖಾದಿಯಲ್ಲಿ ವಿಶ್ವಾಸವಿದೆ. ಖಾದಿಯ ಧ್ಯೇಯವು ನನಗೆ ನಿಚ್ಚಳವಾಗಿದೆ. ಅದು ಬಾಳುವೆಯನ್ನು ಸರಳಗೊಳಿಸುತ್ತದೆ, ಶುದ್ಧೀಕರಿಸುತ್ತದೆ; ಸೇವಾಭಾವನೆಯಿಂದ ಅದು ನಮ್ಮನ್ನು ಬಡವರೊಡನೆ ಸಂಬಂಧಿಸುತ್ತದೆ. ರಾಷ್ಟ್ರದ ದೇಹ ಆತ್ಮಗಳನ್ನು ಕೊಲ್ಲುತ್ತಿರುವ ಬಡತನದ ನಿವಾರಣೆಗೆ ಅದೇ ಒಂದು ಮಂತ್ರ. ಲಕ್ಷಾಂತರ ನಿರಕ್ಷರಿಗಳ ಮಟ್ಟಿಗೆ ದೇಹದ ಮಾತು ಬಿಟ್ಟರೆ ಆತ್ಮದ ಪ್ರಶ್ನೆಯೇ ಇಲ್ಲ. ಯೋಗಸಿದ್ಧಿ ಪಡೆದವರೂ ಯೋಗಾಭ್ಯಾಸಿಗಳೂ ಆತ್ಮದ ಬಗ್ಗೆ ಮಾತಾಡಬಹುದು. ಆದರೆ ಜನಸಾಮಾನ್ಯರಿಗೆ ದೇಹವನ್ನು ಬಿಟ್ಟು ಆತ್ಮದ ವಿಷಯ ಹೇಳುವುದು ಅಣಕವೆನಿಸುವುದು. ಯುರೋಪದಲ್ಲಿ ನಡೆಯುತ್ತಿರುವಂಥ ರಕ್ತಮಯ ಕ್ರಾಂತಿಯನ್ನು ತಡೆಯಲು ಚರಕದಿಂದಲೇ ಸಾಧ್ಯ. ಚರಕವು ಎಲ್ಲ ವರ್ಗಗಳ ಜನರನ್ನು ಕೂಡಿಸುತ್ತದೆ. ಭಾರತವು ಚರಕವನ್ನು ಹಿಡಿದಿರುವವರೆಗೆ ಆ ಬಗೆಯ ಕ್ರಾಂತಿಯಾಗಲಾರದು. ಈ ಸಂಗತಿಗಳಿಂದ ನನಗೆ ಚರಕವು ತೀರ ಅಗತ್ಯವೆಂದು ಮನವರಿಕೆಯಾಗಿದೆ. ಆದರೆ ಒಂದೇ ಒಂದು ತೊಂದರೆಯಿದೆ; ಈ ಯೋಜನೆಯು ಕಾರ್ಯಕತವಾಗಲು ಸಾಧ್ಯವೇ? ಅದು ಯಶಸ್ವಿಯಾದೀತೇ? ಮನೆಮನೆಯೆಲ್ಲವೂ ಪುನಃ ಚಕರವನ್ನು ಅದರ ಪುರಾತನ ಪವಿತ್ರ ಪೀಠದಲ್ಲಿ ಸ್ಥಾಪಿಸಲು ಸಾಧ್ಯವೇ? ಕಾಲವು ಬಹಳಷ್ಟು ಸರಿದುಹೋಗಿಲ್ಲವೇ? ಔದ್ಯಮೀಕರಣವು ನಿಸರ್ಗದ ಶಕ್ತಿಯಂತಿದೆಯೆಂದೂ ನಮಗೆ ಅದು ಬೇಕಾಗಿರಲಿ ಬಿಡಲಿ, ಭಾರತವು ಅದರಲ್ಲಿ ಮುಳುಗುವುದೆಂದೂ ಬರ್ಟ್ರಾಂಡ್ ರಸೆಲ್ ಹೇಳುತ್ತಾನೆ. ಔದ್ಯಮೀಕರಣಕ್ಕೆ ನಮ್ಮದೇ ಆದ ಮಾರ್ಗವನ್ನು ಕಂಡುಕೊಳ್ಳಬೇಕೆಂದು ಅವನಂತೆ ವಿಚಾರಿಸುವವರು ಹೇಳುತ್ತಾರೆ. ಅವರ ಹೇಳಿಕೆಯಲ್ಲಿ ಸತ್ಯಾಂಶವಿದೆ. ಔದ್ಯಮೀಕರಣವು ಜಗತ್ತನ್ನೇ ಕೊಚ್ಚಿಕೊಂಡು ಹೊರಟಿದೆ. ಭಾರತವು ಮಾತ್ರ ಪ್ರತ್ಯೇಕವಾಗುಳಿದು ಔದ್ಯಮೀಕರಣದ ಕಪಿಮುಷ್ಟಿಯಿಂದ ಜಾರಿಕೊಳ್ಳಲು ಸಾಧ್ಯವೇ?"

ಈ ಖಾದಿ ಪ್ರೇಮಿಯು ಈ ಬಗೆಯ ವಿಚಾರದ ಸೆಳವಿನಲ್ಲಿ ಅತಂತ್ರನಾಗಿ ಸಿಲುಕಿದುದು ಸೈತಾನನ ಹಳೆಯ ತಂತ್ರವೇ ಆಗಿದೆ. ಅವನು ಅರ್ಧ ಹಾದಿಯವರೆಗೆ ನಮ್ಮ ಜತೆಗೆ ಬರುತ್ತಾನೆ. ಥಟ್ಟನೆ ಮುಂದಿನ ಮಾರ್ಗಕ್ರಮಣ ನಿರರ್ಥಕವೆಂದು, ಮುಂದಿನ ಪ್ರಗತಿ ಅಸಾಧ್ಯವೆಂದು ಹೇಳಿ ಜಾರಿಕೊಂಡುಬಿಡುತ್ತಾನೆ. ಅವನು ಸದ್ಗುಣವನ್ನು ಹೊಗಳುತ್ತಾನೆ. ಆದರೆ ತತ್‌ಕ್ಷಣವೇ 'ಅದನ್ನು ಪಡೆಯುವ ಭಾಗ್ಯ ಮಾನವನದಲ್ಲ, ಅಂದುಬಿಡುತ್ತಾನೆ.

ಈ ಮಿತ್ರರಿಗೆ ಬಂದ ತೊಂದರೆಯನ್ನೇ ಸುಧಾರಕನಾದವನು ಹೆಜ್ಜೆ ಹೆಜ್ಜೆಗೂ ಎದುರಿಸಬೇಕಾಗುತ್ತದೆ. ಸಮಾಜದಲ್ಲಿ ಸುಳ್ಳು, ಮೋಸಗಳು ಸೇರಿಕೊಂಡಿಲ್ಲವೇ? ಆದರೂ ಸತ್ಯಕ್ಕೇ ಜಯವೆಂದು ನಂಬಿಕೊಂಡವರು ಸಂಪೂರ್ಣ ವಿಶ್ವಾಸದಿಂದ ಅದಕ್ಕೇ ಅಂಟಿಕೊಳ್ಳುತ್ತಾರೆ. ಸುಧಾರಕನಾದವನು ಕಾಲವು ತನ್ನ ವಿರುದ್ಧ ಹರಿಯಲಿಕ್ಕೆ ಬಿಡುವುದಿಲ್ಲ. ಔದ್ಯಮೀಕರಣವು ನಿಸರ್ಗದ ಶಕ್ತಿಯೆಂಬುದೇನೋ ನಿಜ. ಆದರೆ ನಿಸರ್ಗವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವ ಶಕ್ತಿ. ಅದರ ಪ್ರಾಬಲ್ಯವನ್ನು ಮೆಟ್ಟುವ ಶಕ್ತಿ ಮಾನವನಲ್ಲಿದೆ. ಯಾವ ಅಡೆತಡೆಗಳಿದ್ದರೂ ತನ್ನ ನಿರ್ಧಾರದಂತೆ ನಡೆಯಲು ಅವನ ಘನತೆ ಪ್ರೇರೇಪಿಸುತ್ತದೆ. ನಮ್ಮ ಪ್ರತಿನಿತ್ಯದ ಜೀವನವೂ ಇಂಥ ಗೆಲುವುಗಳಿಂದ ತುಂಬಿದೆ. ಒಕ್ಕಲಿಗನಿಗೆ ಈ ವಿಷಯ ಚೆನ್ನಾಗಿ ಗೊತ್ತಿದೆ.

ಅಲ್ಪಸಂಖ್ಯಾತರು ಬಹುಸಂಖ್ಯಾತರನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವುದೇ ಔದ್ಯಮೀಕರಣದ ತಿರುಳು. ಅದರಲ್ಲಿ ಆಕರ್ಷಕವಾದುದೇನೂ ಇಲ್ಲ. ಅನಿವಾರ್ಯವಾದುದೂ ಇಲ್ಲ. ಬಹುಸಂಖ್ಯಾತರು ಅಲ್ಪಸಂಖ್ಯಾತರ ಪುಸಲಾಯಿಸುವಿಕೆಗೆ "ಕೂಡದು" ಎಂದು ಹೇಳುವ ನಿಶ್ಚಯ ಮಾಡಿದರೆ ಸಾಕು, ಅಲ್ಪಸಂಖ್ಯಾತರ ಕುಚೋದ್ಯ ನಡೆಯದಾಗುತ್ತದೆ.

ಮನುಷ್ಯಸ್ವಭಾವದಲ್ಲಿ ವಿಶ್ವಾಸವಿಡುವುದು ಲೇಸು. ಆ ವಿಶ್ವಾಸವಿದೆಯೆಂದೇ ನಾನು ಬದುಕಿದ್ದೇನೆ. ಆದರೆ ಅದರಿಂದ ನಾನು ಇತಿಹಾಸದ ಘಟನೆಗಳಿಗೆ ಕುರುಡಾಗಬೇಕಾಗಿಲ್ಲ. ಕೊನೆಗೆ ಎಲ್ಲವೂ ಒಳಿತೇ ಆಗುವುದಾದರೂ ಈ

ಮುಂದೆ ಎಷ್ಟೋ ವ್ಯಕ್ತಿಗಳು ಕಾಲವಶರಾಗಿದ್ದಾರೆ; ದೇಶಗಳು ನಾಶವಾಗಿವೆ. ತಮ್ಮ ದುಷ್ಕರ್ಮಗಳ ಮೂಲಕ ದೇಶಗಳು ಹಾಳಾಗಿವೆಯೆಂಬುದಕ್ಕೆ ರೋಂ, ಗ್ರೀಸ್, ಬಾಬಿಲೋನ್, ಈಜಿಪ್ಟ್‌ಗಳೇ ಸಾಕ್ಷಿ. ಸ್ಪಷ್ಟವಾದ ಈ ಸಂಗತಿಯನ್ನು ವೈಜ್ಞಾನಿಕ ಬುದ್ಧಿಯುಳ್ಳ ಯೂರೋಪವು ತಿಳಕೊಂಡು ಕೆಲವು ಹೆಜ್ಜೆ ಹಿಂದೆ ಬರುವುದೆಂದೂ ಆಶಿಸುತ್ತೇನೆ. ಹೀಗೆ ಹೇಳಿದರೆ, ಪುರಾತನ ಕಾಲದ ಸರಳತೆಗೆ ಮರಳಿ ಬರುವ ಅಗತ್ಯವಿದೆಯೆಂದರ್ಥವಲ್ಲ. ಆದರೆ ಹಳ್ಳಿಯ ಜೀವನವೇ ಮುಖ್ಯವಾಗುವಂತೆ ಆದಿಭೌತಿಕ ಶಕ್ತಿಯು ಆಧ್ಯಾತ್ಮಿಕ ಶಕ್ತಿಗೆ ಬಾಗಿ ನಡೆಯುವಂತೆ ಪುನರ್‌ರಚಿಸಬೇಕಾಗುವುದು.

ಕೊನೆಯದಾಗಿ ಸುಳ್ಳು, ಸಾದೃಶ್ಯಗಳ ಬಲೆಗೆ ನಾವು ಬೀಳಕೂಡದು. ಯುರೋಪದ ಲೇಖಕರಿಗೆ ಅನುಭವ ಹಾಗೂ ಸರಿಯಾದ ಮಾಹಿತಿ ಇಲ್ಲದಿರುವುದು ಅವರ ತೊಂದರೆಯಾಗಿದೆ. ಅವರು ಯುರೋಪದ ಉದಾಹರಣೆಯಿಂದಲೇ ಸಾಮಾನ್ಯ ಸೂತ್ರ ನಿರೂಪಿಸಿದರೆ ಅವರಿಂದ ನಮಗೆ ಬಹಳಷ್ಟು ದೂರ ಮಾರ್ಗದರ್ಶನ ದೊರೆಯಲಾರದು. ಯುರೋಪದ ಹಾಗೂ ಭಾರತದ ಪರಿಸ್ಥಿತಿಗಳು ಭಿನ್ನವಾಗಿವೆ. ಅಲ್ಲಿ ಅವರಿಗೆ ಸತ್ಯವೆನಿಸಿದ್ದು ನಮಗೆ ಹಾಗೆ ಅನಿಸಲಿಕ್ಕಿಲ್ಲ. ಪ್ರತಿಯೊಂದು ರಾಷ್ಟ್ರಕ್ಕೂ ಅದರ ವೈಶಿಷ್ಟ್ಯಗಳಿವೆ, ವ್ಯಕ್ತಿತ್ವವಿದೆ. ಭಾರತಕ್ಕೂ ಇದೆ. ಈ ದೇಶದ ರೋಗಕ್ಕೆ ಮದ್ದು ಕೊಡಬೇಕಾದರೆ ಈ ದೇಶದ ನಾಡಿಯನ್ನು ನೋಡಬೇಕಾಗುತ್ತದೆ. ಯುರೋಪದಂತೆ ಭಾರತದಲ್ಲೂ ಔದ್ಯಮೀಕರಣವೆಂದರೆ ಅಸಾಧ್ಯವನ್ನು ಮಾಡಲು ಹೊರಟಂತೆಯೇ. ಭಾರತವು ಹಲವಾರು ಆಘಾತಗಳಿಗೆ ಸಿಕ್ಕು ಬದುಕಿದೆ. ಪ್ರತಿ ಆಘಾತದ ಕಲೆಯೂ ಅಳಿಸದಂತೆ ಇದ್ದರೂ ಇಲ್ಲಿಯತನಕ ಈ ದೇಶ ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ. ಹಲವು ನಾಗರಿಕತೆಗಳ ಪತನವನ್ನು ಕಂಡೂ ತಾನು ಮಾತ್ರ ಸೀದುಹೋಗದೇ ಉಳಿದಿರುವ ಕೆಲವೇ ದೇಶಗಳಲ್ಲಿ ಭಾರತವು ಒಂದು. ತನ್ನ ಮೂಢನಂಬಿಕೆ ದೋಷಗಳ ಉಚ್ಚಾಟನೆ ಮಾಡುವ ಸಾಮರ್ಥ್ಯ ಅದಕ್ಕಿದೆ. ತನ್ನ ಆರ್ಥಿಕ ಸಮಸ್ಯೆಗಳನ್ನು ಬಿಡಿಸಿಕೊಳ್ಳುವ ಶಕ್ತಿ ಈ ದೇಶಕ್ಕಿದೆ. ಅಂಥ ಶಕ್ತಿಯಲ್ಲಿರುವ ತನ್ನ ನಂಬುಗೆ ಇಂದಿನಷ್ಟು ಹಿಂದೆಂದೂ ಉಜ್ವಲವಾಗಿದ್ದಿಲ್ಲ.

(ಯ. ಇ., 1925)

* * *

ಔದ್ಯಮೀಕರಣ ಬೇಡ : ಹಿಂದೂಸ್ಥಾನವನ್ನು ಅಮೇರಿಕ, ಇಂಗ್ಲೆಂಡ್ ದೇಶಗಳಂತೆ ಮಾಡುವುದೆಂದರೆ, ಸುಲಿಗೆಗಾಗಿ ಬೇರೆ ದೇಶಗಳನ್ನೂ, ಜನಾಂಗಗಳನ್ನೂ ಹುಡುಕುವುದೆಂದೇ ಅರ್ಥ. ಇಲ್ಲಿಯತನಕ ಪಶ್ಚಿಮದ ದೇಶಗಳು ಯುರೋಪದ ಜನಾಂಗವನ್ನು ಬಿಟ್ಟು ಉಳಿದ ಜನಾಂಗಗಳನ್ನು ಸುಲಿಗೆಗಾಗಿ ಹಂಚಿಕೊಂಡಂತಿದೆ. ಹೊಸ ಜಗತ್ತಾದರೂ ಸಿಗುವಂತೆ ತೋರುವುದಿಲ್ಲ. ಪಶ್ಚಿಮವನ್ನು ಅನುಕರಿಸಿ ಹೊರಟರೆ ಭಾರತದ ಗತಿಯೇನಾಗಬೇಕು? ಔದ್ಯಮೀಕರಣ, ಸುಲಿಗೆಗಳಿಂದ ಪಶ್ಚಿಮಕ್ಕೆ ಚಿಟ್ಟು ಹಿಡಿದಿದೆ. ಅವರಿಗೇ ತಮ್ಮ ರೋಗವನ್ನು ಗುಣಪಡಿಸಿಕೊಳ್ಳಲು ಬರದಿದ್ದಾಗ, ಔದ್ಯಮೀಕರಣಕ್ಕೆ ತೀರ ಹೊಸಬರಾದ ನಾವು ಅದನ್ನು ನಿವಾರಿಸಿಕೊಂಡು ಹೋಗುವ ಬಗೆಯೆಂತು? ಈ ಔದ್ಯಮೀಕರಣದ ನಾಗರಿಕತೆಯು ಒಂದು ರೋಗವೇ ಆಗಿದೆ. ಯಾಕೆಂದರೆ ಅದು ಕೆಡಕಿನಿಂದ ತುಂಬಿದೆ. ಆಕರ್ಷಕ ಪದಾರ್ಥಗಳಿಗೆ ನಾವು ಮೋಸಹೋಗಕೂಡದು. ಉಗಿಹಡಗು, ಟೆಲಿಗ್ರಾಫ್‌ಗಳೊಡನೆ ನನ್ನ ನ್ಯಾಯವಿಲ್ಲ. ಔದ್ಯಮೀಕರಣದ ಆಧಾರವಿಲ್ಲದೆಯೇ ಅವು ಇರುವುದಾದರೆ ಇರಲಿ. ಅವೇ ನಮ್ಮ ಅಂತ್ಯ ಗುರಿಯಲ್ಲ. ಉಗಿಹಡಗು, ಟೆಲಿಗ್ರಾಫ್‌ಗಳಿಗಾಗಿ ನಾನು ಸುಲಿಗೆಗೆ ಒಳಗಾಗಕೂಡದು. ಮಾನವನ ಶಾಶ್ವತ ಕ್ಷೇಮಕ್ಕೆ ಅವು ಅವಶ್ಯಕಗಳಲ್ಲ. ತನ್ನ ಬುಡವನ್ನು ಭದ್ರವಾಗಿಟ್ಟುಕೊಂಡದ್ದರಿಂದ ಭಾರತವು ಬೇರೆ ನಾಗರಿಕತೆಗಳ ಆಘಾತವನ್ನು ತಡಕೊಂಡು ಬಂದಿದೆ. ಬದಲಾವಣೆಗಳನ್ನೇನೂ ಈ ದೇಶವು ಮಾಡಿಕೊಂಡಿಲ್ಲವೆಂದಲ್ಲ. ಮಾಡಿಕೊಂಡ ಬದಲಾವಣೆಗಳಿಂದ ಈ ದೇಶದ ಅಭ್ಯುದಯವಾಗಿದೆ. ಔದ್ಯಮೀಕರಣಕ್ಕೆ ತಿರುಗುವುದೆಂದರೆ ನಾಶವನ್ನು ಆಮಂತ್ರಿಸಿದಂತೆಯೇ. ಇಂದಿನ ಸಂಕಟವು ಸಹಿಸಲಸಾಧ್ಯವಾಗಿದೆ. ಈ ದಟ್ಟ ದಾರಿದ್ರ್ಯ ತೊಲಗಬೇಕು. ಆದರೆ ಔದ್ಯಮೀಕರಣವು ಅದಕ್ಕೆ ಉಪಾಯವಲ್ಲ.

ಭಾರತದ ಭಾಗ್ಯವು ಪಶ್ಚಿಮದ ರಕ್ತರಂಜಿತ ಮಾರ್ಗದಿಂದ ಬರಲಾರದು; ಸರಳವಾದ ಶಾಂತಿಯುತವಾದ ಅಹಿಂಸಾ ಮಾರ್ಗದಿಂದಲೇ ಬರುವುದು. ಆದ್ದರಿಂದ ಅಸಹಾಯಕವಾಗಿ 'ಪಶ್ಚಿಮದಿಂದ ನುಗ್ಗಿ ಬರುವ ಔದ್ಯಮೀಕರಣದಿಂದ ಪಾರಾಗಲಾರೆ'ನೆಂದು ಭಾರತವು ಹೇಳಕೂಡದು. ತನಗಾಗಿಯೂ ಜಗತ್ತಿಗಾಗಿಯೂ ಅದನ್ನು ಎದುರಿಸಲು ಈ ದೇಶವು ಶಕ್ತವಾಗಬೇಕು.

ಔದ್ಯಮೀಕರಣವು ಮಾನವತೆಗೆ ಒಂದು ಶಾಪವಾಗಿ ಪರಿಣಮಿಸುವುದೆಂಬ ಭೀತಿ ನನಗಿದೆ. ಒಂದು ರಾಷ್ಟ್ರವನ್ನು ಸುಲಿದು ಇನ್ನೊಂದು ರಾಷ್ಟ್ರವು ಸದಾಕಾಲ ಬಾಳಲಾರದು. ಔದ್ಯಮೀಕರಣವು ಯಶಸ್ವಿಯಾಗಬೇಕಾದರೆ ವಿದೇಶೀ ಪೇಟೆಗಳು ಬೇಕು, ಪ್ರತಿಸ್ಪರ್ಧಿಗಳಿರಬಾರದು, ವ್ಯಾಪಾರೀ ಸುಲಿಗೆ ನಡಿಸುವ ಶಕ್ತಿಯಿರಬೇಕು. ಈ ಅಂಶಗಳು ದಿನೇ ದಿನೇ ಕಡಿಮೆಯಾಗುತ್ತಿರುವುದರಿಂದಲೇ ಇಂಗ್ಲೆಂಡ್‌ನಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಹಿಂದೂಸ್ತಾನವು ಹಾಕಿದ ಬಹಿಷ್ಕಾರವು ಇಂಗ್ಲೆಂಡ್‌ಗೆ ಇರುವೆ ಕಡಿತದಷ್ಟೇ ಆಗಿದೆ. ಇಂಗ್ಲೆಂಡ್‌ದಂಥ ದೇಶದ ಸ್ಥಿತಿಯೇ ಹಾಗಾದರೆ ಭಾರತದಂಥ ವಿಶಾಲ ದೇಶಕ್ಕೆ ಔದ್ಯಮೀಕರಣದಿಂದ ಹಿತವಾಗುವುದೆಂತು? ಔದ್ಯಮೀಕರಣವಾದರೆ ಈ ದೇಶವೂ ಬೇರೆ ದೇಶಗಳನ್ನು ಸುಲಿಯ ಹತ್ತಬೇಕಾಗುವುದು. ಹಾಗಾಗುವುದು ಇತರ ದೇಶಗಳಿಗೆ ಕೇಡು, ಜಗತ್ತಿಗೇ ವಿಪತ್ತು, ಹೀಗಿರಲು ಔದ್ಯಮೀಕರಣ ಕೈಗೊಳ್ಳುವುದನ್ನೇಕೆ ವಿಚಾರಿಸಲಿ? ಮೂವತ್ತು ಕೋಟಿ ಜನರಿಗೆ ನಾವು ಕೆಲಸ ಕೊಡಬಹುದು. ಆದರೆ ಮೂವತ್ತು ಲಕ್ಷ ಜನರಿಗೆ ಕೆಲಸ ಒದಗಿಸಲಾರದೆ ಇಂಗ್ಲೆಂಡ್ ದೇಶವು ಒದ್ದಾಡುತ್ತದೆ. ಎಂಥಾ ಪ್ರಸಂಗ! ಔದ್ಯಮೀಕರಣದ ಭವಿಷ್ಯವು ಕತ್ತಲು. ಇಂಗ್ಲೆಂಡ್‌ಗೆ ಅಮೆರಿಕಾ, ಜಪಾನ್, ಫ್ರಾನ್ಸ್ ಜರ್ಮನಿಗಳು ಯಶಸ್ವೀ ಪ್ರತಿಸ್ಪರ್ಧಿಗಳಾಗಿವೆ. ಭಾರತವು ಎಚ್ಚೆತ್ತಂತೆ ವಿಪುಲ ಜನಸಂಪತ್ತು ನಿಸರ್ಗಸಂಪತ್ತುಗಳುಳ್ಳ ದಕ್ಷಿಣ ಆಫ್ರಿಕವೂ ಏಳುತ್ತದೆ. ಆಫ್ರಿಕದ ಬಲಾಢ್ಯ ಜನಾಂಗಗಳ ಎದುರು ಇಂಗ್ಲೀಷರು ಕುಳ್ಳರಾಗಿ ತೋರುವರು. ಏನೇ ಅಂದರೂ ಆಫ್ರಿಕನ್ನರು ಉದಾರಭಾವನೆಯುಳ್ಳ, ಕಾಡುಜನರೆಂದು ನಾವು ಹೇಳಬಹುದು. ಅವರು ಉದಾರರರಂತೂ ಇದ್ದೇ ಇದ್ದಾರೆ. ಆದರೆ 'ಕಾಡು' ಜನರಲ್ಲ. ಕೆಲವೇ ವರ್ಷಗಳಲ್ಲಿ ಇಂಗ್ಲೆಂಡ್‌ನ ಒಡವೆಗಳನ್ನು ಒಟ್ಟಲಿಕ್ಕೆ ಅಲ್ಲಿ ಸ್ಥಳ ಸಿಗಲಾರದು. ಪಶ್ಚಿಮದ ದೇಶಗಳಿಗೇ ಔದ್ಯಮೀಕರಣದ ಭವಿಷ್ಯವು ಕತ್ತಲಾಗಿ ಕಂಡರೆ ಭಾರತಕ್ಕೆ ಅದು ಇನ್ನೂ ಹೆಚ್ಚು ಕತ್ತಲಲ್ಲವೇ?

(ಯ. ಇ., 1931)

* * *

ಔದ್ಯಮೀಕರಣದಿಂದ ನಿರುದ್ಯೋಗ : ನಿರುದ್ಯೋಗಿಗಳಾದ ಲಕ್ಷಾಂತರ ಜನ ಸುಲಭವಾಗಿ ಮಾಡಬಹುದಾದ ಕೆಲಸವನ್ನು ಯಂತ್ರದಿಂದ ಮಾಡುವುದು ಅಪಾಯಕರ. ಹತ್ತೊಂಬತ್ತು ನೂರು ಮೈಲು ಉದ್ದ, ಹದಿನೈದುನೂರು ಮೈಲು ಅಗಲವಾದ ಈ ದೇಶದ ಏಳು ಲಕ್ಷ ಹಳ್ಳಿಗಳಲ್ಲಿಯ ಜನ ತಮ್ಮ ಅನ್ನವನ್ನು ತಾವು ಬೇಯಿಸಿಕೊಳ್ಳುವಂತೆ ತಮ್ಮ ಬಟ್ಟೆಯನ್ನು ತಾವೇ ತಯಾರಿಸಿಕೊಳ್ಳುವುದು ಯಾವಾಗಲೂ ಕ್ಷೇಮವೇ. ತಮ್ಮ ಜೀವನಕ್ಕೆ ಅವಶ್ಯವಾದ ವಸ್ತುಗಳ ಉತ್ಪಾದನೆ ಈ ಹಳ್ಳಿಗರ ಕೈಯಲ್ಲಿಲ್ಲದಿದ್ದರೆ, ಅನಾದಿಕಾಲದಿಂದಲೂ ಅನುಭೋಗಿಸಿದ ಸ್ವಾತಂತ್ರ್ಯವನ್ನು ಅವರು ಕಳೆದುಕೊಳ್ಳಬೇಕಾಗುವುದು. ತಮ್ಮ ದೇಶದಲ್ಲಿ ಸತ್ಯವಾದದ್ದು ಈ ದೇಶದಲ್ಲೂ ಸತ್ಯವೆಂದು ವಿದೇಶದ ನಿರೀಕ್ಷಕರು ಆಳವಾಗಿ ವಿಚಾರಿಸದೆ ಹೇಳಿಬಿಡುತ್ತಾರೆ. ಈ ದೇಶದ ಸ್ಥಿತಿ ಹಲವಾರು ವಿಷಯಗಳಲ್ಲಿ ಪಶ್ಚಿಮದಕ್ಕಿಂತ ಭಿನ್ನವಾಗಿದೆ. ಪರಿಸ್ಥಿತಿಗನುಗುಣವಾಗಿ ಅರ್ಥಶಾಸ್ತ್ರದ ನಿಯಮಗಳನ್ನು ಅನ್ವಯಿಸಬೇಕಾಗುತ್ತದೆ.

ಯಂತ್ರದ ರೀತಿಯೇನೋ ಸುಲಭ. ಆದ್ದರಿಂದಲೇ ಅದು ಒಳಿತೆಂದು ಹೇಳಲಾಗದು. ತಗ್ಗಿನ ಜಾಗಕ್ಕೆ ಇಳಿದು ಹೋಗುವುದು ಸುಲಭವಾದರೂ ಅಪಾಯಕರ. ಕೈಯಿಂದ ನೂಲುವುದು ಕಠಿಣವಾದುದರಿಂದಲೇ ಕ್ಷೇಮಕರವೆಂದು ಈ ಸಂದರ್ಭದಲ್ಲಿ ಹೇಳಬಹುದು. ಯಂತ್ರದ ಹುಚ್ಚು ಹೀಗೇ ಮುಂದುವರಿದರೆ, ದೇವದತ್ತವಾದ ಸಜೀವ ಯಂತ್ರಗಳ ಉಪಯೋಗವನ್ನೇ ಮರೆತು, ದುರ್ಬಲರಾಗಿ ನಮ್ಮನ್ನು ನಾವೇ ಶಪಿಸಿಕೊಳ್ಳುವ ಹೊತ್ತು ಬರುತ್ತದೆ. ಆಟವಾಡಿ, ವ್ಯಾಯಾಮ ಮಾಡಿ ಜನಸಾಮಾನ್ಯರೆಲ್ಲ ತಮ್ಮ ಆರೋಗ್ಯ ಕಾಪಾಡಿಕೊಳ್ಳಲಾರರು. ಉಪಯುಕ್ತವಾದ, ಉತ್ಪನ್ನದಾಯಕವಾದ, ಶ್ರಮ ಬೀಳುವ ದುಡಿಮೆಯ ಬದಲಾಗಿ ನಿರುಪಯುಕ್ತವಾದ ಉತ್ಪನ್ನವನ್ನೇನೂ ಕೊಡದೆ ಖರ್ಚು ತಗಲುವ ಆಟಪಾಟಗಳಿಗೇಕೆ ಅವರು ಹೋಗಬೇಕು? ಬದಲಾವಣೆಗಾಗಿ, ಉಲ್ಲಾಸಕ್ಕಾಗಿ ಅವು ಇಂದು ಇವೆ. ನಾವು ಬೆಳೆಸಿದ ಅನ್ನವನ್ನುಂಡು; ಅದನ್ನು ಜೀರ್ಣಿಸಿಕೊಳ್ಳಲಿಕ್ಕಾಗಿ ಈ ಆಟ ವ್ಯಾಯಾಮದ ದಂಥೆ ಮಾಡುವ ಪ್ರಸಂಗ ಬಂದರೆ ವಿರಸವಾದೀತು.

ಭಾರತವು ಸ್ವಾವಲಂಬಿಯಾಗಿ ಹೊರಗಿನ ಆಕರ್ಷಣೆಗಳಿಗೆ ಒಳಗಾಗದೆ ನಿಂತಾಗ ಪಶ್ಚಿಮದ ಅಥವಾ ಪೂರ್ವದ ಯಾವ ಶಕ್ತಿಯೂ ಅದನ್ನು ದುರಾಶೆಯ ದೃಷ್ಟಿಯಿಂದ ನೋಡಲಾರದು. ಆಗ ಭಾರೀ ಸೈನ್ಯದ ವೆಚ್ಚವನ್ನು ಹೊರುವ ಪ್ರಮೇಯವಿರಲಾರದು. ಭಾರತದ ಆಂತರಿಕ ಆರ್ಥಿಕ ಸ್ಥಿತಿಯೇ ಅದರ ಕೊತ್ತಳವಾಗುವುದು.

(ಯ. ಇ., 1931)

* * *

ಭಾರತವು-ಅಂದರೆ ಈ ದೇಶದ ಜನತೆ ಬದುಕಬೇಕಾಗಿದೆ. ಇಲ್ಲಿ ಲಕ್ಷಾಂತರ ಜನ ಅರೆ ಉದ್ಯೋಗಿಗಳಾಗಿದ್ದಾರೆ. ಗ್ರಾಮಜೀವನವೇ ಇಲ್ಲಿ ಮುಖ್ಯವಾಗಿದ್ದರೂ ಬೇಸಾಯದ ಭೂಮಿ ತಲಾ ಎರಡು ಎಕರೆಗಳಷ್ಟು ಸಹ ಬೀಳುವುದಿಲ್ಲ. ಜಗತ್ತಿನಲ್ಲಿ ಬೇರೆ ಯಾವ ದೇಶಸ್ಥಿತಿಯೂ ಹೀಗಿಲ್ಲ. ಚರಕದ ಹಿಂದಿರುವ ಮಾನವ ಶಕ್ತಿಯನ್ನು ಬಿಟ್ಟು ಉಗಿಶಕ್ತಿಯಿಂದಲೋ ವಿದ್ಯುಚ್ಛಕ್ತಿಯಿಂದಲೋ ಈ ದೇಶಕ್ಕೆ ಬೇಕಾಗುವ ಬಟ್ಟೆಯನ್ನೆಲ್ಲ ತಯಾರಿಸುವುದೆಂದರೆ ನಿರುದ್ಯೋಗವನ್ನು ಇನ್ನಷ್ಟು ಹೆಚ್ಚಿಸಿದಂತೆಯೇ. ಭಾರತದಲ್ಲಿ ಔದ್ಯಮೀಕರಣವೆಂದರೆ ಲಕ್ಷಾಂತರ ಜನರ ಸರ್ವನಾಶವೇ ಆಗಿದೆ.

ಔದ್ಯಮೀಕರಣವನ್ನು ಚೆನ್ನಾಗಿ ಸಾಧಿಸಿಕೊಂಡ ಮೂಲಕ ಪ್ರತಿಯೊಬ್ಬ ಅಮೇರಿಕನ್ನರೂ ಮೂವತ್ತಾರು ಗುಲಾಮರಿಗೆ ಸಮನಾಗುವಷ್ಟು ಸಂಪತ್ತು ಗಳಿಸಿಕೊಂಡಿದ್ದಾನೆ. ಅಮೇರಿಕೆಯನ್ನೇ ನಾವು ಮಾದರಿಯಾಗಿಟ್ಟುಕೊಂಡು ಹೊರಟರೆ, ಪ್ರತಿಯೊಬ್ಬ ಭಾರತೀಯನಿಗೆ 36 ಕೋಟಿ ಜನರಲ್ಲಿ 30 ಕೋಟಿ ಜನ ಒಟ್ಟಿಗೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಅಥವಾ ಅಷ್ಟು ಜನರನ್ನು ಕೊಂದುಹಾಕಬೇಕು. ಕೆಲವು ಉತ್ಸಾಹಿ ರಾಷ್ಟ್ರಾಭಿಮಾನಿಗಳು ಹೀಗಾದರೂ ಅಡ್ಡಿಯಿಲ್ಲವೆನ್ನುತ್ತಾರೆ. ಅಷ್ಟೇ ಅಲ್ಲ, ಈ ಕ್ರಮಕ್ಕೆ ಸ್ವಾಗತ ಕೂಡ ನೀಡುತ್ತಾರೆ. ನಿರಾಯುಧರಾದ ನಡೆಯಲಿಕ್ಕೂ ಬಾರದಷ್ಟು ನಿಶ್ಶಕ್ತರಾದ 30 ಕೋಟಿ ಜನರಿಗಿಂತ, ತೃಪ್ತರಾದ, ಆಯುಧಸಜ್ಜಿತರಾದ ಒಂದು ಕೋಟಿ ಜನರಿರುವುದು ಲೇಸೆಂದು ಅವರು ಹೇಳುತ್ತಾರೆ. ಈ ತತ್ವಜ್ಞಾನಕ್ಕೆ ನಾನೇನೂ ಹೇಳಲಾರೆ.

ಹರಿಜನರ ಚಿಂತನೆಯಲ್ಲಿ ನಾನು ಮುಳುಗಿದ್ದೇನೆ. ಲಕ್ಷಾಂತರ ಹಳ್ಳಿಗರ ವಿಷಯವಾಗಿ ನನ್ನ ವಿಚಾರ ಹರಿಯುತ್ತದೆ. ದರಿದ್ರರ ಸುಖವನ್ನೇ ನನ್ನ ಸುಖ ಅವಲಂಬಿಸಿದೆ. ಅವರು ಬದುಕಿದ್ದರೆ ಮಾತ್ರ ನಾನು ಬದುಕಿರುತ್ತೇನೆ. ನನ್ನ ಜತೆಗೆ ಒಯ್ಯಬರುವಂತಹ, ಸುಲಭವಾಗಿ ತಯಾರಿಸಿಕೊಳ್ಳ ಬರುವಂತಹ ಚರಕದ ಕದಿರಿನ ಆಚೆಗೆ ನನ್ನ ಸಾಮಾನ್ಯವಾದ ಬುದ್ಧಿ ಹರಿಯುವುದಿಲ್ಲ.

ನನ್ನ ಮಿತ್ರರೊಬ್ಬರು ಕಳುಹಿಸಿದ ಪತ್ರಿಕೆಯ ಸುದ್ದಿಯನ್ನು ಇಲ್ಲಿ ಕೊಡುತ್ತೇನೆ:

"ಕೆಲವು ಉದ್ಯಮಗಳಲ್ಲಿಯ ನಿರುದ್ಯೋಗವನ್ನು ನೀಗಲು 'ನಾಝಿ'ಗಳು ಯಂತ್ರದ ಬಳಕೆಯನ್ನು ನಿಲ್ಲಿಸುವಂತೆ ಆಜ್ಞೆಮಾಡಿದ್ದಾರೆ. ಈ ನಿರೋಧವನ್ನು ಕುರಿತು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಹೀಗೆ ಹೇಳುತ್ತದೆ:- ಯಂತ್ರಗಳಿಂದ ನಿರುದ್ಯೋಗ ಹೆಚ್ಚುತ್ತದೆಯೆಂಬ ವಿಷಯದ ಮೇಲೆ ಬಹಳಷ್ಟು ಚರ್ಚೆ ನಡೆದಿದೆ. ಆದರೆ ಯಂತ್ರಗಳ ಬಳಕೆಯನ್ನು ನಿಲ್ಲಿಸುವ ಕ್ರಮ ಕೈಗೊಳ್ಳುವುದು ನಾಝಿಗಳ ಪಾಲಿಗೆ ಬಂತು. ಕೆಲವೇ ಕಾಲದ ಹಿಂದೆ ಜರ್ಮನಿಯು ಸಾಧಿಸಿದ ಯಾಂತ್ರೀಕರಣವನ್ನು ಶ್ಲಾಘಿಸುವಂತೆ ಜಗತ್ತಿಗೇ ತಿಳಿಸಲಾಗಿತ್ತು. ಆದರೆ ಈಗ ಅಲ್ಲಿಯ ಸರಕಾರವೇ ಯಂತ್ರದ ವಿರುದ್ಧ ಹೋರಾಟ ನಡೆಸಹತ್ತಿದೆ. ಅಲ್ಲಿ ಯಂತ್ರಗಳನ್ನೇ ಬಹಿಷ್ಕರಿಸುವ ಅಥವಾ ದುಡಿಯುವ ಅವಧಿಯನ್ನು ಕಡಿಮೆ ಮಾಡಿ ತನ್ಮೂಲಕ ಹೆಚ್ಚು ಜನರಿಗೆ ಕೆಲಸ ಒದಗಿಸುವ ಕ್ರಮ ನಡೆದಿದೆ. ಗಾಂಧಿಯವರು ನೂಲುವ ಹಾಗೂ ನೇಯುವ ಯಂತ್ರಗಳ ಬದಲು ಚರಕ ಮಗ್ಗಗಳನ್ನು ತರಲು ಯತ್ನಿಸುವ ರೀತಿಯಲ್ಲಿ ಜರ್ಮನಿಯ ಸಿಗರೇಟು ಹಾಗೂ ಗಾಜಿನ ಉದ್ಯಮಗಳಲ್ಲಿ ಪ್ರಯತ್ನ ನಡೆಸಿದೆ.

ಜರ್ಮನಿಯ ನೀತಿತತ್ವಗಳು ಮಧ್ಯಯುಗೀನವಾಗಿದ್ದರೆ ಅವರ ಅರ್ಥಶಾಸ್ತ್ರದ ತತ್ವಗಳೇಕೆ ಮಧ್ಯಯುಗೀನವಾಗಬಾರದು? ಎಂದು ಗಾರ್ಡಿಯನ್ ಪತ್ರಿಕೆಯು ಕೊನೆಗೊಳಿಸುತ್ತದೆ. ಇದಕ್ಕೆ ಉತ್ತರರೂಪವಾಗಿ ಓರ್ವ ಬಾತ್ಮೀದಾರನು ಅದೇ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾನೆ:

ಬಳಕೆಗೆ ಅಗತ್ಯವಿರುವ ಮಟ್ಟಕ್ಕೆ ಉತ್ಪಾದನೆಯ ವೇಗವನ್ನು ಇಳಿಸಲು ಬೇರೆ ಬೇರೆ ರೀತಿಯಿಂದ ಯತ್ನಿಸುವ ಹಿಟ್ಲರ್, ಗಾಂಧಿ ಮೊದಲಾದವರು

ಮಧ್ಯಯುಗದ ತಂತ್ರಗಳಿಗೆ ಹಿಂದಿರುಗುತ್ತಿರಬಹುದು. ಆದರೆ ಕೈಗಾರಿಕೆಗಳು ಕೀಳು ಗತಿಯವಲ್ಲ, ಕಾಡೂ ಅಲ್ಲ. ಪ್ರಗತಿಪರ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲೆಲ್ಲ ಅವನ್ನು ಕಲಿಸಲಾಗುತ್ತದೆ. ಯೋಗ್ಯ ವೇಳೆಯಲ್ಲಿ ನಿರುದ್ಯೋಗವನ್ನು ನಿವಾರಿಸದಿದ್ದರೆ, ಕ್ರಾಂತಿಯುದ್ಧಗಳಿಂದ ನಮ್ಮನ್ನೆಲ್ಲ ನಾಶಗೊಳಿಸಿ ಯಂತ್ರಯುಗವು ಕಳೆದುಹೋಗುವುದು. ಜನಸಾಮಾನ್ಯರ ಹಾಗೂ ಮೇಲ್ವರ್ಗದವರ ಸುಖಸಮೃದ್ಧಿಗಳನ್ನು ಸಾಧಿಸುವವರೆಗೆ ಯಂತ್ರಗಳು ಕ್ಷೇಮಕಾರಿ. ಲಕ್ಷಾಂತರ ಜನರನ್ನು ನಿರುದ್ಯೋಗ ಉಪವಾಸಗಳಿಗೆ ತಳ್ಳಿದರೆ ಅದು ಶಾಪವಾಗಿ ಪರಿಣಮಿಸುತ್ತದೆ. ಔದ್ಯಮೀಕರಣವನ್ನು ಬಹಳವಾಗಿ ಸಾಧಿಸಿದ ಪಶ್ಚಿಮ ದೇಶಗಳಲ್ಲಿ ಆ ಸ್ಥಿತಿಯಿದೆ. ಯಂತ್ರವು ಮಾನವನಿಗಾಗಿ ಇದೆ; ಮಾನವನು ಯಂತ್ರಕ್ಕಾಗಿ ಇಲ್ಲ. ಜನತೆಯ ಹಿತಸಾಧನಕ್ಕಾಗಿ ಅದು ಇರಬೇಕು. ಜನತೆಯ ಮೇಲೆ ಅಧಿಕಾರ ನಡೆಯಲಿಕ್ಕೆ ಅದನ್ನು ಬಿಡಕೂಡದು."

ಜರ್ಮನಿಯಲ್ಲಿ ಬಲಪ್ರಯೋಗದಿಂದ ಗ್ರಾಮೋದ್ಯೋಗಗಳ ಪುನರುಜ್ಜೀವನ ನಡೆದಿದೆಯೆಂಬುದು ಪ್ರಕೃತವಲ್ಲ. ಅತ್ಯುಚ್ಚವಾದ ತಾಂತ್ರಿಕ ನೈಪುಣ್ಯ ಗಳಿಸಿದ. ಔದ್ಯಮೀಕರಣದಲ್ಲಿ ಜಗತ್ತಿನಲ್ಲೇ ಹೆಸರಾದ ದೇಶವು ನಿರುದ್ಯೋಗ ನಿವಾರಣೆಗಾಗಿ ಗ್ರಾಮೋದ್ಯೋಗಗಳ ಕಡೆಗೆ ತಿರುಗಿದೆಯೆಂಬುದು ಪ್ರಕೃತ.

(ಹ., 1933)

* * *

ಮಾನವನು ತನ್ನ ಸಂಶೋಧನಾ ಶಕ್ತಿಯಿಂದ ತನ್ನ ಅಂಕೆಯಲ್ಲಿ ತಂದ ನೈಸರ್ಗಿಕ ಶಕ್ತಿಗಳಿಂದ ಮುಕ್ತಿ ಪಡೆಯಬೇಕೆಂದು ನನಗೆ ಉಪದೇಶ ದೊರೆಯುತ್ತಿದೆ. ಪ್ರಗತಿಪರ ಪಶ್ಚಿಮದಲ್ಲಿಯಂತೆ ಜನ ವಾಯು, ತೈಲ ಹಾಗೂ ವಿದ್ಯುತ್ ಶಕ್ತಿಗಳ ಉಪಯೋಗದಿಂದ ಪ್ರತಿಯೊಬ್ಬ ಅಮೇರಿಕನ್ನರಿಗೂ 33 ಗುಲಾಮರನ್ನು ಪಡೆಯುವ ಸಾಮರ್ಥ್ಯ ಬಂದಿದೆಯೆಂದು ಹೇಳುತ್ತಾರೆ.

ಭಾರತದಲ್ಲಿಯೂ ಅದೇ ಕ್ರಮವನ್ನು ಅನುಸರಿಸಿದರೆ ದೇಶದ ಪ್ರತಿಯೊಬ್ಬನೂ 33 ಪಟ್ಟು ಗುಲಾಮನಾಗುತ್ತಾನೆ.

ಮಾಡಲಿರುವ ಕಾರ್ಯಕ್ಕೆ ಕೆಲಸಗಾರರು ತೀರ ಕಡಿಮೆಯೆಂದೆನಿಸಿದಾಗ ಯಾಂತ್ರೀಕರಣ ಮಾಡಬಹುದು. ಭಾರತದಲ್ಲಿಯಂತೆ ಕೆಲಸಕ್ಕೆ ಅಗತ್ಯವಿರುವುದಕ್ಕಿಂತ ಹೆಚ್ಚು ಜನರಿದ್ದಾಗ ಯಾಂತ್ರೀಕರಣದಿಂದ ಕೇಡೊದಗುತ್ತದೆ. ನಮ್ಮ ಜನರಿಗೆ ಬಿಡುವು ದೊರಕಿಸುವುದು ನಮ್ಮ ಮುಂದಿರುವ ಸಮಸ್ಯೆಯಲ್ಲ. ವರ್ಷದಲ್ಲಿ ಆರು ತಿಂಗಳಷ್ಟು ಕಾಲ ನಿರುದ್ಯೋಗಿಗಳಾಗಿರುವ ಅವರಿಗೆ ಕೆಲಸ ಒದಗಿಸುವುದೇ ಸಮಸ್ಯೆಯಾಗಿದೆ. ಸಾಮಾನ್ಯವಾಗಿ ಪ್ರತಿಯೊಂದು ಗಿರಣಿಯೂ ನಮ್ಮ ಹಳ್ಳಿಗರಿಗೆ ಪರಿಣಮಿಸಿದೆಯೆಂದರೆ ವಿಚಿತ್ರವೆನಿಸಬಹುದು. ನಾನು ಅಂಕೆ ಸಂಖ್ಯೆಗಳನ್ನು ಕಲೆ ಹಾಕಿಲ್ಲ. ಸಾಮಾನ್ಯವಾಗಿ ಗಿರಣಿಯಲ್ಲಿ ದುಡಿಯುವ ಪ್ರತಿಯೊಬ್ಬ ಕೂಲಿಕಾರನು ಹತ್ತು ಹಳ್ಳಿಗರು ಮಾಡುವ ಕೆಲಸ ಮಾಡುತ್ತಾನೆ. ಅಂದರೆ, ಹತ್ತು ಹಳ್ಳಿಗರ ಹೊಟ್ಟೆಗೆ ಹೊಡೆದು ಇವನು ಹಳ್ಳಿಯಲ್ಲಿ ಗಳಿಸುತ್ತಿದ್ದುದಕ್ಕಿಂತ ಹೆಚ್ಚಿಗೆ ಸಂಪಾದಿಸುತ್ತಾನೆ. ನೂಲುವ ಹಾಗೂ ನೇಯುವ ಗಿರಣಿಗಳಿಂದ ಹೀಗೆ ಹಳ್ಳಿಗರ ಜೀವನೋಪಾಯವನ್ನು ಕಸಿದುಕೊಳ್ಳಲಾಗುತ್ತಿದೆ. ಹೀಗೆ ಮಾಡಿದರೇನಾಯಿತು? ಅದರಿಂದ ಒಳ್ಳೆಯದಾದ, ಅಗ್ಗವಾದ ಬಟ್ಟೆ ತಯಾರಾಗುತ್ತದೆಯೆಂದು ಹೇಳುವುದು ಸಮಂಜಸವಾಗಲಾರದು. ಸಹಸ್ರಾರು ಕೆಲಸಗಾರರನ್ನು ನಿರುದ್ಯೋಗಿಗಳನ್ನಾಗಿ ಮಾಡುವುದರಿಂದ ಅಗ್ಗವಾದ ಗಿರಣಿಯ ಬಟ್ಟೆಯು ಬಲು ತುಟ್ಟಿಯೆನಿಸುವ ಖಾದಿಗಿಂತ ತುಟ್ಟಿಯಾಗುತ್ತದೆ. ತನ್ನ ಬಟ್ಟೆಯನ್ನು ತಾನೇ ತಯಾರಿಸಿಕೊಳ್ಳುವ ಹಳ್ಳಿಗನಿಗೆ ಖಾದಿಯು ತುಟ್ಟಿಯಲ್ಲ.

(ಹ., 1934)

ಗಿರಣಿಯಲ್ಲಿ ನೂರಾರು ಜನರಿಗೆ ಕೆಲಸ ಸಿಗುತ್ತದೆ. ಅದರಿಂದ ಸಹಸ್ರಾರು ಜನರು ನಿರುದ್ಯೋಗಿಗಳಾಗುತ್ತಾರೆ. ಎಣ್ಣೆಯ ಗಿರಣಿಯಿಂದ ಡಬ್ಬಗಟ್ಟಲೆ ಎಣ್ಣೆ ತೆಗೆಯಬಹುದು. ಆದರೆ ಅದರಿಂದ ಸಾವಿರಾರು ಗಾಣಿಗರು ನಿರುದ್ಯೋಗಿಗಳಾಗುತ್ತಾರೆ. ಇದನ್ನು ನಾನು ವಿನಾಶಕಾರಿ ಶಕ್ತಿಯೆನ್ನುತ್ತೇವೆ. ಲಕ್ಷಾಂತರ ಜನರ ದುಡಿಮೆಯಿಂದಾಗುವ ಉತ್ಪಾದನೆಯು ಕ್ಷೇಮಕಾರಿ. ಸರಕಾರದ ಒಡೆತನದಲ್ಲಿಯೇ ಆದರೂ ಯಂತ್ರಗಳಿಂದಾಗುವ ರಾಶಿಗಟ್ಟಲೆ ತಯಾರಿಕೆಯಿಂದ ಹಿತವಿಲ್ಲ.

ಜನತೆಯ ಶ್ರಮವನ್ನುಳಿಸಿ ಅವರಿಗೆ ವ್ಯಾಸಂಗಕ್ಕಾಗಿ ಹೆಚ್ಚಿನ ಬಿಡುವನ್ನೇಕೆ ದೊರಕಿಸಕೂಡದು?– ಎಂದು ಕೇಳುತ್ತಾರೆ. ಬಿಡುವು ಒಳ್ಳೆಯದು, ಅಗತ್ಯವಾಗಿ ಬೇಕು. ಆದರೆ ಅದು ಕೆಲಮಟ್ಟಿಗೆ ಮಾತ್ರ ಬೆವರು ಹರಿಸಿ ತನ್ನ ಹೊಟ್ಟೆ ತುಂಬಿಕೊಳ್ಳುವಂತೆ ಮಾನವನನ್ನು ದೇವರು ನಿರ್ಮಿಸಿದ್ದಾನೆ. ನಮಗೆ ಬೇಕಾದುದನ್ನೆಲ್ಲ ನಮ್ಮ ಅನ್ನವನ್ನು ಕೂಡ – ಜಾದುಗಾರಿಕೆಯಿಂದ ಪಡೆಯಲು ಸಾಧ್ಯವಾದೀತೆಂಬ ಪ್ರತೀಕ್ಷಣೆಗೆ ನಾನು ಹೆದರುತ್ತೇನೆ.

(ಹ., 1933)

ಬಟ್ಟೆಯ ನಿರ್ಯಾತ : "ಭಾರತೀಯರು ತಮ್ಮ ಬಳಕೆಗಾಗಿ ಖಾದಿಯನ್ನು ತಯಾರಿಸಿಕೊಂಡು ಬಟ್ಟೆಯ ಹಾಗೂ ನೂಲಿನ ನಿರ್ಯಾತಕ್ಕಾಗಿ ತಮ್ಮ ಗಿರಣಿಗಳನ್ನೇಕೆ ನಡೆಸಿಕೊಂಡು ಹೋಗಬಾರದು? ಅದರಿಂದ ಹತ್ತಿ ಬೆಳೆಯುವವರಿಗೆ ಸಹಾಯವಾಗುವುದೆಂದು ನಿಮಗೆ ಅನಿಸುವುದಿಲ್ಲವೆ?" ಹೀಗೆಂದು ಅಮೇರಿಕೆಯ ಪತ್ರಿಕೋದ್ಯಮಿಯೊಬ್ಬನು ಕೇಳಿದ್ದಾನೆ. ಬಹುಶಃ ಅವನು ಸ್ವತಂತ್ರ ಭಾರತವನ್ನು ಕುರಿತು ವಿಚಾರಿಸಿದ್ದಿರಬೇಕು.

ಇದಕ್ಕೆ ನನ್ನ ಆತಂಕವೇನೂ ಇಲ್ಲ. ಆದರೆ ಇಂಥ ಕ್ರಮವು ನಮ್ಮಿಂದ ಬಟ್ಟೆ ಕೊಳ್ಳುವ ದೇಶದ ಅಗತ್ಯವನ್ನು ಪೂರೈಸಲಿಕ್ಕಾಗಿ ಇರಬೇಕು. ಭಾರತದ ಲಾಭಕ್ಕಾಗಿ ಬೇರೆ ದೇಶಗಳನ್ನು ಸುಲಿಯುವ ವಿಚಾರ ನನಗಿಲ್ಲ. ಅಂಥ ಸುಲಿಗೆಯ ದುಷ್ಪರಿಣಾಮವನ್ನು ನಾವೇ ಅನುಭೋಗಿಸುತ್ತಿರುವಾಗ, ನನ್ನ ದೇಶವೂ ಅಂತಹುದೇ ಅಪರಾಧ ಮಾಡುವುದು ನನಗೆ ಸೇರುವುದಿಲ್ಲ.

ಪಂಡಿತ ನೆಹರೂ ಅವರಿಗೆ ಔದ್ಯಮೀಕರಣ ಬೇಕು. ಇದನ್ನು ಸಮಾಜೀಕರಿಸಿದರೆ ಬಂಡವಾಳಶಾಹಿಯಲ್ಲಿ ದೋಷಗಳಿಂದ ಅದು ಮುಕ್ತವಾಗುವುದೆಂದು ಅವರು ತಿಳಿಸುತ್ತಾರೆ. ತನ್ನ ಸ್ವಂತ ವಿಚಾರದಂತೆ ಔದ್ಯಮೀಕರಣದಲ್ಲಿ ದೋಷಗಳು ಸ್ವಾಭಾವಿಕವಾಗಿ ಇರುತ್ತವೆ. ಎಷ್ಟೇ ವಿಧವಾಗಿ ಸಮಾಜೀಕರಿಸಿದರೂ ಅವು ತೊಲಗುವುದಿಲ್ಲ.

(ಹ., 1940)

ಯಂತ್ರಗಳು : ಭಾರತದ ಸಂದರ್ಶನಕ್ಕೆ ಬಂದಿದ್ದ ಓರ್ವ ಜಪಾನೀಯನು ಗಾಂಧೀಜಿಯ ಯಂತ್ರಯುಗದ ವಿರೋಧಿಯಾಗಿ ತೋರುತ್ತಾರೆಂದು ಹೇಳಿದನು. ಅದಕ್ಕೆ ಗಾಂಧೀಜಿ ಈ ರೀತಿ ಉತ್ತರಿಸಿದರು.

"ನಾನು ಯಂತ್ರಯುಗದ ವಿರೋಧಿಯೆಂದು ಹೇಳುವುದು ನನ್ನ ವಿಚಾರಗಳನ್ನು ವಿಕೃತಗೊಳಿಸಿದಂತೆ. ನಾನು ಯಂತ್ರಗಳ ವಿರೋಧಿಯೇನೂ ಅಲ್ಲ. ಆದರೆ ಅವು ನಮ್ಮ ಮೇಲೆ ಪ್ರಭುತ್ವ ನಡೆಸುವುದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಇತರರನ್ನು ಗುಲಾಮರನ್ನಾಗಿ ಮಾಡುವವನು ಸ್ವತಃ ನೀತಿಭ್ರಷ್ಟನಾಗುತ್ತಾನೆ. ಕೆಲವೇ ವರ್ಷಗಳ ಹಿಂದೆ ನಮ್ಮ ಬಟ್ಟೆಗಳನ್ನು ನಾವೇ ತಯಾರಿಸಿಕೊಳ್ಳುತ್ತಿದ್ದೆವು. ಈಗ ಜಪಾನ್ ಇಂಗ್ಲೆಂಡ್‌ಗಳಿಂದ ತರಿಸುತ್ತೇವೆ. ಇದು ಅನೈಸರ್ಗಿಕವಾದದ್ದು. ನಮಗಷ್ಟೇ ಅಲ್ಲ, ಇಡೀ ಜಗತ್ತಿಗೆ ಸಾಲುವಷ್ಟು ಬಟ್ಟೆಯನ್ನು ನಾವು ತಯಾರಿಸಬಹುದು. ನಮ್ಮ ನಿಸರ್ಗ ಸಂಪತ್ತು ವಿಪುಲವಾಗಿದೆ. ನಮ್ಮ ಹತ್ತಿಯನ್ನು ರಫ್ತುಮಾಡಿ ಅದರಿಂದ ತಯಾರಾದ ಬಟ್ಟೆಯನ್ನು ಆಮದು ಮಾಡುವುದು ಅಸಹ್ಯ. ಒಂಭತ್ತು ಕೋಟಿ ರೂಪಾಯಿಗಳಷ್ಟು ಬೆಲೆಯ ಚರ್ಮವನ್ನು ಹೊರಗೆ ಕಳುಹಿಸಿ ಅವುಗಳಿಂದಾದ ಸರಕನ್ನು ತರಿಸುತ್ತೇವೆ. ಹೀಗೇಕೆ ಆಗಬೇಕು?"

"ಹಾಗಾದರೆ ನೀವು ಭಾರತವನ್ನು ಔದ್ಯಮೀಕರಿಸುವುದಿಲ್ಲವೇ?"

"ಔದ್ಯಮೀಕರಣಕ್ಕೆ ನನ್ನದೇ ಆದ ಅರ್ಥವಿದೆ. ಅದರಂತೆ ಮಾಡಲು ಸಿದ್ಧನಿದ್ದೇನೆ. ನಮ್ಮ ಹಳ್ಳಿಗಳ ಪುನರುಜ್ಜೀವನವಾಗಬೇಕು. ಈ ದೇಶದ ಹಳ್ಳಿಗಳು ಇಲ್ಲಿಯ ಪಟ್ಟಣಗಳಿಗೆ ಬೇಕಾಗುವ ವಸ್ತುಗಳನ್ನು ಉತ್ಪಾದಿಸಿ ಪೂರೈಸುತ್ತಿದ್ದವು. ನಮ್ಮ ಪಟ್ಟಣಗಳೆಲ್ಲ ವಿದೇಶೀ ಸರಕುಗಳ ಪೇಟೆಯಾಗಿ ಹಳ್ಳಿಗಳಲ್ಲೆಲ್ಲ ಅವನ್ನು ಒಟ್ಟಲು ಪ್ರಾರಂಭಿಸಿದಂದಿನಿಂದ ಹಳ್ಳಿಗಳ ಸಂಪತ್ತು ಹರಿದುಹೋಗಿ ಭಾರತವು ದರಿದ್ರವಾಯಿತು."

(ಹ., 1937)

* * *

"ಬಾಪೂಜೀ, ನೀವು ಯಂತ್ರಗಳನ್ನೆಲ್ಲ ವಿರೋಧಿಸುತ್ತೀರಾ?" ಶ್ರೀ ರಾಮಚಂದ್ರನ್ ಕೇಳಿದರು.

"ಹೇಗೆ ಸಾಧ್ಯ? ಈ ದೇಹವೇ ಒಂದು ಬಲು ನಾಜೂಕಾದ ಯಂತ್ರವಲ್ಲವೇ? ಚರಕವೂ ಯಂತ್ರವೇ. ಹಲ್ಲುಜ್ಜುವ ಕಡ್ಡಿಯೂ ಯಂತ್ರವೇ. ನಾನು ವಿರೋಧಿಸುವುದು ಯಂತ್ರಗಳನ್ನಲ್ಲ. ಅವುಗಳ ಬಗ್ಗೆ ಇರುವ ಹುಚ್ಚನ್ನು. ಶ್ರಮ ಉಳಿಸುವ ಯಂತ್ರಗಳ ಬಗ್ಗೆ ಜನರಿಗೆ ಹುಚ್ಚು. ಸಹಸ್ರಾರು ಶ್ರಮಿಕರಿಗೆ ಕೆಲಸವಿಲ್ಲದಂತಾಗಿ ಅವರು ಬೀದಿಯ ಮೇಲೆ ಬಿದ್ದು ಸಾಯುವವರೆಗೂ ಶ್ರಮವನ್ನು 'ಉಳಿಸು'ತ್ತ ಹೋಗುತ್ತಾರೆ. ನನಗೆ ಕೆಲವೇ ಜನರ ವೇಳೆ ಹಾಗೂ ಶ್ರಮ ಉಳಿಸುವುದು ಬೇಕಾಗಿಲ್ಲ; ಎಲ್ಲದರನ್ನೂ ಉಳಿಸುವುದು ಬೇಕು. ಕೆಲವೇ ಜನರ ಕೈಯಲ್ಲಿ ಸಂಪತ್ತು ಕೂಡಿ ಬೀಳುವುದು ಬೇಕಾಗಿಲ್ಲ; ಎಲ್ಲರ ಕೈಯಲ್ಲಿ ಅದು ಸೇರಬೇಕು. ಇಂದು ಲಕ್ಷಾಂತರ ಜನರ ಬೆನ್ನ ಮೇಲೆ ಕೆಲವೇ ಮಂದಿ ಸವಾರಿ ಮಾಡಲು ಯಂತ್ರವು ಸಹಾಯ ಮಾಡುತ್ತಿದೆ. ಹೀಗಾಗುತ್ತಿರುವುದು ಶ್ರಮ ಉಳಿಸುವ ಮಾನವತಾ ಪ್ರೇಮದಿಂದಲ್ಲ, ದುರಾಸೆಯ ಮೂಲಕ. ನನ್ನ ಹೋರಾಟ ಯಂತ್ರದ ವಿರುದ್ಧ ಇಲ್ಲ, ಅದರ ದುರುಪಯೋಗದ ವಿರುದ್ಧ ಇದೆ.

ವೈಜ್ಞಾನಿಕ ಸತ್ಯ ಸಂಶೋಧನೆಗಳು ದುರಾಶೆಯ ಸಾಧನವಾಗಕೂಡದು. ಹಾಗೆ ಸಾಧನವಾಗದಿದ್ದರೆ ಶ್ರಮಿಕರು ಬೆನ್ನುಮುರಿ ದುಡಿಯಬೇಕಾಗುವುದಿಲ್ಲ; ಯಂತ್ರಗಳು ಆತಂಕವಾಗುವ ಬದಲು ಸಹಾಯಕಾರಿಯೆನಿಸುತ್ತವೆ. ನನ್ನ ಉದ್ದೇಶ ಯಂತ್ರದ ನಿರ್ಮೂಲನೆ ಮಾಡುವುದಲ್ಲ. ಅವುಗಳನ್ನು ಹತೋಟಿಯಲ್ಲಿಡುವುದು."

"ಅಂದರೆ ಇದರ ಅರ್ಥ ಜಟಿಲವಾದ ಶಕ್ತಿಚಾಲಿತ ಯಂತ್ರಗಳು ಹೋಗಬೇಕೆಂದೇ?"

"ಅವು ಹೋಗಬೇಕಾದೀತು. ಆದರೆ ಒಂದು ಮಾತನ್ನು ನಾನು ಸ್ಪಷ್ಟಗೊಳಿಸಬೇಕು; ನಾವು ಪ್ರಾಮುಖ್ಯ ಕೊಡಬೇಕಾದದ್ದು ಮಾನವನಿಗೆ. ಯಂತ್ರಗಳಿಂದ ಮಾನವನ ಅವಯವಗಳು ಕ್ಷೀಣಿಸಿದಂತೆ ನೋಡಿಕೊಳ್ಳಬೇಕು. ಸಿಂಗರ್ ಹೊಲಿಗೆಯ ಯಂತ್ರದ ಉದಾಹರಣೆಯನ್ನೇ

ತೆಗೆದುಕೊಳ್ಳೋಣ. ಇಲ್ಲಿಯವರೆಗೆ ಸಂಶೋಧಿಸಲ್ಪಟ್ಟ ಕೆಲವೇ ಉಪಯುಕ್ತ ವಸ್ತುಗಳಲ್ಲಿ ಅದು ಒಂದಾಗಿದೆ. ಅದರ ಸಂಶೋಧನೆಯ ಕತೆ ಸೊಗಸಾಗಿದೆ. ಸಿಂಗರ್ ಮಹಾಶಯನು ತನ್ನ ಮಡದಿಯು ಕೈಯಿಂದ ಕಷ್ಟಪಟ್ಟು ಹೊಲಿಯುವುದನ್ನು ನೋಡಿದ. ಅವಳ ಮೇಲಿನ ಪ್ರೀತಿಯಿಂದ, ಅವಳ ಶ್ರಮವನ್ನುಳಿಸಲು ಹೊಲಿಗೆಯಂತ್ರ ಶೋಧಿಸಿದ. ಅದರಿಂದ ಅವಳ ಶ್ರಮವನ್ನಷ್ಟೇ ಅಲ್ಲ, ಆ ಯಂತ್ರವನ್ನು ಬಳಸುವವರ ಶ್ರಮವನ್ನೆಲ್ಲ ಉಳಿಸಿದ."

ರಾಮಚಂದ್ರನ್ : "ಆದರೆ ಹೊಲಿಗೆಯ ಯಂತ್ರ ತಯಾರಿಸಲು ಫ್ಯಾಕ್ಟರಿಯಲ್ಲಿ ಶಕ್ತಿಚಾಲಿತ ಯಂತ್ರಗಳಿರಬೇಕಾಗುತ್ತವೆ."

ಗಾಂಧೀಜಿ : "ಸರಿ, ಅಂಥ ಫ್ಯಾಕ್ಟರಿಗಳನ್ನು ರಾಷ್ಟ್ರೀಕರಿಸಬೇಕು ಅಥವಾ ಸರಕಾರದ ನಿಯಂತ್ರಣದಲ್ಲಿಡಬೇಕು. ಅಷ್ಟರಮಟ್ಟಿಗೆ ನಾನು ಸಮಾಜವಾದಿಯಾಗಿದ್ದೇನೆ! ಅಂಥ ಫ್ಯಾಕ್ಟರಿಗಳನ್ನು ಆದರ್ಶ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ಲಾಭದ ದೃಷ್ಟಿಯಿರಬಾರದು. ಜನತೆಯ ಹಿತವೇ ಗುರಿಯಾಗಿರಬೇಕು. ದುರಾಶೆಯ ಬದಲು ಪ್ರೇಮವೇ ಪ್ರೇರಕಶಕ್ತಿಯಾಗಬೇಕು. ಕಾರ್ಮಿಕರ ಪರಿಸ್ಥಿತಿ ಬದಲಾಗಬೇಕು. ಅರ್ಥ ಸಂಗ್ರಹಕ್ಕಾಗಿ ಹುಚ್ಚು ನೂಕಾಟ ನಿಲ್ಲಬೇಕು. ಶ್ರಮಿಕರಿಗೆ ತಪ್ಪದೆ ಕೆಲಸವೂ ಜೀವನ ಸಾಗಿಸಲು ಸಾಲುವಷ್ಟು ಕೂಲಿಯೂ ಸಿಗಬೇಕು. ಕೆಲಸವೆಂದರೆ ಕೇವಲ ಬೆನ್ನುಮುರಿ ಕೆಲಸವಲ್ಲ. ಇಂಥ ಪರಿಸ್ಥಿತಿಯಲ್ಲಿ ಯಂತ್ರವು ಕೆಲಸಗಾರನಿಗೆ ಹಾಗೂ ರಾಷ್ಟ್ರಕ್ಕೆ ಅಥವಾ ಯಂತ್ರದ ಒಡೆಯನಿಗೆ ಕೂಡಿಯೇ ಸಹಾಯಕಾರಿಯಾಗುವುದು."

* * *

ಟೀಕಾಕಾರರಿಗೆ ಉತ್ತರ

ಗಾಂಧೀಜಿಯವರ ಉಪದೇಶವು ಶ್ರಮವಿಭಾಗದ ತತ್ವವನ್ನು ಗಣನೆಗೆ ತಂದುಕೊಂಡಿಲ್ಲವೆಂದು ಓರ್ವ ಮಿತ್ರರು ಆಕ್ಷೇಪಿಸಿದರು. ಗಾಂಧೀಜಿ ಹೇಳಿದರು, "ದಿನವಿಡೀ ನೂಲಿರೆಂದು ನಾನು ಹೇಳುತ್ತೇನೆಯೇ? ಶ್ರಮವಿಭಾಗದ ತತ್ವಕ್ಕೆ ಭಂಗವೆಲ್ಲಿಂದ ಬಂತು? ಅನ್ನಪಾನಾದಿಗಳ ವಿಷಯದಲ್ಲಿ ಶ್ರಮವಿಭಾಗವೇನಾದರೂ ಇದೆಯೆ? ನಾವೆಲ್ಲ ಉಣ್ಣುವಂತೆ, ಬಟ್ಟೆ ತೊಡುಂತೆ ನೂಲಲೂಬೇಕು."

(ಯ. ಇ., 1925)

* * *

"ರೈಲ್ವೆಯ ಬದಲು ಚಕ್ಕಡಿ ಹೊಡೆಯಬೇಕೆನ್ನುತ್ತೀರಾ? ಹಾಗಿಲ್ಲದಿದ್ದರೆ ಗಿರಣಿಗಳ ಬದಲು ಚರಕಗಳನ್ನು ಹೇಗೆ ತರುವಿರಿ?" ಎಂದು ಮಿತ್ರರೊಬ್ಬರು ಕೇಳಿದರು. "ರೈಲ್ವೆಯ ಬದಲು ಚಕ್ಕಡಿ ಹೊಡೆಯಿರೆಂದು ನಾನು ಹೇಳುವುದಿಲ್ಲ. ಹಾಗೆ ನಾನು ಬಯಸಿದರೂ ಆಗಲಾರದು. ಮೂವತ್ತು ಕೋಟಿ ಚಕ್ಕಡಿಗಳಿಂದಲೂ ಅಂತರವನ್ನು ಅಳಿಸಲು ಸಾಧ್ಯವಿಲ್ಲ. ಆದರೆ ಗಿರಣಿಗಳ ಬದಲು ಚರಕಗಳು ನಡೆಯಬಹುದು. ರೈಲ್ವೆಯ ವೇಗದ ಪ್ರಶ್ನೆಯನ್ನು ಬಿಡಿಸುತ್ತದೆ. ಗಿರಣಿಯ ಪ್ರಶ್ನೆ ಉತ್ಪಾದನೆಯದು. ಭಾರತವಲ್ಲಿಯಂತೆ ಸಾಕಷ್ಟು ಜನರಿದ್ದರೆ ಚರಕವು ಸ್ಪರ್ಧಿಸಬಹುದು. ಹಳ್ಳಿಗರು ತಮ್ಮ ಬಿಡುವಿನಲ್ಲಿ ನೂತು ಗಿರಣಿಯ ಬಟ್ಟೆಗಿಂತ ಅಗ್ಗವಾಗಿ ತಮ್ಮ ಬಟ್ಟೆಯನ್ನು ತಯಾರಿಸಿಕೊಳ್ಳಬಹುದು.

ಚರಕದಿಂದ ಶ್ರಮವು ವ್ಯರ್ಥವಾಗುತ್ತದೆಯೆಂದು ಹೇಳುವವರಿದ್ದಾರೆ. ಇದು ಯಾವ ವಿಚಾರವನ್ನೂ ಮಾಡಿ ಹೇಳಿದ್ದಲ್ಲ. ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ಕೆಲಸವಿಲ್ಲದ ಲಕ್ಷಾಂತರ ಜನರಿಗಾಗಿ ಚರಕವಿದೆ. ಅರ್ಧತಾಸಿನಲ್ಲಿ ಚರಕದಿಂದ ನೂರುಗಜ ನೂಲು ತೆಗೆಯಬರುತ್ತದೆ. ಇದು ವ್ಯರ್ಥಶ್ರಮವೇ?"

(ಯ. ಇ., 1925)

ಚರಕವು ಸಾಕಷ್ಟು ಉತ್ತೇಜಕವಲ್ಲ; ಅದು ಹೆಂಗಸರಿಗೇ ಸೇರಿದ್ದು; ಅದು ನಮ್ಮನ್ನು ಮಧ್ಯಯುಗದ ಕಡೆಗೆ ತಿರುಗಿಸುತ್ತದೆ; ವೈಭವಶಾಲೀ ವೈಜ್ಞಾನಿಕ ಪ್ರಗತಿಯ ವಿರುದ್ಧ ವ್ಯರ್ಥ ಹೋರಾಟ-ಎಂದೆಲ್ಲ ಟೀಕಿಸಲಾಗುತ್ತದೆ. ನನ್ನ ನಮ್ರ ಅಭಿಪ್ರಾಯದಲ್ಲಿ ಭಾರತಕ್ಕೆ ಬೇಕಾದಷ್ಟು ಕೈತುಂಬ ಕೆಲಸ. ಜನತೆಗೆ ಕೆಲಸದಿಂದಲೇ ಉತ್ತೇಜನ, ಹುರುಪು ಸಿಗುತ್ತದೆ. ಇನ್ನೂ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಚರಕದ ಪ್ರಯೋಗವಾಗಿಲ್ಲ. ನಮ್ಮಲ್ಲಿ ಅನೇಕರು ಈ ವಿಷಯವಾಗಿ ಆಳ ವಿಚಾರ ಮಾಡಿಲ್ಲ. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರು ಸಹ ಈ ವಿಷಯವಾಗಿ ತಾವೇ ಕಾಲಕಾಲಕ್ಕೆ ಕೈಗೊಂಡ ನಿರ್ಣಯಗಳನ್ನು ಪಾಲಿಸುವ ಗೋಜಿಗೇ ಹೋಗಿಲ್ಲ. ನಮ್ಮಲ್ಲಿ ಬಹು ಜನರಿಗೆ ವಿಶ್ವಾಸವೇ ಇಲ್ಲ. ವಸ್ತುಸ್ಥಿತಿಯು ಹೀಗಿರುವಾಗ ಚರಕವು ಉತ್ತೇಜಕವಲ್ಲ; ಆದ್ದರಿಂದಲೇ ಅದು ಯಶಸ್ವಿಯಾಗಿಲ್ಲ ಎಂದು ಹೇಳುವುದು ಸರಿಯಾಗಲಾರದು. ನೂಲುವುದು ಮುದುಕಿಯರ ಕೆಲಸವೆಂದು ಹೇಳುವುದು ವಸ್ತುಸ್ಥಿತಿಯನ್ನು ಕಡೆಗಣಿಸಿದಂತೆಯೇ. ನೂಲುವ ಗಿರಣಿಗಳು ಅಸಂಖ್ಯ ಚರಕಗಳ ಕೂಟವಾಗಿದೆ. ಗಿರಣಿಗಳ ಆಡಳಿತವನ್ನು ಗಂಡಸರೇ ನೋಡಿಕೊಳ್ಳುತ್ತಾರೆ. ಕೆಲವು ದಂಧೆಗಳು ಗಂಡಸರ ಗೌರವಕ್ಕೆ ಕುಂದು ಎಂಬ ಮೂಢನಂಬಿಕೆ ಇನ್ನು ಮುಂದಾದರೂ ಇರಕೂಡದು. ಸರ್ವ ಸಾಮಾನ್ಯ ಸ್ಥಿತಿಯಲ್ಲಿ ನೂಲುವುದು ಕೋಮಲೆಯರ ದಂಧೆಯೇನೋ ಅಹುದು. ಆದರೆ ಚರಕದಲ್ಲಿ ಸುಧಾರಣೆ ಮಾಡಲಿಕ್ಕಾದರೂ ಕೆಲವು ಗಂಡಸರನ್ನು ಈ ಕೆಲಸದಲ್ಲಿ ತೊಡಗಿಸಿರಬೇಕಾಗುವುದು. ನಮ್ಮಂಥ ಕೆಲವು ಗಂಡಸರು ಚರಕದ ವಿಷಯವಾಗಿ ಹಗಲಿರುಳು ಚಿಂತಿಸಿ ದುಡಿದಿದ್ದರೆ ಈವರೆಗೆ ಆದ ಚರಕದ ತಾಂತ್ರಿಕ ಪ್ರಗತಿಯು ಸಾಧ್ಯವಾಗುತ್ತಿದ್ದಿಲ್ಲ.

(ಯ. ಇ., 1924)

* * *

ಓರ್ವ ಪ್ರೊಫೆಸರರು ಹೀಗೆ ಬರೆಯುತ್ತಾರೆ:

"ಸ್ವತಃ ನನಗೆ ಚರಕದಲ್ಲಿ, ಖಾದಿಯಲ್ಲಿ ಸಂಪೂರ್ಣ ವಿಶ್ವಾಸವಿದೆ. ಆದರೆ ನೀವು ಆರಂಭಮಾಡಿದ ದಿಕ್ಕು ಸರಿಯಾಗಿಲ್ಲವೆಂದು ನನಗೆ ತೋರುತ್ತದೆ. ಹೆಂಗಸರಂತೆ ದೃಢಕಾಯದ ಗಂಡಸರನ್ನೂ ನೂಲಹಚ್ಚುವುದು ಬಹಳ ಜನರಿಗೆ ವಿಚಿತ್ರವಾಗಿ ತೋರುತ್ತದೆ. ನನ್ನ ನಮ್ರ ಅಭಿಪ್ರಾಯದಲ್ಲಿ ನೀವು

ಗಂಡಸರನ್ನು ವಿವಿಧ ರಾಜಕೀಯ ಪ್ರಚಾರಾದಿಗಳಿಗೆ ಬಿಟ್ಟು, ಚರಕದ ಸಂದೇಶವನ್ನು ನೇರವಾಗಿ ಮಹಿಳೆಯರ ಕಡೆಗೆ ಒಯ್ಯುಬೇಕಾಗಿತ್ತು. ನಿಮ್ಮ ಚರಕ ಖಾದಿಯ ಯೋಜನೆಗಳು ಸದ್ಯಕ್ಕೆ ಹೆಂಗಸರ ಮಟ್ಟಿಗೆ ಮಾತ್ರ ಇರಲಿ. ಗಂಡಸರು ಪುರುಷಯೋಗ್ಯವಾದ ಆಯುಧಗಳಿಂದ ಸ್ವಾತಂತ್ರ್ಯ ಸಂಗ್ರಾಮ ನಡೆಸಲಿ."

"ಈ ಪಂಡಿತರಿಗೆ ಹಿಂದೂಸ್ತಾನದ ಮಹಿಳೆಯರ ಸ್ಥಿತಿಯ ಅರಿವಿಲ್ಲವೆಂದು ಸ್ಪಷ್ಟವಾಗಿ ಕಾಣುತ್ತದೆ. ಅಲ್ಲದಿದ್ದರೆ ಸಾಮಾನ್ಯವಾಗಿ ಗಂಡಸರಿಗೆ ಹೆಂಗಸರನ್ನುದ್ದೇಶಿಸಿ ಮಾತಾಡುವ ಅನುವು, ಹಕ್ಕು ದೊರೆಯದೆಂಬುದನ್ನು ಅವರು ತಿಳಿಯುತ್ತಿದ್ದರು. ನನಗೇನೋ ಕೆಲಮಟ್ಟಿಗೆ ಆ ಭಾಗ್ಯ ದೊರೆತಿದೆ. ಆದರೂ ಗಂಡಸರಲ್ಲಿ ಬೆರೆತಷ್ಟು ಅಲ್ಲ. ಗಂಡಸಿನ ಒಪ್ಪಿಗೆ ಇಲ್ಲದೆ ಹೆಂಗಸರು ಕಾರ್ಯ ಕೈಗೊಳ್ಳಲಾರರೆಂಬುದನ್ನು ಈ ಪ್ರೊಫೆಸರರು ತಿಳಿದಿರಬೇಕು. ಹೆಂಗಸರು ಚರಕ ಹಿಡಿಯದಂತೆ ಖಾದಿ ತೊಡದಂತೆ ಗಂಡಸರು ಆತಂಕಮಾಡಿದ ಎಷ್ಟೋ ಉದಾಹರಣೆಗಳನ್ನು ನಾನು ಕೊಡಬಲ್ಲೆ. ಮೂರನೆಯದಾಗಿ, ಗಂಡಸರಿಗೆ ಮಾಡಲು ಸಾಧ್ಯವಾದ ಬದಲಾವಣೆಗಳೂ ಸಂಶೋಧನೆಗಳೂ ಹೆಂಗಸರಿಗೆ ಸಾಧ್ಯವಿಲ್ಲ. ಚರಕದ ಚಳುವಳಿಯು ಹೆಂಗಸರಿಗೆ ಮಾತ್ರ ಇಲ್ಲದಿದ್ದರೆ ಕಳೆದ ನಾಲ್ಕು ವರ್ಷಗಳಲ್ಲಿ ಸಾಧಿಸಿದ ಚರಕದ ಸುಧಾರಣೆಯಾಗಲೀ ಸಂಘಟನೆಯಾಗಲೀ ಸಾಧ್ಯವಾಗುತ್ತಿದ್ದಿಲ್ಲ. ನಾಲ್ಕನೆಯದಾಗಿ ಯಾವುದೇ ಒಂದು ದಂಧೆಯು ಗಂಡಸರಿಗಾಗಿಯೇ ಇದೆಯೆಂದು ಹೇಳುವುದು ಅನುಭವಕ್ಕೆ ವ್ಯತಿರಿಕ್ತವಾಗಿದೆ. ಅಡುಗೆ ಮಾಡುವುದು ಪ್ರಾಮುಖ್ಯವಾಗಿ ಹೆಂಗಸರ ದಂಧೆ. ಆದರೆ ತನ್ನ ಅನ್ನವನ್ನು ತಾನೇ ಬೇಯಿಸಿಕೊಳ್ಳಲಾರದ ಸೈನಿಕನು ನಿರುಪಯೋಗಿಯೆನಿಸುತ್ತಾನೆ. ಸೈನ್ಯದಲ್ಲಿ ಅಡುಗೆಯನ್ನೆಲ್ಲ ಗಂಡಸರೇ ಮಾಡಬೇಕು. ಮನೆಯಲ್ಲಿ ಅಡುಗೆ ಮಾಡುವುದು ಹೆಂಗಸರ ಪಾಲಿಗೆ ಇದ್ದರೂ ಸಾಮೂಹಿಕ ಕಾರ್ಯಗಳಲ್ಲೆಲ್ಲ ಗಂಡಸರೇ ಅಡಿಗೆ ಮನೆಯನ್ನು ನೋಡಿಕೊಳ್ಳುತ್ತಾರೆ. ಯುದ್ಧ ಮಾಡುವುದು ಪ್ರಾಮುಖ್ಯವಾಗಿ ಗಂಡಸರ ಕೆಲಸ. ಆದರೆ ಇಸ್ಲಾಂ ಸಂಘರ್ಷಣೆಯ ಆರಂಭದ ಕಾಲದಲ್ಲಿ ಅರಬ್‌ದೇಶದ ಮಹಿಳೆಯರು ತಮ್ಮ ಗಂಡಂದಿರ ಜೊತೆಗೂಡಿ ಶೌರ್ಯದಿಂದ ಕಾದಿದರು. ಸಿಪಾಯಿಗಳ ಬಂಡಾಯದ ಕಾಲದಲ್ಲಿ ಝಾಂಸಿಯ ರಾಣಿಯು ಶೌರ್ಯದ ಪತಾಕೆ ಹಾರಿಸಿದಳು. ಅವಳಂತೆ ಎಷ್ಟು

ಗಂಡಸರು ಕಾದಿದರು? ಯುರೋಪದಲ್ಲಿ ಇಂದು ಮಹಿಳೆಯರು ವಕೀಲರಾಗಿ ಡಾಕ್ಟರರಾಗಿ, ಅಧಿಕಾರಿಗಳಾಗಿ ದುಡಿದು ಹೆಸರು ಗಳಿಸುತ್ತಿದ್ದಾರೆ. ಟೈಪು ಮಾಡುವವರು, ಶೀಘ್ರಲಿಪಿಕಾರರು ಹೆಂಗಸರೇ ಆಗಿರುತ್ತಾರೆ. ನೂಲುವುದು ಗಂಡಸರಿಗೆ ಯಾಕೆ ಯೋಗ್ಯವಾದ ಕೆಲಸವಲ್ಲ? ನೂಲುವ ಯಂತ್ರವನ್ನು ಹುಡುಕಿದವನು ಗಂಡಸೆಂಬುದು ಈ ಪ್ರೊಫೆಸರಿಗೆ ಗೊತ್ತಿಲ್ಲವೆ? ಸೂಜಿ ಕೆಲಸವು ಹೆಂಗಸರಿಗೆ ಸೇರಿದ್ದು. ಆದರೆ ಜಗತ್ತಿನಲ್ಲೆಲ್ಲ ನುರಿತ ಸಿಂಪಿಗರು ಗಂಡಸರಿರುತ್ತಾರೆ. ಹೊಲಿಗೆಯ ಯಂತ್ರವನ್ನು ಶೋಧಿಸಿದವನೂ ಗಂಡಸೇ. ಸಿಂಗರ್ ಮಹಾಶಯನು ಸೂಜಿಯ ಬಗ್ಗೆ ತಿರಸ್ಕಾರದ ಭಾವನೆ ತಳೆದಿದ್ದರೆ ಅವನು ಜಗತ್ತಿಗೆ ಹೊಲಿಗೆ ಯಂತ್ರದಂಥ ಆಸ್ತಿಯನ್ನು ಕೊಟ್ಟು ಹೋಗಲು ಸಾಧ್ಯವಿದ್ದಿಲ್ಲ. ಗತಕಾಲದಲ್ಲಿ ನಮ್ಮ ಗಂಡಸರೂ ಹೆಂಗಸರ ಜತೆ ನುರಿತಿದ್ದರೆ, ಚರಕದ ಕಾಳಜಿ ವಹಿಸಿದ್ದರೆ ಈಸ್ಟ್ ಇಂಡಿಯಾ ಕಂಪನಿಯ ಒತ್ತಾಯದಿಂದ ಬಿಟ್ಟಂತೆ ನಾವು ನೂಲುವುದನ್ನು ಎಂದೂ ಬಿಡುತ್ತಿದ್ದಿಲ್ಲವೇನೋ.

(ಯ. ಇ.,, 1925)

* * *

ಕೈಯಿಂದ ನೂಲುವುದು ಯಶಸ್ವಿಯಾಗದಿದ್ದುದು ಎರಡು ಕಾರಣಗಳಿಗಾಗಿ ಎಂದು ನನಗೆ ಸೂಚಿಸಲಾಗಿದೆ.

1. ಕೈಯಿಂದ ನೂತ ನೂಲು ಗಿರಣಿಯ ನೂಲಿನೊಡನೆ ಎಂದು ಸ್ಪರ್ಧಿಸಲಾರದು. ಯಾಕೆಂದರೆ ಅದು ಇಂದಿನವರೆಗಂತೂ ಗಿರಣಿಯ ನೂಲಿನಷ್ಟು ಗಟ್ಟಿಯಾಗಿಲ್ಲ.
2. ಚರಕದಿಂದ ದೊರೆಯುವ ಉತ್ಪನ್ನ ತೀರ ಕಡಿಮೆ. ಅದು ಲಾಭದಾಯಕವಾಗಲಾರದು.

ಒಳ್ಳೆಯ ಕೈನೂಲಿನಿಂದ ತಯಾರಾದ ಬಟ್ಟೆಯು ಅದೇ ನಂಬರಿನ ನೂಲಿನಿಂದಾದ ಗಿರಣಿಯ ಬಟ್ಟೆಗಿಂತ ಹೆಚ್ಚು ತಾಳಿಕೆ ಬರುತ್ತದೆಂಬುದು ಹಲವು ವರ್ಷಗಳಿಂದಲೂ ಖಾದಿ ತೊಡುತ್ತಿರುವವರ ಅನುಭವಕ್ಕೆ ಬಂದಿದೆ. ನಾಲ್ಕು ವರ್ಷಗಳಿಗಿಂತ ಹೆಚ್ಚಿಗೆ ತಾಳಿಕೆ ಬಂದಿರುವ ತಮ್ಮ ಖಾದೀ ಧೋತರಗಳನ್ನು ಆಂಧ್ರದ ನನ್ನ ಮಿತ್ರರು ತೋರಿಸಿದ್ದಾರೆ. ಗಿರಣಿಯ ಧೋತರರಗಳು ಒಂದು ವರ್ಷದೊಳಗೆ ಹರಿದುಹೋಗುತ್ತದೆ.

ಕೈಯಿಂದ ನೂತ ನೂಲು ಹೆಚ್ಚು ತಾಳಿಕೆ ಬರುತ್ತದೆಂದು ಸಾಧಿಸುವುದು ನನ್ನ ಉದ್ದೇಶವಲ್ಲ. ನಮ್ಮ ದೇಶದ 85% ಜನರಿಗೆ ನೂಲುವುದೊಂದೇ ಪೂರಕ ಉದ್ಯೋಗವಾಗಲು ಸಾಧ್ಯವಿರುವುದರಿಂದ ನಮ್ಮ ಬಟ್ಟೆಯೆಲ್ಲ ಕೈನೂಲಿನಿಂದಲೇ ತಯಾರಾಗಬೇಕೆನ್ನುವುದು ನಾನು ಹೇಳುವ ಮುಖ್ಯ ವಿಷಯ. ನನ್ನ ಸೂಚನೆ ಸಮಂಜಸವಾಗದಿದ್ದರೆ ನಮ್ಮ ರಾಷ್ಟ್ರದ ಉದ್ಯಮಗಳೆಲ್ಲ ಚರಕವನ್ನೇಕೆ ಕೇಂದ್ರವನ್ನಾಗಿಟ್ಟುಕೊಂಡು ನಡೆಯಬೇಕು. ಚರಕದಿಂದ ಉತ್ಪನ್ನ ಹೆಚ್ಚುವಂತೆ ಉದ್ಯಮಗಳ ಶಾಖೆಯವರು ಅದರಲ್ಲಿ ಸುಧಾರಣೆ ಮಾಡಬೇಕು. ಎಲ್ಲ ದರ್ಜೆಯು ಕೈನೂಲು ಉಪಯೋಗವಾಗುವಂತೆ ಅವರು ಕ್ರಮ ಕೈಗೊಳ್ಳಬೇಕು. ಅತ್ಯುತ್ತಮ ಕೈನೂಲಿಗೆ ಬಹುಮಾನ ಕೊಡಬೇಕು. ಕೈನೂಲು ಒಳ್ಳೆಯದಾಗುವಂತೆ ಸರ್ವವಿಧದ ಪ್ರಯತ್ನ ಮಾಡಬೇಕು.

ನೂಲುವುದು ಲಾಭದಾಯಕವಲ್ಲವೆಂದು ಹೇಳುತ್ತಾರೆ. ಕೆಲಸ ಇಲ್ಲದವರಿಗೆ, ಒಂದು ಬಿಲ್ಲಿ ಹೆಚ್ಚಿಗೆ ದೊರೆತರೂ ಅಡ್ಡಿಯಿಲ್ಲ ಎನ್ನುವವರಿಗೆ, ಇದು ಲಾಭದಾಯಕವೇ. ಲಕ್ಷಾಂತರ ರೈತರು ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ನಿರುದ್ಯೋಗಿಗಳಾಗಿರುವ ಪರಿಸ್ಥಿತಿಯಿಲ್ಲದಿದ್ದರೆ, ಚರಕದ ಚಳವಳಿ ನಿಲ್ಲುತ್ತದೆ.

(ಯ. ಇ., 1925)

* * *

ಹೆಚ್ಚು ಉತ್ಪನ್ನವಿರುವವರು ತಮ್ಮ ಕೆಲಸವನ್ನು ಬಿಟ್ಟು ಚರಕ ಹಿಡಿಯಬೇಕೆಂದು ನಾನೆಂದೂ ಸೂಚಿಸಿಲ್ಲ. ಬೇರೆ ಯಾವ ಹೆಚ್ಚಿನ ಉತ್ಪನ್ನ ಕೊಡುವ ಕೆಲಸವೂ ಇಲ್ಲದವರು, ತಮಗೆ ಕೆಲಸವಿಲ್ಲದಾಗ ಮಾತ್ರ ನೂಲಲೆಂದು ನಾನು ಆಗಾಗ್ಗೆ ಹೇಳಿದ್ದೇನೆ. ಹೀಗೆ ನೂಲುವುದರಲ್ಲಿ ಎರಡು ವರ್ಗ ಮಾಡಬಹುದು.

(1) ಗಳಿಕೆಗಾಗಿ ನೂಲುವವರು. ಅವರ ವಿಷಯವಾಗಿ ಈ ಮೊದಲೇ ಹೇಳಿದ್ದೇನೆ.

(2) ತ್ಯಾಗಭಾವನೆಯಿಂದ, ಇತರರಿಗೆ ಆದರ್ಶರಾಗಲೆಂದು ನೂಲುವ ವಿಚಾರವಂತ ಭಾರತೀಯರು. ಇವರು ಖಾದಿಯ ಬೆಲೆಯನ್ನು ಕಡಿಮೆ ಮಾಡಲೆಂದು ನೂಲಬೇಕು.

(ಯ. ಇ., 1935)

ಎಲ್ಲರೂ ತಮ್ಮ ಇತರ ಕೆಲಸಗಳನ್ನು ಬಿಟ್ಟು ನೂಲುವಂತೆ ನಾನು ಹೇಳುತ್ತೇನೆಂದು ಕವಿ ರವೀಂದ್ರನಾಥ ಟಾಗೋರರು ತಿಳಿದಿದ್ದಾರೆ. ನಾನು ಯಾರಿಗೂ ತಮ್ಮ ದಂಧೆಯನ್ನು ಬಿಡಲಿಕ್ಕೆ ಹೇಳಿಲ್ಲ. ರಾಷ್ಟ್ರಕ್ಕಾಗಿ ನಿತ್ಯ ಅರ್ಧ ತಾಸು ನೂತು ಸೂತ್ರಾಂಜಲಿ ಅರ್ಪಿಸುವಂತೆ, ಅದರಿಂದ ತಮ್ಮ ದಂಧೆಯನ್ನು ಅಂದಗೊಳಿಸುವಂತೆ ಕೇಳಿಕೊಂಡಿದ್ದೇನೆ. ಏನೂ ಕೆಲಸವಿಲ್ಲದೆ ಉಪವಾಸ ಸೊರಗುವವರಿಗೆ ಅವರ ಜೀವನೋಪಾಯವೆಂದು ನೂಲಲು ಹೇಳಿದ್ದೇನೆ. ಅರೆಹೊಟ್ಟೆ ದುಡಿಯುವ ರೈತರಿಗೆ ಅವರ ಬಡಗಳಿಕೆಗೆ ಪೂರಕವಾಗಲೆಂದು ಬಿಡುವಿನಲ್ಲಿ ನೂಲಲು ಹೇಳಿದ್ದೇನೆ. ಕವಿಗಳು ದಿನಾ ಅರ್ಧತಾಸು ನೂತರೆ ಅವರ ಕಾವ್ಯ ಇನ್ನೂ ಮಧುರವಾದೀತು.

ಚರಕದ ಮೂಲಕ ದೇಶದಲ್ಲಿ ಮೃತ್ಯುಸಮಾನವಾದ ಏಕರೂಪತೆ ಮೂಡುವುದೆಂದು ಕವಿ ರವೀಂದ್ರರು ತಿಳಿದಂತಿದೆ. ಭಾರತೀಯರೆಲ್ಲ ಒಂದೇ ಎಂಬ ಸೂತ್ರವನ್ನು ಸಾರಿ ಅದನ್ನು ಕಾರ್ಯಗತಗೊಳಿಸುವ ಯತ್ನ ಚರಕದ್ದಾಗಿದೆ. ವಿಶ್ವದ ಅನೇಕತ್ವದಲ್ಲೂ ಏಕತ್ವವಿದೆ. ಯಾರಿಬ್ಬರೂ– ಅವಳಿಜವಳಿ ಸಹ ಒಂದೇ ಬಗೆಯಾಗಿರುವುದಿಲ್ಲ. ಆದರೆ ಮಾನವರಿಗೆಲ್ಲ ಸಾಮಾನ್ಯವಾದ ಅನೇಕ ವಿಷಯಗಳಿವೆ. ವಿವಿಧ ರೂಪಗಳ ಹಿಂದಿರುವ ಜೀವಶಕ್ತಿ ಒಂದೇ ಆಗಿದೆ.

ಮಾನವ ಜನಾಂಗಗಳಲ್ಲಿ ಬಹು ಸಂಖ್ಯಾತರಿಗೆ ಬೇಸಾಯವು ಸಾಮಾನ್ಯವಲ್ಲವೆ? ಅದರಂತೆಯೇ ಕೆಲಕಾಲದ ಹಿಂದೆ ನೂಲುವುದು ಬಹಳಷ್ಟು ಜನರಿಗೆ ಸಾಮಾನ್ಯವಾಗಿತ್ತು. ರೈತನೂ ರಾಜಪುತ್ರನೂ ಊಟಮಾಡುಂತೆ, ಬಟ್ಟೆ ತೊಡುವಂತೆ, ಅವರಿಬ್ಬರೂ ತಮ್ಮ ಜೀವನಾವಶ್ಯಕಗಳಿಗಾಗಿ ದುಡಿಯಬೇಕು. ರಾಜಪುತ್ರನು ಅದನ್ನು ಸಾಂಕೇತಿಕವಾಗಿ, ತ್ಯಾಗಬುದ್ಧಿಯಿಂದ ಮಾಡಬಹುದು. ಸದ್ಯ ಯುರೋಪಕ್ಕೆ ಈ ಮಾತು ಅರ್ಥವಾಗಲಿಕ್ಕಿಲ್ಲ. ಯಾಕೆಂದರೆ ಇತರ ದೇಶಗಳನ್ನು ಸುಲಿಯುವುದೇ ತನ್ನ ಧರ್ಮವೆಂದು ತಿಳಿದುಕೊಂಡಿದೆ. ಈ ಧರ್ಮದಲ್ಲಿ ಸತ್ಯವಿಲ್ಲ. ಅದು ಕೆಲವೇ ಕಾಲದಲ್ಲಿ ಹಾಳಾಗಲೇಬೇಕು.

(ಯ. ಇ., 1925)

* * *

ಯಂತ್ರಗಳನ್ನೆಲ್ಲ ಉಚ್ಚಾಟನೆ ಮಾಡುವುದೇ ಗ್ರಾಮೋದ್ಯೋಗಗಳ ಚಳುವಳಿಯ ಉದ್ದೇಶವಲ್ಲವೆ? ಹೀಗೆಂದು ಸಮಾಜವಾದಿಯೊಬ್ಬನು ಕೇಳಿದ್ದಾನೆ. ಚರಕವೂ ಒಂದು ಯಂತ್ರವೇ ಆಗಿದೆ. ಹೊಲಿಗೆಯ ಯಂತ್ರಕ್ಕೂ ಗ್ರಾಮೋದ್ಯೋಗ ಚಳುವಳಿಯು ರಕ್ಷಣೆ ನೀಡುತ್ತದೆ. ಜನತೆಯ ದುಡಿಮೆಯನ್ನು ಕಸಿದುಕೊಳ್ಳದ, ಕಸುಬುದಾರರ ಕ್ರತುಶಕ್ತಿಗೆ ಸಹಾಯವಾಗುವ, ಅವುಗಳ ಗುಲಾಮರಾಗದೆ ಜನರು ತಮ್ಮ ಇಚ್ಛೆಯಂತೆ ನಡಿಸಬರುವ ಯಂತ್ರಗಳಿಗೆಲ್ಲ ಸ್ಥಾನವಿದೆ.

ವಿದ್ಯುತ್‌ಶಕ್ತಿಯು ಬೇಡವೆಂದೂ ನಾವು ಹೇಳುವುದಿಲ್ಲ. ಹಳ್ಳಿಯ ಮನೆಮನೆಗೂ ಅದು ಬಂದರೆ ಅದರಿಂದ ಯಂತ್ರಗಳನ್ನು ನಡೆಸಿಕೊಳ್ಳಲಿ. ಆದರೆ ವಿದ್ಯುದಾಗಾರಗಳು ಹುಲ್ಲುಗಾವಲದಂತೆ ಸರಕಾರದ ಅಥವಾ ಹಳ್ಳಿಗಳ ಸಾಮೂಹಿಕ ಒಡೆತನದಲ್ಲಿರಬೇಕು. ವಿದ್ಯುತ್‌ಶಕ್ತಿಯಾಗಲೀ ಯಂತ್ರಗಳಾಗಲೀ ಇಲ್ಲದ ಕಡೆ ನಿರುದ್ಯೋಗಿಗಳು ಏನು ಮಾಡಬೇಕು?

ಎಲ್ಲರಿಗೂ ಹಿತವಾಗುವಂಥ ವೈಜ್ಞಾನಿಕ ಸಂಶೋಧನೆಗಳನ್ನೆಲ್ಲ ನಾನು ಸ್ವಾಗತಿಸುತ್ತೇನೆ. ಸಂಶೋಧನೆಗಳಲ್ಲೂ ಭೇದವಿದೆ. ಸಾವಿರಾರು ಜನರನ್ನು ಏಕಕಾಲಕ್ಕೆ ಕೊಂದುಹಾಕುವ ಶಕ್ತಿಯುಳ್ಳ ವಾಯುಗಳ ಸಂಶೋಧನೆಗೆ ನಾನು ಏನೂ ಮಹತ್ವ ಕೊಡಲಾರೆ. ಜನರ ಪರಿಶ್ರಮದಿಂದ ಸಾಧಿಸಲಾರದ ಎಷ್ಟೋ ಉಪಯುಕ್ತ ಕೆಲಸಗಳನ್ನು ಭಾರೀ ಯಂತ್ರಗಳಿಂದ ಮಾಡುವುದು ಅನಿವಾರ್ಯ, ಆದರೆ ಅಂಥ ಯಂತ್ರಗಳ ಒಡೆತನ ಸರಕಾರದ್ದಿರಬೇಕು. ಜನತೆಯ ಹಿತಕ್ಕಾಗಿಯೇ ಅವುಗಳ ಉಪಯೋಗವಾಗಬೇಕು. ಅನೇಕರಿಗೆ ಹಾನಿಯೆಸಗಿ ಕೆಲವರ ಸಂಪತ್ತು ಹೆಚ್ಚಿಸುವ ಅಥವಾ ನಿಷ್ಕಾರಣವಾಗಿ ಅನೇಕ ದುಡಿಮೆಯನ್ನು ಕಸಿದುಕೊಳ್ಳುವ ಯಂತ್ರಗಳನ್ನು ನಾನು ಗಣನೆಗೆ ತೆಗೆದುಕೊಳ್ಳಲಾರೆ.

ನಿರುದ್ಯೋಗದ ನಿರ್ಮೂಲನೆಗೆ ಈ ಚರಕದಂಥ ಯಂತ್ರ ಇನ್ನೊಂದಿಲ್ಲ. ನಾನು ಮಾತಾಡುತ್ತಿರುವಾಗಲೇ ನೂತು ದೇಶದ ಸಂಪತ್ತನ್ನು ರವಷ್ಟಾದರೂ ಹೆಚ್ಚಿಸುತ್ತಿದ್ದೇನೆ. ಈ ಯಂತ್ರದ ಉಚ್ಚಾಟನೆಯನ್ನು ಯಾರೂ ಮಾಡಲಾರರು.

(ಹ.ಜ., 1935)

* * *

ಖಾದಿಯ ಅರ್ಥನೀತಿ

ಬೆಲೆಯ ವಿಷಯದಲ್ಲಿ ಖಾದಿಯು ಜಪಾನದ ಅಥವಾ ಸ್ವದೇಶೀ ಗಿರಣಿಗಳ ಬಟ್ಟೆಯೊಡನೆ ಸ್ಪರ್ಧಿಸಲು ಎಷ್ಟರಮಟ್ಟಿಗೂ ಸಾಧ್ಯವಿಲ್ಲ. ಮನುಷ್ಯ ಶಕ್ತಿಯಿಂದ ತಯಾರಿಸಿದ ಎಲ್ಲ ವಸ್ತುಗಳ ವಿಷಯದಲ್ಲೂ ಹೀಗೆ ಹೇಳಬಹುದು. ಆದರೆ ಈ ರೀತಿ ವಿಚಾರಿಸುವುದು ಸರಿಯಲ್ಲ. ಎಲ್ಲರಿಗೂ ಮುಕ್ತವಿರುವ ಪೇಟೆಯಲ್ಲಿ ಹೆಚ್ಚು ಸಂಘಟಿತ ಉದ್ಯೋಗವು ಕಡಿಮೆ ಸಂಘಟಿತ ಉದ್ಯೋಗವನ್ನು ನೂಕಿ ತಳ್ಳಿಬಿಡಲು ಶಕ್ಯವಿರುತ್ತದೆ. ಬೇಕಾದಷ್ಟು ಬಂಡವಾಳ, ಸರಕಾರದ ಸಹಾಯಗಳ ಬಲವಿರುವಾಗ ತತ್ಪೂರ್ತಿಕವಾಗಿ ಹಾನಿ ಮಾಡಿಕೊಂಡು ಮಾರಲು ಸಂಘಟಿತ ಉದ್ಯೋಗಗಳಿಗೆ ಸಾಧ್ಯವಿದೆ. ಗಿರಣಿಯ ಬಟ್ಟೆ, ಕಬ್ಬಿಣದ ಸಾಮಾನು, ಸಕ್ಕರೆಗಳಿಗೆ ವಿದೇಶೀ ಸ್ಪರ್ಧೆಯಿಂದ ಬದುಕಲು ಒಂದಿಲ್ಲೊಂದು ರೀತಿಯಿಂದ ಸರಕಾರದ ಸಹಾಯ ಅಗತ್ಯವಿದೆ.

ಅಪರಿಮಿತ ವಿದೇಶೀ ಸ್ಪರ್ಧೆಗೆ ತುತ್ತಾದ ದೇಶವು ತುತ್ತಿಗೆ ಗತಿಯಿಲ್ಲದ ಸ್ಥಿತಿಗೆ ಇಳಿದೀತು; ವಿದೇಶೀಯರು ಮನಸ್ಸು ಮಾಡಿದರೆ ಅವರ ದಾಸ್ಯದಲ್ಲಿ ಬಿದ್ದೀತು. ಇದು ಸದ್ದಿಲ್ಲದ ಚಂಚಪ್ರವೇಶ. ಇನ್ನೊಂದೇ ಹೆಜ್ಜೆ ಮುಂದೆ ಹೋದರೆ ಕೈಗಾರಿಕೆ ಹಾಗೂ ಯಂತ್ರಗಳ ಸ್ಪರ್ಧೆಯಿಂದ ಇದೇ ಸ್ಥಿತಿ ಬರುವುದೆಂಬ ಸಂಗತಿ ತಿಳಿದೀತು. ನಮ್ಮೆದುರಿಗೇ ಈ ಕ್ರಮ ನಡೆದಿದೆ. ಹಿಟ್ಟಿನ ಗಿರಣಿಗಳು ಬೀಸುವ ಕಲ್ಲನ್ನೂ, ಎಣ್ಣೆಯ ಗಿರಣಿಗಳು, ಗಾಣವನ್ನು, ಭತ್ತದ ಗಿರಣಿಗಳು ಒನಕೆಯನ್ನೂ, ಸಕ್ಕರೆಯ ಗಿರಣಿಗಳು ಬೆಲ್ಲದ ಕೊಪ್ಪರಿಗೆಯನ್ನೂ ಪದಚ್ಯುತಗೊಳಿಸುತ್ತಿದೆ. ಇದರಿಂದ ಹಳ್ಳಿಗರ ಬಡತನವೂ ಧನವಂತರ ಸಿರಿವಂತಿಕೆಯೂ ಹೆಚ್ಚುತ್ತಿದೆ. ಇದೇ ರೀತಿ ಸಾಕಷ್ಟು ಕಾಲ ಸಾಗಿದರೆ ಬೇರೆ ಯಾವ ಪ್ರಯತ್ನವೂ ಇಲ್ಲದೆ ಹಳ್ಳಿಗಳು ನಶಿಸಿಹೋಗುವುವು. ಹಳ್ಳಿಗಳನ್ನು ಹಾಳುಗೆಡವಲು ಯಾವ ಝುಂಗಿಸ್‌ಖಾನನೂ ಇದಕ್ಕೂ ಒಳ್ಳೆಯ ಉಪಾಯ ಹುಡುಕಲಾರನು. ದುಃಖದ ಸಂಗತಿಯೆಂದರೆ ಹಳ್ಳಿಗರು ಪರಿವೆಯಿಲ್ಲದೆಯೇ ತಮ್ಮ ನಾಶಕ್ಕೆ ತಾವೇ ನೆರವಾಗುತ್ತಿದ್ದಾರೆ. ಅವರ ದಾರುಣಕತೆಯ ಪರಿಸಮಾಪ್ತಿಗಾಗಿಯೋ ಏನೋ, ಬೇಸಾಯವೂ ಲಾಭವಾಗುತ್ತಿಲ್ಲ. ಕೆಲವು ಬೆಳೆಗಳಿಂದ ಬೀಜದ ಕಿಮ್ಮತ್ತು ಹುಟ್ಟುವುದಿಲ್ಲ.

ಭಾರತದ ಹಳ್ಳಿಗರಿಗೆಲ್ಲ ಬೇರೆ ರೀತಿಯಿಂದ ಕೆಲಸ, ಯೋಗ್ಯ ಮಜೂರಿ ಸಿಗುವವರೆಗೂ ಖಾದಿಯೊಂದೇ ಗತಿ. "ಹಾಗಾದರೆ ಖಾದಿಯ ಪ್ರಗತಿ ಇಷ್ಟೇಕೆ ಮಂದವಾಗಿದೆ?" ಎಂದು ಸಂದೇಹವಾದಿಗಳು ಕೇಳಬಹುದು. ವಿಪುಲವಾದ ಜನಸಂಖ್ಯೆಯೊಡನೆ ಲೆಕ್ಕ ಹಾಕಿ ನೋಡಿದರೆ ಖಾದಿಯು ಸಾಧಿಸಿದ ಪ್ರಗತಿ ಕಡಿಮೆಯೆಂದೇ ಹೇಳಬೇಕು. ಆದರೆ ಬೇರೆ ಯಾವುದೇ ಒಂದು ಉದ್ಯೋಗವನ್ನು ತೆಗೆದುಕೊಂಡು ನೋಡಿದರೆ ಅದು ಬಹಳವಾಗಿಯೇ ಇದೆ. ಪ್ರತಿ ವರ್ಷ ಬಹು ದೊಡ್ಡ ರಕಮನ್ನು ಮಜೂರಿಯ ರೂಪದಿಂದ ಕೊಡಲಾಗುತ್ತಿದೆ. ಇದರ ಮೇಲ್ವಿಚಾರಕ್ಕಾಗಿ ತೀರ ಸ್ವಲ್ಪ ಖರ್ಚು ಮಾಡಲಾಗುತ್ತಿದೆ.

ಪ್ರತಿಕೂಲ ಪರಿಸ್ಥಿತಿಯಲ್ಲಿ ಖಾದಿ ಬೆಳೆಯುತ್ತಿದೆ. ಸರಕಾರದ ನಿಯಂತ್ರಣವಿಲ್ಲದೆ ನಿರಾತಂಕವಾಗಿ ಸ್ಪರ್ಧೆ ನಡೆಯುತ್ತಿದೆ. ಅರ್ಥಶಾಸ್ತ್ರಜ್ಞರೆನ್ನುವವರ ಅಭಿಪ್ರಾಯ ಪ್ರತಿಕೂಲವಾಗಿದೆ. ಖಾದಿಧಾರಿಗಳೇ ಅಗ್ಗವಾದ ಖಾದಿ ಬೇಕೆನ್ನುತ್ತಾರೆ. ಹಳ್ಳಿಗರಿಗೂ ನಗರವಾಸಿಗಳಿಗೂ ಈ ದೇಶದ ನಿಜವಾದ ಅರ್ಥಶಾಸ್ತ್ರವನ್ನು ತಿಳಿಸುವುದೇ ದೊಡ್ಡ ಪ್ರಶ್ನೆಯಾಗಿದೆ.

(ಹ., 1936)

* * *

ಖಾದಿಯ ಅರ್ಥನೀತಿಯು ಸರ್ವಸಾಮಾನ್ಯವಾದ ಅರ್ಥಶಾಸ್ತ್ರಕ್ಕಿಂತ ಬೇರೆಯಾಗಿದೆ. ಅರ್ಥಶಾಸ್ತ್ರವು ಮಾನವೀಯತೆಯನ್ನು ಗಣಿಸುವುದಿಲ್ಲ. ಮಾನವತೆಯನ್ನು ಬಿಟ್ಟು ಖಾದಿಯ ಅರ್ಥನೀತಿಯಿಲ್ಲ. ಅದು ಸ್ವಾರ್ಥಿ, ಇದು ನಿಸ್ವಾರ್ಥಿ. ಖಾದಿಯ ವಿಷಯದಲ್ಲಿ ಸ್ಪರ್ಧೆ ಲಾಭಾದಿಗಳು ಬರುವುದಿಲ್ಲ. ಖಾನಾವಳಿಗೂ ನಮ್ಮ ಅಡಿಗೆಯಮನೆಗೂ ಸ್ಪರ್ಧೆಯಾಗಲಾರದು. ಗೃಹಿಣಿಯು ತನ್ನ ಶ್ರಮದ ಬೆಲೆ, ಅಡಿಗೆ ಮನೆಯ ಕ್ಷೇತ್ರಗಳನ್ನೆಲ್ಲ ಎಂದೂ ಲೆಕ್ಕ ಹಾಕುತ್ತಿರುವುದಿಲ್ಲ. ಮಕ್ಕಳನ್ನು ಸಾಕುವ ಹಾಗೆ ಅಡಿಗೆ ಮಾಡುವುದೂ ತನ್ನ ಕರ್ತವ್ಯವೆಂಬುದನ್ನು ಅವಳು ಬಲ್ಲಳು. ಬೆಲೆಯ ಲೆಕ್ಕಾಚಾರಕ್ಕೆ ಅವಳು ಬಿದ್ದರೆ ಅಡಿಗೆ ಮನೆಗೂ ಮಕ್ಕಳಿಗೂ ಕೂಡಿಯೇ ಕೇಡು. ಅದನ್ನು ಸಾಧಿಸಿದವರೂ ಉಂಟು. ಆದರೆ ಅಂಥವರ ಸಂಖ್ಯೆ ಹೆಚ್ಚದಿರುವುದು ಸುದೈವ. ಮನೆಮನೆ ಕೇಡೆಸಗಿದ ಪಾಪ ಮಾಡಿದ್ದೇವೆ. ಶಾಂತಿದಾಯಕ ಚರಕವನ್ನು ಪುನಃ ಸ್ಥಾಪಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳೋಣ.

(ಯ.ಇ., 1931)

ಖಾದಿಯ ಕಾರ್ಯಕರ್ತರು ಅದರ ಅರ್ಥನೀತಿಯನ್ನು ಎಂದಿಗಿಂತಲೂ ಹೆಚ್ಚಿಗೆ ಆಳವಾಗಿ ತಿಳಿದುಕೊಳ್ಳುವ ಕಾಲ ಬಂದಿದೆ. ಸಾಮಾನ್ಯ ಅರ್ಥಶಾಸ್ತ್ರದ ತತ್ವಗಳಿಗಿಂತ ಇವು ಬೇರೆಯಾಗಿವೆ. ಉದಾಹರಣೆಗಾಗಿ: ಒಂದು ಕಡೆಗೆ ತಯಾರಿಸಿದ ಒಡವೆಗಳನ್ನು ಜಗತ್ತಿನ ಎಲ್ಲ ಭಾಗಗಳಿಗೂ ಕಳುಹಿಸುವುದು, ಕಳುಹಿಸುವ ಯತ್ನ ಮಾಡುವುದು ನಿಯಮವಾಗಿದೆ. ತಯಾರಕರು ಅವನ್ನು ಬಳಕೆ ಮಾಡಬೇಕಾಗಿಲ್ಲ. ಖಾದಿಯ ವಿಷಯದಲ್ಲಿ ಇವು ಸಲ್ಲದು. ಅದು ತಯಾರಾದ ಕಡೆಗೇ ಉಪಯೋಗವಾಗಬೇಕು. ವಿಶೇಷವಾಗಿ ನೂಲುವವರೂ ನೇಕಾರರೇ ಉಪಯೋಗಿಸಬೇಕು. ಈ ರೀತಿ ಉಪಯೋಗವಾದರೆ ಖಾದಿಗೆ ತಂತಾನೇ ಗಿರಾಕಿ ಖಾತ್ರಿಯಾದಂತೆ ಈ ಆದರ್ಶಕ್ಕೆ ಮುಟ್ಟುವುದು ಕಠಿಣ. ಆದರೆ ಇಂಥ ಆದರ್ಶ ಸಾಧನೆಯಿಂದಲೇ ಖಾದಿಗೆ ಬೆಲೆ. ನೂಲುವವರಿಗೂ ನೇಕಾರರಿಗೂ ಈ ಸುಲಭ ತತ್ವಗಳನ್ನು ತಿಳಿಸಿಕೊಡಬೇಕು. ಅವರು ಉಪಯೋಗಿಸಿ ಹೆಚ್ಚಿಗೆ ಉಳಿದ ಖಾದಿಯನ್ನು ಅದು ತಯಾರಾದ ಹಳ್ಳಿಯಲ್ಲಿಯೇ ಮಾರಬೇಕು. ಇನ್ನೂ ಉಳಿದರೆ ಅದೇ ಜಿಲ್ಲೆಯಲ್ಲಿ ಮಾರಬೇಕು. ಅನಾದಿ ಕಾಲದಿಂದಲೂ ಕೆಲವು ಕುಟುಂಬಗಳು ವಿಶಿಷ್ಟ ಮಾದರಿಯ ಬಟ್ಟೆಯನ್ನು ತಯಾರಿಸುತ್ತಾ ಬಂದಿವೆ. ಅವುಗಳಿಗೆ ಅಷ್ಟೊಂದು ತೊಂದರೆಯಿಲ್ಲ. ಸಾಮಾನ್ಯವಾದ ಹಳ್ಳಿಗರ ಖಾದಿಯ ಗತಿ ಏನೇ ಆದರೂ ಅವು ಬದುಕುವುವು.

ಖಾದಿ ಕಾರ್ಯಕರ್ತರಲ್ಲಿ ವಿಚಾರವಂತರಾದವರು ಹಳ್ಳಿಗರ ಖಾದಿಯ ಕಡೆಗೆ– ಅದರ ನಮೂನೆ, ತಾಳಿಕೆಗಳ ಕಡೆಗೆ ಹೆಚ್ಚು ಲಕ್ಷ್ಯಹಾಕಬೇಕು. ಪೇಟೆ ಪಟ್ಟಣಗಳಲ್ಲಿ ಖಾದಿಯ ಮಾರಾಟ ಹೆಚ್ಚಿಸಲು ಬಹಳ ಕಾತರಪಡಬೇಕಾಗಿಲ್ಲ. ಸದಾಕಾಲವೂ ಹಳ್ಳಿಗರ ಬಟ್ಟೆಯಾಗಿ ನಿಂತಾಗಲೇ ಖಾದಿಯು ಶಾಶ್ವತ.

(ಹ., 1934)

* * *

ಹಣಕ್ಕಿಂತಲೂ ಬದುಕು ಹೆಚ್ಚಿನದು. ಯಾವ ಕೆಲಸವನ್ನೂ ಮಾಡಲಾರದ, ನಮ್ಮ ಬಡ ಆದಾಯಕ್ಕೆ ಭಾರವಾದ ಮುದಿ ತಂದೆ ತಾಯಿಗಳನ್ನೂ, ನಮ್ಮ ಸುಖಕ್ಕೆ ಅಗತ್ಯವಿಲ್ಲದ ಹಾಗೂ ಯಾವ ಪ್ರತಿಫಲವನ್ನೂ ಕೊಡದ ಮಕ್ಕಳನ್ನು ಕೊಂದುಹಾಕುವುದು ಅಗ್ಗವೆನಿಸಬಹುದು. ಆದರೆ ಅವರನ್ನು ನಾವು ಕೊಂದು ಹಾಕುವುದಿಲ್ಲ. ಅವರ ಪೋಷಣೆಯ ವೆಚ್ಚ ಎಷ್ಟೇ ಬಂದರೂ ಅವರನ್ನು ಸಲಹುವುದು ನಮ್ಮ ಧರ್ಮವೆಂದು ತಿಳಿಯುತ್ತೇವೆ. ಖಾದಿಯ ವಿಷಯವೂ ಹೀಗೆ ಇದೆ. ಬೆಲೆಯ ಲೆಕ್ಕ ಹಾಕುವುದು ನಮ್ಮ ಚಟವಾಗಿಬಿಟ್ಟಿದೆ. ಖಾದಿಯ ವಿಷಯದಲ್ಲೂ ಹಾಗೆ ಮಾಡಹೋಗುತ್ತೇವೆ. ಈ ವಿಚಾರಕ್ರಮ ಬದಲಾಗಬೇಕು. ರಾಷ್ಟ್ರದ ಹಿತದ ದೃಷ್ಟಿಯಿಂದ ನೋಡಿದರೆ ಖಾದಿಯು ಎಂದೂ ತುಟ್ಟಿಯಾಗದು.

(ಹ., 1935)

* * *

ಸ್ವದೇಶೀ ಧರ್ಮ ಮತ್ತು ಗ್ರಾಮೋದ್ಯೋಗಗಳು

ಸ್ವದೇಶಿ ಧರ್ಮ : ಹೇಗಾದರೂ ಒಂದಿಷ್ಟು ನೂಲು ತೆಗೆದು ಖಾದಿ ತೊಟ್ಟುಕೊಂಡುಬಿಟ್ಟರೆ ಸ್ವದೇಶೀ ಧರ್ಮ ಪಾಲಿಸಿದಂತಾಯಿತೆಂದು ತಿಳಿಯುವುದು ಶುದ್ಧ ಭ್ರಮೆ. ಸ್ವದೇಶೀ ಧರ್ಮಾಚರಣೆಯಲ್ಲಿ ಖಾದಿಯು ಇಡಲೇಬೇಕಾದ ಪ್ರಥಮ ಹೆಜ್ಜೆ. ಆದರೆ ಉಡುಗೆ ತೊಡುಗೆಯ ವಿಷಯದಲ್ಲಿ ಮಾತ್ರ ಖಾದಿಯನ್ನು ಬಳಸಿ ಮಿಕ್ಕೆಲ್ಲ ವಿಷಯಗಳಲ್ಲಿ ವಿದೇಶೀ ವಸ್ತುಗಳಿಂದ ತಮ್ಮ ಚಾಪಲ್ಯ ತೀರಿಸಿಕೊಳ್ಳುವ ಜನರನ್ನು ಆಗಾಗ್ಗೆ ಕಾಣುತ್ತೇವೆ. ಅಂಥವರು ಸ್ವದೇಶಿ ವ್ರತ ಪಾಲಿಸುತ್ತಿಲ್ಲ; ಕೇವಲ ಉಡುಪಿನ ಶೈಲಿಯನ್ನು ಅನುಕರಿಸುತ್ತಾರೆ. ಸ್ವದೇಶ ವ್ರತಸ್ಥನು ತನ್ನ ಸುತ್ತಲಿನ ಪರಿಸ್ಥಿತಿಯನ್ನು ಅರಿತು, ಸ್ಥಳೀಯ ಒಡವೆಗಳನ್ನೇ ಕೊಂಡು ತನ್ನ ಸುತ್ತಮುತ್ತಲಿನವರಿಗೆ ಕೈಲಾದ ಸಹಾಯ ಮಾಡುತ್ತಾನೆ. ಅವು ಹೊರಗಿನ ಒಡವೆಗಳಿಗಿಂತ ಕೆಳದರ್ಜೆಯವಿದ್ದರೂ ತುಟ್ಟಿಯಾಗಿದ್ದರೂ ಅವನು ಗಣಿಸುವುದಿಲ್ಲ. ಅವುಗಳ ದೋಷನಿವಾರಣೆಗೆ ಯತ್ನಿಸುತ್ತಾನೆ; ದೋಷಗಳಿವೆಯೆಂದು ಅವನ್ನು ಬಿಟ್ಟುಕೊಟ್ಟು ವಿದೇಶೀ ಒಡವೆಗಳನ್ನು ಕೊಳ್ಳುವುದಿಲ್ಲ.

(1931)

* * *

ಖಾದಿಯೊಂದೇ ತೊಳಲಾಡುತ್ತಿರುವ ಉದ್ಯೋಗವಲ್ಲ. ಸಂಘಟಿತವಾಗದ ಚಿಕ್ಕಪುಟ್ಟ ಉದ್ಯೋಗಗಳ ಕಡೆಗೆಲ್ಲ ಲಕ್ಷ್ಯ ಹಾಕಬೇಕಾಗಿದೆ. ಅವುಗಳನ್ನು ಉಳಿಸುವ ಪ್ರಯತ್ನ ಮಾಡದಿದ್ದರೆ ಅವು ತೊಳೆದುಹೋಗುವುವು. ದೊಡ್ಡ ದೊಡ್ಡ ಉದ್ಯಮಗಳ ಒಡವೆಗಳು ಬಂದು ಈಗಾಗಲೇ ಎಷ್ಟೋ ಚಿಕ್ಕಪುಟ್ಟ ಉದ್ಯೋಗಗಳನ್ನು ಮೂಲೆಗೆ ಸರಿಸಿಬಿಟ್ಟಿವೆ. ಅವುಗಳಿಗೆಲ್ಲ ಸಹಾಯ ಸಲ್ಲಬೇಕು.

ಸಕ್ಕರೆಯ ಉದ್ಯಮವನ್ನೇ ತೆಗೆದುಕೊಳ್ಳುವ ಬಟ್ಟೆಯ ಉದ್ಯಮವನ್ನು ಬಿಟ್ಟರೆ ಇದೇ ದೊಡ್ಡದು. ಸಕ್ಕರೆಯ ಗಿರಣಿಗಳ ಸಂಖ್ಯೆ ಹೆಚ್ಚುತ್ತಿದೆ. ಅದಕ್ಕೆ ಅನುಕೂಲವಾದ ಕಾನೂನಿನಿಂದ ಅದು ಬೆಳೆದುಕೊಂಡಿತು. ಇಂದು ಬೆಲ್ಲವು

ಗತಕಾಲದ ವಸ್ತುವಾಗಿಬಿಟ್ಟಿದೆ. ಸಕ್ಕರೆಯ ವ್ಯಾಪ್ತಿ ಅಷ್ಟರಮಟ್ಟಿಗೆ ಆಗಿದೆ. ಬೆಲ್ಲದಲ್ಲಿ ಸಕ್ಕರೆಗಿಂತ ಹೆಚ್ಚು ಆಹಾರಸತ್ವವಿದೆ. ಈ ಗ್ರಾಮೋದ್ಯೋಗವನ್ನು ಉಳಿಸುವ ಉಪಾಯಗಳನ್ನು ಹುಡುಕಬೇಕಾಗಿದೆ. ಇದು ಒಂದು ಉದಾಹರಣೆ ಮಾತ್ರ

ಚಿಕ್ಕಪುಟ್ಟ ಉದ್ಯೋಗಗಳನ್ನು, ಗುಡಿ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು, ಪ್ರೋತ್ಸಾಹಿಸುವುದು ನಿಜವಾದ ಸ್ವದೇಶಿ. ಅದರಿಂದ ಮೂಕ ಜನತೆಗೆ ಸಹಾಯವಾಗುತ್ತದೆ; ಅವರ ರಚನಾತ್ಮಕ ಶಕ್ತಿ, ಕೌಶಲ್ಯಗಳಿಗೆ ಪ್ರಕಟವಾಗಲು ಅನುಕೂಲವಾಗುತ್ತದೆ. ಸದ್ಯ ಹಾಳಾಗುತ್ತಿರುವ ಮಾನವ ಶಕ್ತಿಯನ್ನೆಲ್ಲ ಅದು ಉಪಯೋಗಿಸಬಹುದು. ಖಾದಿಯ ವಿಷಯದಲ್ಲಿ ಹೇಳಿದಂತೆ ಇಲ್ಲಿಯೂ ಹೇಳುತ್ತೇನೆ: ಬೇರೆ ದಂಧೆಗಳಿಂದ ಹೆಚ್ಚಿಗೆ ಗಳಿಸುತ್ತಿರುವವರು ಅವನ್ನು ಬಿಟ್ಟು ಈ ಉದ್ಯೋಗಗಳಿಗೆ ಬರಬೇಕಾಗಿಲ್ಲ. ಕೆಲಸವಿಲ್ಲದವರು ಮಾತ್ರ ಇವುಗಳಲ್ಲಿ ತೊಡಗಬಹುದು.

ಇದರಿಂದ ದೊಡ್ಡ ಉದ್ಯಮಗಳಿಗೆ ಧಕ್ಕೆ ಬರದು. ಅವುಗಳಿಂದ ಗ್ರಾಮೋದ್ಯೋಗಗಳು ಪೂರಕವಾಗುವುವು. ದೊಡ್ಡ ಉದ್ಯಮಗಳ ಒಡೆಯರು ಸಹ ಈ ಕೆಲಸದಲ್ಲಿ ಆಸಕ್ತಿ ವಹಿಸಲೆಂದು ಹಾರೈಸುತ್ತೇನೆ. ಯಾಕೆಂದರೆ ಇದು ಮಾನವ ಹಿತಸಾಧನೆಯನ್ನೇ ಮುಖ್ಯವಾಗಿಟ್ಟುಕೊಂಡ ಕೆಲಸ. ನಾನು ಗಿರಣಿಯ ಮಾಲಿಕರ ಹಿತವನ್ನೂ ಬಯಸುತ್ತೇನೆ. ಸಾಧ್ಯವಾದಾಗೆಲ್ಲ ನಾನು ಅವರಿಗೆ ನೆರವಾಗಿದ್ದೇನೆ.

(1934)

* * *

ಗ್ರಾಮೋದ್ಯೋಗಗಳು : ಗ್ರಾಮೋದ್ಯೋಗಗಳ ವಿಷಯವಾಗಿ ಕಾಂಗ್ರೆಸ್ಸು ಸ್ವೀಕರಿಸಿದ ಗೊತ್ತುವಳಿಯ ಲೇಖಕನೆಂದು ಗ್ರಾಮೋದ್ಯೋಗಗಳ ಅಭಿವೃದ್ಧಿಗಾಗಿ ರಚಿಸಲಾಗುತ್ತಿರುವ ಸಂಘದ ಮಾರ್ಗದರ್ಶಕನೆಂದು ಈ ಬಗ್ಗೆ ನನಗೆ ತೋರಿದ್ದನ್ನು ಜನತೆಯ ಮುಂದಿಡುತ್ತೇನೆ:

ನನ್ನ ಹರಿಜನ ಪ್ರವಾಸದಲ್ಲಿ ಮಲಬಾರಕ್ಕೆ ಹೋದಾಗ ಈ ಬಗ್ಗೆ ಒಂದು ಸಂಘವನ್ನು ಸ್ಥಾಪಿಸಬೇಕೆಂಬ ವಿಚಾರ ಮೂಡಿತು. ಓರ್ವ ಖಾದೀ ಕಾರ್ಯಕರ್ತರೊಡನೆ ಮಾತಾಡುತ್ತಿದ್ದೆ. ಹಿಂದುಮುಂದಿನ ವಿಚಾರವಿಲ್ಲದೆ,

ನಿಷ್ಕರುಣೆಯಿಂದ ಹಳ್ಳಿಗರ ಸೊತ್ತನ್ನು ಪಟ್ಟಣಿಗರು ಹಾರಿಸಿಕೊಂಡು ಹೋಗಿದ್ದಾರೆ. ಅವರಿಗೆ ಅವನ್ನೆಲ್ಲ ಪುನಃ ದೊರಕಿಸಿಕೊಡುವ ಯತ್ನ ಮಾಡಬೇಕು. ಹೆಚ್ಚಿನ ತೊಂದರೆಗೀಡಾದವರೆಂದರೆ ಹರಿಜನರು. ಅವರು ಆಯ್ದುಕೊಳ್ಳಬಹುದಾದ ಉದ್ಯೋಗಗಳಿಗೆ ಮಿತಿಯಿದೆ. ಅವೂ ಕೈತಪ್ಪಿಹೋದರೆ ಅವರ ಸ್ಥಿತಿ ಪಶುಗಳಿಗೆ ಸಮಾನವಾಗುತ್ತದೆ.

ಸಾಮಾನ್ಯವಾಗಿ ಹಳ್ಳಿಗರ ಸ್ಥಿತಿ ಇದಕ್ಕೂ ಚೆನ್ನಾಗಿರುವುದಿಲ್ಲ. ನೆಲವನ್ನು ಕೀರಿ ಕೆಲವು ತುತ್ತು ಅನ್ನ ದೊರಕಿಸುವುದೊಂದೇ ಅವರ ಉದ್ಯೋಗವಾಗುತ್ತಿದೆ. ತುಂಡು ಭೂಮಿಯ ಸಾಗುವಳಿಯಿಂದ ನಮ್ಮ ಬೇಸಾಯ ಲಾಭದಾಯಕವಾಗುತ್ತಿಲ್ಲ. ಹಳ್ಳಿಗರ ಬದುಕು ನಿರ್ಜೀವವಾಗಿದೆ. ಕ್ರಮೇಣ ಉಪವಾಸವೇ ಗತಿ. ಸಾಲದ ಭಾರ ಬೇರೆ. ಸಾಹುಕಾರನು ಸಾಲ ಕೊಡುತ್ತ ಹೋಗುತ್ತಾನೆ. ಕೊಡದಿದ್ದರೆ ಹಿಂದೆ ಕೊಟ್ಟಿದ್ದೆಲ್ಲ ಮುಳುಗಿಹೋಗುತ್ತದೆ.

ಗ್ರಾಮೋದ್ಯೋಗಗಳ ನಾಶದಿಂದ ಭಾರತದ ಏಳು ಲಕ್ಷ ಹಳ್ಳಿಗಳ ನಾಶ ಸಂಪೂರ್ಣ ಆಗುತ್ತದೆ. ಆದ್ದರಿಂದ ಅಖಿಲ ಭಾರತ ಗ್ರಾಮೋದ್ಯೋಗಗಳ ಸಂಘವು ಬದುಕಿರುವ ಗ್ರಾಮೋದ್ಯೋಗಗಳನ್ನು ಪ್ರೋತ್ಸಾಹಿಸಬೇಕಾಗಿದೆ. ನಾಶವಾಗುತ್ತಿರುವ ಅಥವಾ ನಾಶವಾದವುಗಳನ್ನು ಸಾಧ್ಯವಾದರೆ ಯೋಗ್ಯವೆನಿಸಿದರೆ ಪುನರುಜ್ಜೀವನಗೊಳಿಸಬೇಕು. ಈ ಕ್ರಮಗಳು ಹಳ್ಳಿಗಳ ಪದ್ಧತಿಯಿಂದಲೇ ಆಗಬೇಕು. ಅಂದರೆ ಪ್ರಾಚೀನ ಕಾಲದಿಂದಲೂ ನಡೆದುಬಂದಂತೆ ಹಳ್ಳಿಗರು ತಮ್ಮ ತಮ್ಮ ಗುಡಿಸಲುಗಳಲ್ಲಿಯೇ ದುಡಿಯುವಂತಿರಬೇಕು. ಹತ್ತಿ ಅರೆಯುವುದು, ಹಿಂಜುವುದು, ನೂಲುವುದು, ನೇಯುವುದು, ಅವುಗಳಲ್ಲಿಯಂತೆ ಇಲ್ಲಿಯೂ ಸುಧಾರಣೆ ಮಾಡಬಹುದು.

ಪ್ರಾಚೀನ ಪದ್ಧತಿಯು ವ್ಯಕ್ತಿನಿಷ್ಠವಾಗಿದೆಯೆಂದೂ ಅದರಿಂದ ಸಾಮೂಹಿಕ ಕಾರ್ಯಸಾಧನೆಯಾಗುವುದೆಂದೂ, ಒಬ್ಬರು ಅಭಿಪ್ರಾಯಪಟ್ಟಿದ್ದಾರೆ. ಅದರಲ್ಲಿ ಹುರುಳಿದ್ದಂತೆ ನನಗೆ ತೋರುವುದಿಲ್ಲ. ಗುಡಿಸಲುಗಳಲ್ಲಿಯೇ ಒಡವೆಗಳನ್ನು ತಯಾರಿಸಿದರೂ ಅವುಗಳನ್ನು ಒಂದೆಡೆಗೆ ಕೂಡಿಸಿ ಮಾರಿ ಲಾಭವನ್ನು ಹಂಚಬಹುದು. ಮೇಲ್ವಿಚಾರಣೆಗೆ ಒಳಪಟ್ಟು ಯೋಜನಾಬದ್ಧವಾಗಿ ಹಳ್ಳಿಗರು ಕೆಲಸ ಮಾಡಬಹುದು. ಕಚ್ಚಾಸರಕನ್ನು ಸಾಮೂಹಿಕವಾಗಿ ಕೂಡಿಟ್ಟ

ಸಂಗ್ರಹದಿಂದ ಕೊಳ್ಳಬಹುದು. ಸಹಕಾರೀ ತತ್ವದಂತೆ ನಡೆದುಕೊಳ್ಳುವ ಪ್ರವೃತ್ತಿಯುಂಟಾದರೆ ಹಾಗೆ ನಡೆಯಲಿಕ್ಕೆ ತುಂಬಾ ಅವಕಾಶವಿದೆ. ಶ್ರಮವಿಭಾಗ ಸಾಧಿಸಬಹುದು. ವೇಳೆಯ ಉಳಿತಾಯ ಮಾಡಿಕೊಳ್ಳಬಹುದು. ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಳ್ಳಬಹುದು. ಚರಕಾ ಸಂಘವು ಇವೆಲ್ಲವನ್ನೂ 5000ಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ಮಾಡುತ್ತಿದೆ.

ಆದರೆ ಹಳ್ಳಿಯ ಸೌರವ್ಯೂಹದಲ್ಲಿ ಖಾದಿಯೇ ಸೂರ್ಯನು. ಇತರ ಉದ್ಯೋಗಗಳೇ ಗ್ರಹಗಳು. ಖಾದಿಯಿಲ್ಲದೆ ಇತರ ಉದ್ಯೋಗಗಳ ಪುನರುಜ್ಜೀವನವಾದ ಹೊರತು ಖಾದಿಯ ಹೆಚ್ಚಿನ ಪ್ರಗತಿ ಸಾಧ್ಯವಿಲ್ಲ. ಹಳ್ಳಿಗರು ತಮ್ಮ ಬಿಡುವನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬೇಕಾದರೆ ಗ್ರಾಮಜೀವನದ ಎಲ್ಲ ಅಂಗಗಳಿಗೂ ಲಕ್ಷ್ಯಹಾಕಬೇಕಾಗುತ್ತದೆ. ಚರಕಾ ಸಂಘ, ಗ್ರಾಮೋದ್ಯೋಗ ಸಂಘಗಳು ಈ ಉದ್ದೇಶ ಇಟ್ಟುಕೊಂಡಿವೆ.

(ಹ. 1934)

* * *

ಗ್ರಾಮೋದ್ಯೋಗಗಳ ಬಗ್ಗೆ ನಾನು ಹೇಳಿದ್ದು ತನಗೆ ಸ್ಪಷ್ಟವಾಗಿಲ್ಲವೆಂದು ಮಿತ್ರರೊಬ್ಬರು ತಿಳಿಸಿದ್ದಾರೆ. ಇನ್ನೂ ಎಷ್ಟೋ ಜನರಿಗೂ ಆಗಿರಲಿಕ್ಕಿಲ್ಲ.

ಸಲ್ಪದರಲ್ಲಿ ಹೇಳುವುದಾದರೆ ಹಳ್ಳಿಗಳಲ್ಲಿ ತಯಾರಾದ ಒಡವೆಗಳನ್ನೇ ನಾನು ಖರೀದಿಸಿ ಬಳಸಬೇಕು. ಅವು ನೋಡಲಿಕ್ಕೆ ಅಷ್ಟು ಅಂದವಾಗಿರಲಿಕ್ಕಿಲ್ಲ. ವಿದೇಶೀ ಅಥವಾ ಪಟ್ಟಣಗಳಲ್ಲಿ ಫ್ಯಾಕ್ಟರಿಗಳಲ್ಲಿ ತಯಾರಾದ ಒಡವೆಗಳು ಹೆಚ್ಚು ಅಂದವೆಂದು ಹಳ್ಳಿಯನ್ನು ಕಡೆಗಣಿಸಬಾರದು. ಅವು ನಯವಾಗುವಂತೆ ಹಳ್ಳಿಯ ಕೆಲಸಗಾರರನ್ನು ಪ್ರೇರೇಪಿಸಬೇಕು. ಅಂಥ ಪ್ರಯತ್ನ ಯಶಸ್ವಿಯಾದೀತೋ ಇಲ್ಲವೋ ಎಂದು ನಾವು ಚಿಂತಿಸಬೇಕಾಗಿಲ್ಲ. ರಾಷ್ಟ್ರದ ಅಭಿವೃದ್ಧಿಯ ಕಾರ್ಯದಲ್ಲಡಗಿದ ಎಷ್ಟೋ ತೊಂದರೆಗಳಿಗೆ ನಾವು ಹೆದರಿಲ್ಲ. ಆದ್ದರಿಂದ ಹಳ್ಳಿಗಳ ಪುನರುಜ್ಜೀವನವು ನಮಗೆ ಅಗತ್ಯವೆಂದು ಖಾತ್ರಿಯಾದರೆ, ಅದರಿಂದಲೇ ಅಸ್ಪೃಶ್ಯತಾ ನಿವಾರಣೆ ಸಾಧ್ಯವೆಂದು ಮನವರಿಕೆಯಾದರೆ ನಾವು ಹಳ್ಳಿಗೆ ಹಿಂತಿರುಗಬೇಕು; ಹಳ್ಳಿಗರು ಪಟ್ಟಣದ ಜೀವನವನ್ನು ಅನುಕರಿಸದಂತೆ ನೋಡಿಕೊಳ್ಳಬೇಕು. ಈ ವಿಚಾರ

ಸರಿಯಾದುದಾದರೆ ನಾವು ಸ್ವತಃ ಆ ದಿಶೆಯಲ್ಲಿ ಹೋಗಹತ್ತುತ್ತೇವೆ. ಮಿಲ್ ಕಾಗದದ ಬದಲು ಕೈಯಿಂದ ತಯಾರಿಸಿದ ಕಾಗದವನ್ನು, ಫೌಂಟೈನ್ ಅಥವಾ ಲೆಕ್ಕಣಿಯ ಬದಲು ಗಲಗನ್ನು, ಫ್ಯಾಕ್ಟರಿಗಳಲ್ಲಿ ತಯಾರಾದ ಮಸಿಯ ಬದಲು ಹಳ್ಳಿಯ ಮಸಿಯನ್ನು ಬಳಸಹತ್ತುತ್ತೇವೆ. ಇನ್ನೂ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಹಳ್ಳಿಗರು ಮಾಡದಿದ್ದ, ಮಾಡಲಾರದ ಮನೆ ಬಳಕೆಯ ವಸ್ತುವೊಂದೂ ಇರಲಾರದು. ಒಮ್ಮೆ ಹಳ್ಳಿಯಲ್ಲಿ ತಯಾರಾದ ವಸ್ತುಗಳನ್ನೇ ಕೊಳ್ಳುವ ನಿರ್ಧಾರ ಮಾಡಿದರೆ ಸಾಕು, ಹಳ್ಳಿಗರಿಗೆ ಲಕ್ಷಾಂತರ ರೂಪಾಯಿಗಳನ್ನು ದೊರಕಿಸಿಕೊಡಬಹುದು. ಸದ್ಯ ನಾವು ಹಳ್ಳಿಗರ ಸುಲಿಗೆ ನಡೆಸಿದ್ದೇವೆ. ಈ ದುಃಸ್ಥಿತಿಯನ್ನು ತಡೆಯಬೇಕು. ಪಟ್ಟಣಿಗನಿಗೆ ಹಳ್ಳಿಗಳು 'ಅಸ್ಪೃಶ್ಯ'ವಾಗಿವೆ. ಅವನಿಗೆ ಹಳ್ಳಿಗರ ಪರಿಚಯವಿಲ್ಲ. ಅವರೊಡನೆ ಅವನು ಇರಲಾರ. ಅವನು ಹಳ್ಳಿಯಲ್ಲಿ ಉಳಿದರೆ ಪಟ್ಟಣದ ಜೀವನಕ್ರಮವನ್ನೇ ಅಲ್ಲೂ ಇಳಿಸಹೋಗುತ್ತಾನೆ. ಮೂವತ್ತು ಕೋಟಿ ಜನರಿಗೆ ಸಾಲುವಷ್ಟು ಪಟ್ಟಣಗಳನ್ನು ನಿರ್ಮಿಸಿದರೆ ಅಡ್ಡಿಯಿಲ್ಲ. ಹಳ್ಳಿಗಳ ಪುನರುಜ್ಜೀವನ ದಾರಿದ್ರ್ಯ ನಿರ್ಮೂಲನೆಗಳಿಗಿಂತ ಅದು ಕಠಿಣ.

(ಹ., 1934)

* * *

ಪುನರುಜ್ಜೀವನಗೊಳಿಸಲಿಕ್ಕಾಗಿ ಯಾವ ಗ್ರಾಮೋದ್ಯೋಗಗಳನ್ನು ತೆಗೆದುಕೊಳ್ಳಬೇಕು? ಹಳ್ಳಿಗಳಿಗೆ ಹೋಗಿ ವಿಚಾರಿಸಿ, ಉದ್ಯೋಗಗಳ ಪಟ್ಟಿ ತಯಾರಿಸಿ, ಅವುಗಳನ್ನು ವರ್ಗೀಕರಿಸುವವರೆಗೂ ಈ ವಿಷಯ ಖಚಿತವಾಗಲು ಸಾಧ್ಯವಿದ್ದಿಲ್ಲ. ಆದರೆ ಜೀವನಕ್ಕೆ ಅಗತ್ಯವಾದ ಎರಡು ವಸ್ತುಗಳನ್ನು ನಾನು ಆಯ್ದೆ: ಅನ್ನ ಬಟ್ಟೆ, ಖಾದಿಯಂತೂ ಇದ್ದೇ ಇತ್ತು. ಅನ್ನದ ವಿಷಯದಲ್ಲಿ ಸ್ವಾವಲಂಬನ ಕಳೆದುಕೊಳ್ಳಹತ್ತಿದೆವು. ಕೆಲವೇ ವರ್ಷಗಳ ಹಿಂದೆ ನಾವು ಬತ್ತ ಕುಟ್ಟಿಕೊಳ್ಳುತ್ತಿದ್ದೆವು. ಹಿಟ್ಟು ಬೀಸಿಕೊಳ್ಳುತ್ತಿದ್ದೆವು. ಆರೋಗ್ಯದ ಪ್ರಶ್ನೆಯನ್ನು ಸದ್ಯ ಬದಿಗಿಡುವ ಹಿಟ್ಟಿನ ಗಿರಣಿ, ಬತ್ತದ ಗಿರಣಿಗಳಿಂದ ಅಸಂಖ್ಯ ಹೆಂಗಸರು ನಿರುದ್ಯೋಗಿಗಳಾಗಿದ್ದಾರೆ. ಬೆಲ್ಲದ ಸ್ಥಾನವನ್ನು ಸಕ್ಕರೆಯು ಆಕ್ರಮಿಸುತ್ತದೆ. ಬಿಸ್ಕೀಟು ಮಿಠಾಯಿಗಳಂಥ ತಯಾರಾದ ತಿಂಡಿಗಳೂ ಹಳ್ಳಿಗಳನ್ನು ಪ್ರವೇಶಿಸಿವೆ. ಹಳ್ಳಿಗರು ತಮ್ಮ ಉದ್ಯೋಗಗಳನ್ನೆಲ್ಲ ಕಳೆದುಕೊಂಡು, ಸುಲಿಗೆಗಾರರಿಗಾಗಿ ಕಚ್ಚಾ ಸರಕುಗಳನ್ನಷ್ಟೇ ಉತ್ಪಾದಿಸುತ್ತಿದ್ದಾರೆ. ಅವರು

ತೆರುವುದಕ್ಕೆ ಕೊನೆಯಿಲ್ಲದಾಗಿದೆ. ಅವರಿಗೆ ಬರುವುದು ಮಾತ್ರ ತೀರ ಸ್ವಲ್ಪ. ಕಚ್ಚಾ ಸರಕಿನಿಂದ ಬರುವ ಸ್ವಲ್ಪ ಉತ್ಪನ್ನವೂ ಸಕ್ಕರೆ ಹಾಗೂ ಬಟ್ಟೆಯ ವ್ಯಾಪಾರಿಗಳಿಗೆ ಹೋಗುತ್ತದೆ. ಇಂದಿನ ಹಳ್ಳಿಗನಿಗೆ ಐವತ್ತು ವರ್ಷಗಳ ಹಿಂದಿನ ಹಳ್ಳಿಗನ ಗತಿ ಮಿತಿ ಇಲ್ಲ. ಅಂದಿನ ಹಳ್ಳಿಗನು ತನ್ನ ದೇಹ ಬುದ್ಧಿಗಳನ್ನು ಉಪಯೋಗಿಸಿ ತನಗೆ ಬೇಕಾಗುವ ವಸ್ತುಗಳನ್ನು ತಯಾರಿಸಿಕೊಳ್ಳುತ್ತಿದ್ದನು. ಇಂದಿನವನು ಪರಾವಲಂಬಿಯೂ ನಿರುದ್ಯೋಗಿಯೂ ಆಗಿದ್ದಾನೆ. ಹಳ್ಳಿಯ ಕಸುಬುದಾರರ ಗತಿಯೂ ಹಾಗೇ ಆಗಿದೆ. ಹಳ್ಳಿಯ ಬಡಿಗನಿಗೆ ಒಂದು ಚರಕ ಮಾಡಿಕೊಡಲು ಹೇಳಿರಿ; ಕಮ್ಮಾರನಿಗೆ ಒಂದು ಕದರು ಮಾಡಿಕೊಡಲು ಹೇಳಿರಿ. ನಿಮಗೆ ನಿರಾಶೆಯಾಗುವುದು. ಪರಿಸ್ಥಿತಿ ಇಲ್ಲಿಗೆ ಬಂದಿದೆ.

'ಹಳ್ಳಿಗೆ ತಿರುಗಿರಿ' ಎನ್ನುವುದು ಪ್ರಗತಿಯ ಗಡಿಯಾರದ ಮುಳ್ಳನ್ನು ಹಿಂದೆ ಸರಿಸಿದಂತೆ – ಎಂದು ಕೆಲವರು ಟೀಕಿಸುತ್ತಾರೆ. ಪಟ್ಟಣಿಗರು ಹಳ್ಳಿಗೆ ಹೋಗಬೇಕೆಂದು ನಾನು ಹೇಳುತ್ತಿಲ್ಲ. ಹಳ್ಳಿಗರಿಗೆ ಸಲ್ಲತಕ್ಕದನ್ನು ಕೊಟ್ಟುಬಿಡಿರೆಂದು ಹೇಳುತ್ತಿದ್ದೇನೆ. ಪಟ್ಟಣಿಗರಿಗೆ ಕಚ್ಚಾಸರಕುಗಳೆಲ್ಲ ಹಳ್ಳಿಗಳಿಂದಲೇ ಬರಬೇಕಲ್ಲವೇ? ಹಾಗಿದ್ದರೆ ಅವುಗಳಿಂದ ಒಡವೆಗಳನ್ನು ತಯಾರಿಸಲಿಕ್ಕೆ ಹಳ್ಳಿಗರಿಗೆ ಏಕೆ ಹೇಳಿಕೊಡಬಾರದು? ಹಿಂದೆ ಅವರು ಮಾಡುತ್ತಿದ್ದಿಲ್ಲವೆ? ಈಗಲೂ ಮಾಡಲಿಕ್ಕೆ ಸಿದ್ಧರಿಲ್ಲವೆ?

ಆದರೆ ಈ ಕೆಲಸ ಸುಲಭವಲ್ಲ. ಒಂದು ದೃಷ್ಟಿಯಿಂದ ಖಾದಿಗಿಂತಲೂ ಈ ಗ್ರಾಮೋದ್ಯೋಗಗಳ ಕೆಲಸ ಬಿಗಿಯಾದುದಾಗಿದೆ. ಖಾದಿಯ ಸಮಸ್ಯೆ ಅಷ್ಟು ಗಡಚಾದುದಲ್ಲ. ವಿದೇಶೀ ಹಾಗೂ ಗಿರಣಿಯ ಬಟ್ಟೆಗಳನ್ನು ಬಹಿಷ್ಕರಿಸಿದರೆ ಸಾಕು. ಖಾದಿಯ ತಳಪಾಯ ಭದ್ರವಾಗುತ್ತದೆ. ನಮ್ಮ ವ್ಯವಹಾರಚಾತುರ್ಯ, ಪ್ರಾವೀಣ್ಯ, ಶಿಕ್ಷಣಗಳೆಲ್ಲ ಭಾರವಾಗುವಷ್ಟು ಗ್ರಾಮೋದ್ಯೋಗಗಳು ಅಸಂಖ್ಯವಾಗಿವೆ. ಅವುಗಳ ಕ್ಷೇತ್ರ ವಿಶಾಲವಾಗಿದೆ. ಅದಕ್ಕಾಗಿ ತುಂಬ ಪರಿಶ್ರಮಪಡಬೇಕು. ಪಾಲಿಶ್ ಮಾಡಿದ ಹಾಗೂ ಮಾಡದ ಅಕ್ಕಿ, ಬೆಲ್ಲ, ಹಾಗೂ ಸಕ್ಕರೆ ಇತ್ಯಾದಿಗಳ ಆಹಾತ ಸತ್ವಗಳನ್ನು ಪರೀಕ್ಷಿಸಿ ತಿಳಿಸುವಂತೆ ನಾನು ಪ್ರಸಿದ್ಧ ಡಾಕ್ಟರರನ್ನೂ, ರಸಾಯನ ವಿಜ್ಞಾನಿಗಳನ್ನೂ ಕೇಳಿಕೊಂಡೆ. ನಾನು ಕೇಳಿದ ದಿಶೆಯಲ್ಲಿ ಇನ್ನೂ ಸಾಕಷ್ಟು ಸಂಶೋಧನೆಯಾಗಿಲ್ಲವೆಂದು ಅವರಲ್ಲಿ ಅನೇಕ ಮಿತ್ರರು ಕೂಡಲೇ ಉತ್ತರ ಕಳುಹಿಸಿದರು. ಬೆಲ್ಲದಂಥ ಸಾಮಾನ್ಯ ವಸ್ತುವಿನ ರಾಸಾಯನಿಕ ವಿಶ್ಲೇಷಣೆ ಮಾಡಲು ಒಬ್ಬ ವಿಜ್ಞಾನಿಗೂ

ಸಾಧ್ಯವಾಗದುದು ಶೋಚನೀಯ. ಇದಕ್ಕೆ ಕಾರಣವೆಂದರೆ ನಾವು ಹಳ್ಳಿಗರ ಜೀವನವನ್ನು ಕುರಿತು ವಿಚಾರಿಸುವುದಿಲ್ಲ. ಜೇನುತುಪ್ಪವನ್ನೇ ತೆಗೆದುಕೊಳ್ಳಿರಿ. ಪರದೇಶಗಳಲ್ಲಿ ಅದರ ರಾಸಾಯನಿಕ ವಿಶ್ಲೇಷಣೆ ಮಾಡಿದ ಹೊರತು ಅದನ್ನು ಪೇಟೆಗೆ ಹಾಕುವುದೇ ಇಲ್ಲವೆಂದು ಕೇಳಿದ್ದೇನೆ. ಭಾರತದಲ್ಲಿ ಅತ್ಯುತ್ತಮವಾದ ಜೇನು ಬೆಳೆಸಲು ಅನುಕೂಲವಿದೆ. ಆದರೆ ಈ ವಿಷಯವಾಗಿ ಜ್ಞಾನ, ಪ್ರಾವೀಣ್ಯ, ಸಾಕಷ್ಟಿಲ್ಲ. ತಮ್ಮ ಆಸ್ಪತ್ರೆಯಲ್ಲಿ ಪಾಲಿಶ್ ಮಾಡಿದ ಅಕ್ಕಿಯನ್ನು ನಿಷೇಧಿಸಿದ್ದೇನೆಂದು ಡಾಕ್ಟರ ಮಿತ್ರರೊಬ್ಬರು ತಿಳಿಸಿದ್ದಾರೆ. ಪಾಲಿಶ್ ಮಾಡಿದ ಅಕ್ಕಿಯು ಅಪಾಯಕರವೆಂದು ಇಲಿ ಹಾಗೂ ಇತರ ಪ್ರಾಣಿಗಳ ಮೇಲೆ ಪ್ರಯೋಗ ಮಾಡಿ ಕಂಡಿದ್ದಾರಂತೆ. ಆದರೆ ವೈದ್ಯಕೀಯ ವೃತ್ತಿಯವರೆಲ್ಲ ಕೂಡಿ ಅಂಥ .ಅಕ್ಕಿ ಅಪಾಯಕರವೆಂದು ಜನತೆಗೆ ಏಕೆ ಹೇಳುವುದಿಲ್ಲ?

ಒಂದೆರಡೇ ಉದಾಹರಣೆಗಳಿಂದ ನನ್ನ ತೊಂದರೆಯನ್ನು ಸೂಚಿಸಿದ್ದೇನೆ. ನಮ್ಮ ಸಂಘಟನೆ ಹೇಗಿರಬೇಕು? ಯಾವ ಬಗೆಯ ಸಂಶೋಧನೆ ನಡೆಸಬೇಕು? ನಮಗೆ ಅನೇಕ ವಿಜ್ಞಾನಿಗಳು ಬೇಕು. ಅವರು ತಮ್ಮ ಜ್ಞಾನ ಭಂಡಾರವನ್ನು ನಮಗಾಗಿ ತೆರೆದಿಡಬೇಕಲ್ಲದೇ ಮೇಲೆ ಸೂಚಿಸಿದ ರೀತಿಯಲ್ಲಿ ಉಚಿತವಾಗಿ ಸಂಶೋಧನೆಯ ಪರಿಣಾಮಗಳನ್ನು ಕಾಲಕಾಲಕ್ಕೆ ಅವರು ಪ್ರಕಟಿಸಬೇಕಾಗುವುದು. ಹಳ್ಳಿಗರು ತಯಾರಿಸಿದ ಒಡವೆಗಳನ್ನು ಪರೀಕ್ಷಿಸಿ ಶಿಫಾರಸ್ಸು ಮಾಡಬೇಕಾಗುವುದು. ಹಳ್ಳಿಗರು ತಾವು ತಯಾರಿಸಿದ ಒಡವೆಗಳನ್ನು ಹೊರಗೆ ಕಳುಹಿಸಿ ತಮ್ಮ ಬಳಕೆಗಾಗಿ ಹೊರಗಿನಿಂದ ಅಗ್ಗದ ಒಡವೆಗಳನ್ನು ತರುತ್ತಾರೋ ಹೇಗೆಂಬುದನ್ನು ನೋಡಬೇಕಾಗುವುದು. ಹಳ್ಳಿಗರು ಮೊದಲು ಸ್ವಯಂಪೂರ್ಣರಾಗಿ ಪಟ್ಟಣಿಗರಿಗೆ ನಂತರ ಪೂರೈಸಬೇಕು. ಇದಕ್ಕಾಗಿ ಜಿಲ್ಲಾಮಟ್ಟದ ಸಂಘಟನೆ ಮಾಡಬೇಕಾಗುವುದು. ಜಿಲ್ಲೆಯು ದೊಡ್ಡದಿದ್ದರೆ ಅದನ್ನು ಭಾಗಗಳನ್ನಾಗಿ ಮಾಡಬೇಕಾಗುವುದು.

ಪ್ರ : "ಇದರಿಂದ ಇನ್ನೂ ಪೂರ್ತಿಯಾಗದ ಖಾದೀ ಕೆಲಸಕ್ಕೆ ವಿಘ್ನ ಬಾರದೆ?"

ಉ: "ಇಲ್ಲ. ಖಾದಿಯು ಸೂರ್ಯನಂತೆ ಮಧ್ಯವರ್ತಿಯಾಗಿರುವುದು. ಇತರ ಉದ್ಯೋಗಗಳು ಖಾದಿಯಿಂದ ಪುಷ್ಟಿ ಪಡೆಯುವುದು."

ಪ್ರ: "ನಾವು ಪ್ರೋತ್ಸಾಹಿಸಬೇಕಾದ ಪುನರುಜ್ಜೀವನಗೊಳಿಸಬೇಕಾದ ಉದ್ಯೋಗಗಳಾದರೂ ಯಾವುವು?"

ಉ: "ನಾನು ಅದನ್ನು ಸೂಚಿಸಿದ್ದೇನೆ. ಕೆಲಕಾಲಗಳ ಹಿಂದೆ ಇದ್ದಂಥ ಉದ್ಯೋಗಗಳನ್ನೆಲ್ಲ ತೆಗೆದುಕೊಳ್ಳಬಹುದು."

ಪ್ರ: "ಹಿಟ್ಟಿನ ಹಾಗೂ ಬತ್ತದ ಗಿರಣಿಗಳಿಗೆ ಬಹಿಷ್ಕಾರ ಹಾಕಬೇಕೆ?"

ಉ: "ಬಹಿಷ್ಕಾರವನ್ನೇನೂ ಹಾಕಬೇಕಾಗಿಲ್ಲ. ಆದರೆ ತಮ್ಮ ಬತ್ತವನ್ನು ತಾವೇ ಕುಟ್ಟಿಕೊಳ್ಳುವಂತೆ, ತಮ್ಮ ಹಿಟ್ಟನ್ನೂ ತಾವೇ ಬೀಸಿಕೊಳ್ಳುವಂತೆ ಜನರಿಗೆ ತಿಳಿಸಿದರೆ ಸಾಕು. ಕೈಯಿಂದ ಕುಟ್ಟಿದ ಅಕ್ಕಿ, ಬೀಸಿದ ಹಿಟ್ಟುಗಳಲ್ಲಿ ಆಹಾರ ಸತ್ವ ಹೆಚ್ಚು. ಅವು ಆರೋಗ್ಯಕ್ಕೆ ಒಳ್ಳೆಯದು – ಎಂದು ಪ್ರಚಾರ ಮಾಡಬೇಕು. ನಿರುದ್ಯೋಗವನ್ನು ಬಹಿಷ್ಕರಿಸಬೇಕು."

ಪ್ರ: "ಈ ಕಾರ್ಯಕ್ಕಾಗಿ ಕೇಂದ್ರೀಯ ಮಂಡಲವನ್ನು ಸ್ಥಾಪಿಸಿದರೆ ಕೇಂದ್ರೀಕರಣ ಮಾಡಿದಂತಾಗುವುದಿಲ್ಲವೆ?"

ಉ: "ಹಾಗೇನೂ ಇಲ್ಲ. ಜಿಲ್ಲೆಗಳೇ ದುಡಿಯುವ ಕೇಂದ್ರಗಳಾಗಿರುವುವು. ಕೇಂದ್ರೀಯ ಮಂಡಲದಿಂದ ಸಲಹೆಯನ್ನು ಮಾತ್ರ ಕೊಡಲಾಗುವುದು. ಅದು ಆಡಳಿತವನ್ನು ನೋಡಿಕೊಳ್ಳುವುದಿಲ್ಲ. ನಮಗೆ ಆಡಳಿತದ ಕೇಂದ್ರೀಕರಣ ಬೇಕಾಗಿಲ್ಲ; ವಿಚಾರಗಳನ್ನು, ವೈಜ್ಞಾನಿಕ ತಿಳುವಳಿಕೆಗಳನ್ನು ಒಂದೆಡೆ ಕೂಡಿಸುವುದು ಮಾತ್ರ ಅಗತ್ಯವಿದೆ"

(ಹ., 1934)

ಓರ್ವ ನಿರೀಕ್ಷಕರು ಹೀಗೆ ಬರೆದಿದ್ದಾರೆ:

"ನೀವು ಹೇಳುವ ರೀತಿಯಲ್ಲಿ ಕೆಲಸ ಮಾಡಲು ತುಂಬಾ ಅವಕಾಶವಿದೆ. ಕೈಗಾರಿಕೆಗಳಿಗೆ ಸ್ಥಾನವಿದ್ದೇ ಇದೆ. ಆದರೆ ದೊಡ್ಡ ಪ್ರಮಾಣದ ಉದ್ಯಮಗಳನ್ನು ನಾವು ಹಿಂದೆ ಸರಿಸಲಾರೆವು. ಈ ದೇಶದಲ್ಲಿ ಸ್ಥಾಪಿಸಲ್ಪಟ್ಟ, ಸ್ಥಾಪಿಸಲು ಬರುವ ದೊಡ್ಡ ಪ್ರಮಾಣದ ಉದ್ಯಮಗಳ ನಾಶದಿಂದ ದೇಶಕ್ಕೆ ಹಿತವಿಲ್ಲ. ಯಂತ್ರಗಳ ವಿಷಯವಾಗಿ ಇರುವ ವಿರೋಧವೆಂದರೆ ಅವು ಕೆಲಸಗಾರರ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ. ಅದರಿಂದ ನಿರುದ್ಯೋಗ ಹೆಚ್ಚುತ್ತದೆ. ಈಗಿನ ಲಾಭ ಹಂಚುವ ಪದ್ಧತಿಯಲ್ಲಿ ಬದಲಾವಣೆ ಅಗತ್ಯವಿದ್ದೀತು. ಆದರೆ ಸದುಪಯೋಗ ಮಾಡಿಕೊಂಡರೆ ವಿರಾಮವು ಇತರ ಎಷ್ಟೋ ವಿಷಯಗಳಿಗಿಂತ ಹೆಚ್ಚು ಮಹತ್ವವಾದದ್ದು ಕೇವಲ ಹೆಚ್ಚು ಜನರನ್ನು ಕೆಲಸದಲ್ಲಿ ತೊಡಗಿಸುವ ಉದ್ದೇಶದಿಂದ ಯಂತ್ರಗಳನ್ನು ಬಿಡುವುದು

ಸರಿಯಲ್ಲ. ಯಂತ್ರದಿಂದ ಅನೇಕರಿಗೆ ಅನ್ನ, ಬಿಡುವು ದೊರೆಯುತ್ತದೆ. ಭಾರತದ ಜನಸಂಖ್ಯೆ ವಿಪುಲವಾಗಿದೆ. ದಿನೇ ದಿನೇ ಬೆಳೆಯುತ್ತಿದೆ. ಇವರಲ್ಲಿ ಪ್ರತಿಯೊಬ್ಬನಿಗೂ ಸಾಕಷ್ಟು ಸುಖಸಾಧನಗಳನ್ನೊದಗಿಸುವುದು ಎಂದಿಗೂ ಸಾಧ್ಯವಿಲ್ಲವೆಂದು ತೋರುತ್ತದೆ. ಶಿಕ್ಷಣ ಆರೋಗ್ಯ ಸ್ಥಿತಿಗಳು ಸುಧಾರಿಸಿದಂತೆ ಆಯುಷ್ಯ ಹೆಚ್ಚುತ್ತದೆ. ಸಾವಿನ ಪ್ರಮಾಣ ಕಡಿಮೆಯಾಗುತ್ತದೆ. ಜನಸಂಖ್ಯೆಯ ದೃಷ್ಟಿಯಿಂದ ಇದು ಪರಿಸ್ಥಿತಿಯನ್ನು ಇನ್ನಿಷ್ಟು ಕೆಡಿಸುತ್ತದೆ. ಆದ್ದರಿಂದ ಜನಸಂಖ್ಯೆಯನ್ನು ಮೊದಲ ನಿಯಂತ್ರಿಸಬೇಕು. ಗರ್ಭನಿರೋಧಕದಿಂದಲ್ಲದೆ ಅದು ಸಾಧ್ಯವಿಲ್ಲ. ನೀವು ಅದನ್ನು ವಿರೋಧಿಸುತ್ತೀರೆಂಬುದನ್ನು ನಾನು ಬಲ್ಲೆ. ಸದ್ಯ ನೀವು ಕೈಗಾರಿಕೆ ಮುಂತಾದವುಗಳಿಂದ ಆರ್ಥಿಕ ಪುನರ್‌ರಚನೆ ಮಾಡುವುದರಲ್ಲಿ ತೊಡಗಿರುವುದರಿಂದ ಈ ವಿಷಯವನ್ನು ವಿಚಾರಿಸಬೇಕೋ ಬೇಡವೋ ನೀವೇ ನೋಡಿರಿ."

ಈ ಲೇಖಕರೇನೋ ಪ್ರಾಮಾಣಿಕ ವಿಚಾರವಂತರಾಗಿದ್ದಾರೆ. ಆದರೆ ಇವು ಮನಸ್ಸಿನಲ್ಲಿಟ್ಟುಕೊಂಡಿರುವ ಚರಖಾ ಸಂಘ, ಗ್ರಾಮೋದ್ಯೋಗ ಸಂಘಗಳ ಉದ್ದೇಶವನ್ನೇ ತಿಳಿದಂತಿಲ್ಲ. ದೊಡ್ಡ ಉದ್ಯಮಗಳ ಬದಲಾಗಿ ಗ್ರಾಮೋದ್ಯೋಗಗಳನ್ನು ನಡೆಸುವುದಾಗಲೀ, ದೊಡ್ಡ ಉದ್ಯಮಗಳನ್ನು ನಾಶಪಡಿಸುವುದಾಗಲಿ, ಈ ಸಂಘಗಳ ಉದ್ದೇಶವಲ್ಲ. ಹಾಳಾದ, ಹಾಳಾಗುತ್ತಿರುವ ಉದ್ಯೋಗಗಳ ಪುನರುಜ್ಜೀವನಗೊಳಿಸಿ, ಅವುಗಳ ಮೂಲಕ ನಿರುದ್ಯೋಗಗಳಿಗೂ ಅರೆ ಉದ್ಯೋಗಿಗಳೀಗೂ ಕೆಲಸ ಕೊಡುವುದೇ ಗುರಿಯಾಗಿದೆ. ಇದು ರಚನಾತ್ಮಕ ಕಾರ್ಯವಾಗಿದೆಯಲ್ಲದೆ, ವಿಧ್ವಂಸಕವಲ್ಲ. ಕೆಲವೇ ಒಡೆಯರಿಗೆ ಹಣ ಒದಗಿಸುವುದೇ ದೊಡ್ಡ ಉದ್ಯಮಗಳ ಮುಖ್ಯ ಉದ್ದೇಶವಾಗಿದೆ. ನಿರುದ್ಯೋಗಿಗಳಿಗೆ ಕೆಲಸ ಕೊಡುವುದು ಮುಖ್ಯವಲ್ಲವೇ ಅಲ್ಲ. ದೊಡ್ಡ ಉದ್ಯಮಗಳಿಗೆ ಬಾಧೆ ತರುವ ಆಶೆ ಖಾದಿ ಗ್ರಾಮೋದ್ಯೋಗಗಳ ಸಂಘಟಕರಿಗಿಲ್ಲ. ನಿರುದ್ಯೋಗಿಗಳ ಬಿಡುವು ಸದುಪಯೋಗವಾಗುವಂತೆ ಮಾಡುವುದೇ ಉದ್ದೇಶವಾಗಿದೆ.

ಲಕ್ಷಾಂತರ ಸಜೀವ ಯಂತ್ರಗಳ ವಿರುದ್ಧ ನಿರ್ಜೀವ ಯಂತ್ರಗಳನ್ನು ನಿಲ್ಲಿಸಬಾರದು. ಯಂತ್ರಗಳ ಸದುಪಯೋಗವಾಗಬೇಕಾದರೆ ಅವು ಮನುಷ್ಯರ ಶ್ರಮಕ್ಕೆ ನೆರವಾಗುವಂಥವಿರಬೇಕು. ಆ ಶ್ರಮವನ್ನು ಹಗುರಗೊಳಿಸುವಂಥವಿರಬೇಕು. ಇಂದು ಕೆಲವೇ ಜನರ ಕೈಯಲ್ಲಿ ಸಂಪತ್ತು ಕೂಡಿಬೀಳುವಂತೆ ಯಂತ್ರಗಳ ಉಪಯೋಗವಾಗುತ್ತಿದೆ. ಲಕ್ಷಾಂತರ

ಗಂಡಸರನ್ನು ಮತ್ತು ಹೆಂಗಸರನ್ನು ದುರ್ಲಕ್ಷಿಸಲಾಗುತ್ತಿದೆ. ಅವರ ತುತ್ತನ್ನು ಕಸಿದುಕೊಳ್ಳಲಾಗುತ್ತಿದೆ. ಯಂತ್ರಗಳ ಮೂಲಕ ಭಾರೀ ಸಂಪತ್ತನ್ನು ಗಳಿಸುವ ಹುಚ್ಚಿನಿಂದಾಗುವ ಕೇಡಿನ ನಿವಾರಣೆಯೇ ಚರಕಾಸಂಘಗಳ ಚಳುವಳಿಯ ಉದ್ದೇಶವಾಗಿದೆ.

ಎಲ್ಲರಿಗೂ ಸುಖಸಾಧನಗಳನ್ನು ಒದಗಿಸುವುದು ಎಂದಿಗೂ ಸಾಧ್ಯವಿಲ್ಲವೆಂದು ಈ ಲೇಖಕ ಮಹಾಶಯರ ಭೀತಿ. ಹಳ್ಳಿಗಳಲ್ಲಿ ಕೆಲಸ ನಡೆಸುತ್ತಿರುವವರಿಗೆ ಈ ಭೀತಿಯಿಲ್ಲ. ತಲೆತಲಾಂತರದಿಂದ ಬೆಳೆದುಬಂದ ಹಳ್ಳಿಗಳ ಆಲಸ್ಯ ತೊಲಗಿದರೆ ಅವರೆಲ್ಲ ಸುಖಿಗಳಾಗಿರಬೇಕು.

ಗರ್ಭನಿರೋಧವು ನನಗೆ ನರಕಕೂಪವಾಗಿ ತೋರುತ್ತದೆ. ಅದು ಆಜ್ಞೇಯ ಶಕ್ತಿಗಳೊಡನೆ ಆಟವಾಡಿದಂತೆ. ಕೃತ್ರಿಮ ರೀತಿಯಿಂದ ವಿಶಿಷ್ಟ ಪರಿಸರದಲ್ಲಿ ಅದು ಸರಿಯೆಂದು ಇಟ್ಟುಕೊಂಡರೂ ಜನತೆಯಲ್ಲೆಲ್ಲ ಅದನ್ನು ಪ್ರಚುರಪಡಿಸುವುದು ಅಸಾಧ್ಯವೆಂದೇ ಹೇಳಬೇಕು. ಈ ಭೂಮಿಯು ನಿನ್ನೆ ಮೊನ್ನಿನ ಆಟಿಗೆಯಲ್ಲ. ಯುಗ ಯುಗಾಂತರಗಳಿಂದಲೂ ಅದಕ್ಕೆ ಜನಸಂಖ್ಯೆಯಿಂದ ಭಾರವಾಗಿಲ್ಲ. ಸಂತತಿನಿರೋಧದ ಸಾಧನಗಳಿಂದ ಜನಸಂಖ್ಯೆಯನ್ನು ನಿಯಂತ್ರಿಸದಿದ್ದರೆ ಅನ್ನ ಸಾಲದೆ ಜಗತ್ತು ಹಾಳಾಗುವುದೆಂಬ ಮಾತು ಕೆಲವರ ತಲೆಯಲ್ಲಿ ಹೇಗೆ ಮಿಂಚಿತೋ ಏನೋ?

(ಹ., 1935)

ಅಸ್ಪೃಶ್ಯತೆಯು ಉಳಿದರೆ ಹಿಂದೂ ಧರ್ಮಕ್ಕೆ ಕೇಡು ಎಂದು ನಾನು ಹೇಳುತ್ತಿದ್ದೇನೆ. ಅದರಂತೆಯೇ ಹಳ್ಳಿಯು ನಾಶವಾದರೆ ಭಾರತದ ನಾಶವೂ ಆಗುತ್ತದೆ. ಹಳ್ಳಿಯ ಸುಲಿಗೆ ನಿಂತಾಗಲೇ ಅದರ ಪುನರುಜ್ಜೀವನ ಸಾಧ್ಯ. ಔದ್ಯಮೀಕರಣದಿಂದ ಹಳ್ಳಿಗಳ ಸುಲಿಗೆ ಸೌಮ್ಯವಾಗಿಯೇ ಆದರೂ ಆಗೇ ಆಗುತ್ತದೆ. ಆದ್ದರಿಂದ ಹಳ್ಳಿಗಳು ಸ್ವಾವಲಂಬಿಯಾಗುವಂತೆ, ಮುಖ್ಯವಾಗಿ ತಮ್ಮ ಬಳಕೆಗೆ ಸಾಮಾನು ತಯಾರಿಸಿಕೊಳ್ಳುವಂತೆ ಮಾಡಬೇಕಾಗಿದೆ. ಗ್ರಾಮೋದ್ಯೋಗಗಳ ಈ ಸ್ವರೂಪವು ಉಳಿಯುವುದಾದರೆ ಹಳ್ಳಿಗರು ಆಧುನಿಕ ಯಂತ್ರೋಪಕರಣಗಳನ್ನು ಶಕ್ಯವಿದ್ದರೆ ಉಪಯೋಗಿಸಬಹುದು. ಹೆರವರ ಸುಲಿಗೆಗಾಗಿ ಮಾತ್ರ ಅವುಗಳನ್ನು ಉಪಯೋಗಿಸಕೂಡದು.

(ಹ., 1936)

ಹೇಗೆ ಪ್ರಾರಂಭಿಸಬೇಕು? ಗ್ರಾಮೋದ್ಯೋಗಗಳ ಕೆಲಸವನ್ನು ಹೇಗೆ ಪ್ರಾರಂಭಿಸಬೇಕು? ಮೊಟ್ಟ ಮೊದಲು ಮಾಡತಕ್ಕದ್ದೇನು? ಎಂದೆಲ್ಲ ನನಗೆ ಕೇಳುತ್ತಿದ್ದಾರೆ. "ನಿಮ್ಮಿಂದಲೇ ಪ್ರಾರಂಭಿಸಿರಿ; ನಿಮಗೆ ಹಗುರವಾದದ್ದನ್ನು ಮೊದಲು ಮಾಡಿರಿ" ಎನ್ನುವುದೇ ನನ್ನ ಉತ್ತರ. ಕೇಳಿದವರಿಗೆ ಇಷ್ಟರಿಂದಲೇ ತೃಪ್ತಿಯಾಗಲಾರದು. ಆದ್ದರಿಂದ ಇದನ್ನು ವಿವರಿಸುತ್ತೇನೆ.

ಪ್ರತಿಯೊಬ್ಬನೂ ತನ್ನ ಅನ್ನ, ಬಟ್ಟೆ ಹಾಗೂ ಪ್ರತಿನಿತ್ಯದ ಇತರ ಬಳಕೆಯ ಸಾಮಾನುಗಳ ಪಟ್ಟಿ ಮಾಡಿ ಅವು ಪರದೇಶದಿಂದ ಅಥವಾ ಹೊರಗಿನ ಪಟ್ಟಣಗಳಿಂದ ಬರುತ್ತಿದ್ದರೆ ಬಿಟ್ಟು ಹಳ್ಳಿಗರು ತಮ್ಮ ಮನೆಯಲ್ಲಿ ಅಥವಾ ಹೊಲದಲ್ಲಿ ಸುಲಭ ಉಪಕರಣಗಳಿಂದ ತಯಾರಿಸಿದವುಗಳನ್ನು ಬಳಸಹತ್ತಬೇಕು. ಮುಂದಿನ ಮಾರ್ಗವು ತಂತಾನೇ ತೋರುವುದು. ಓರ್ವನು ಮುಂಬಯಿ ಫ್ಯಾಕ್ಟರಿಯಲ್ಲಿ ತಯಾರಾದ ಹಲ್ಲುಜ್ಜುವ ಬ್ರಶ್ ಉಪಯೋಗಿಸಿದ್ದಾನೆಂದು ತಿಳಿಯುವ, ಅವನಿಗೆ ಹಳ್ಳಿಯ ಬ್ರಶ್ ಬೇಕಾಗಿದೆ. ಅವನು ಬೇವಿನಕಡ್ಡಿ ಉಪಯೋಗಿಸಬಹುದು. ಪಟ್ಟಣದಲ್ಲಿ ತಯಾರಾಗುವ ಹಲ್ಲುಪುಡಿಯ ಬದಲು ಇದ್ದಲಿ, ಉಪ್ಪು ಕೂಡಿಸಿ ಕುಟ್ಟಿ ಪುಡಿ ಮಾಡಿಕೊಳ್ಳಬಹುದು. ಗಿರಣಿಯ ಬಟ್ಟೆಯ ಬದಲು ಖಾದಿಯನ್ನು, ಗಿರಣಿಯ ಅಕ್ಕಿಯ ಬದಲು ಕೊಟ್ಟಣದ ಅಕ್ಕಿಯನ್ನು, ಸಕ್ಕರೆಯ ಬದಲು ಬೆಲ್ಲವನ್ನು ಉಪಯೋಗಿಸಬೇಕು. ಕೇವಲ ಉದಾಹರಣೆಗಾಗಿ ಇವುಗಳನ್ನು ಕೊಡಲಾಗಿದೆ.

ಕೊಟ್ಟಣದ ಅಕ್ಕಿ : ಜನ ತಮಗೆ ಕಂಡುಬಂದ ಅನೇಕ ತೊಂದರೆಗಳನ್ನು ಕುರಿತು ಬರೆಯುತ್ತಾರೆ, ಚರ್ಚಿಸುತ್ತಾರೆ. ಅಕ್ಕಿಯ ವಿಷಯವನ್ನೇ ತೆಗೆದುಕೊಳ್ಳೋಣ. ಕೊಟ್ಟಣದ ಅಕ್ಕಿ ಗಿರಣಿಯ ಅಕ್ಕಿಗಿಂತ ತುಟ್ಟಿಯೆಂದು ಕೆಲವರು ಹೇಳುತ್ತಾರೆ. ನಮ್ಮಲ್ಲಿ ಬತ್ತ ಕುಟ್ಟುವ ಕಲೆ ಮರೆತುಹೋಗಿದೆ. ಕುಟ್ಟುವವರೇ ಸಿಗುವುದಿಲ್ಲವೆಂದು ಇತರರು ಹೇಳುತ್ತಾರೆ. "ನಮ್ಮ ಕಡೆಗೆ ಗಿರಣಿಯ ಅಕ್ಕಿಯೇ ಸಿಗುವುದಿಲ್ಲ. ಬೇಕಾದರೆ ನಾವು ರೂಪಾಯಿಗೆ 19 ಸೇರಿನಂತೆ ಕೊಟ್ಟಣದ ಅಕ್ಕಿ ಪೂರೈಸುತ್ತೇವೆ" ಎಂದು ಇನ್ನೂ ಕೆಲವರು ಹೇಳುತ್ತಾರೆ. ಈ ಹೇಳಿಕೆಗಳೆಲ್ಲ ಸರಿಯೂ ಆಗಿವೆ. ಎಲ್ಲವೂ ತಪ್ಪೂ ಆಗಿವೆ. ಆಯಾ ಜಿಲ್ಲೆಯ ಅನುಭವದ ಮಟ್ಟಿಗೆ ಅವು ಸರಿ. ಅವೆಲ್ಲ ತಪ್ಪು; ಯಾಕೆಂದರೆ ನಿಜಾಂಶವು ಅವರಿಗೆ ತಿಳಿದಿಲ್ಲ. ನಾವು ಪ್ರತಿನಿತ್ಯ ವಿಚಿತ್ರ ಅನುಭವಗಳನ್ನು

ಕಂಡುಕೊಳ್ಳುತ್ತಿದ್ದೇವೆ. ನನ್ನ ಪರಿಶೀಲನದ ಫಲಿತಾಂಶ ಇಂದು ಹೀಗಿದೆ:

ಪಾಲಿಶ್ ಮಾಡದ, ನುಚ್ಚಾಗದ ಇಡೀ ಅಕ್ಕಿಯು ಪೇಟೆಯಲ್ಲಿ ಸಿಗುವುದಿಲ್ಲ. ಅದು ಸತ್ವಯುಕ್ತವಾದದ್ದು, ರುಚಿಕರವಾದದ್ದು. ಗಿರಣಿಯ ಅಕ್ಕಿ ಇದರೊಡನೆ ಸ್ಪರ್ಧಿಸಲಾರದು. ಹೆಚ್ಚಾಗಿ ತೊಳಲಿ ಕಲ್ಲುಗಳಿಂದ ಹೊಟ್ಟನ್ನು ಬೇರ್ಪಡಿಸಲಾಗುತ್ತದೆ. ಕೆಲವು ಜಾತಿಯ ಬತ್ತವನ್ನು ಮೊದಲು ಕುದಿಸಿ ನಂತರ ಕಲ್ಲಿಗೆ ಹಾಕುತ್ತಾರೆ. ಈ ಅಕ್ಕಿ (ಕುಚ್ಚಿಗೆ ಅಕ್ಕಿ) ಆರೋಗ್ಯಕ್ಕೆ ಬಹಳ ಒಳ್ಳೆಯದು. ಅದು ಅಗ್ಗವೂ ಹೌದು. ಹಳ್ಳಿಗರು ತಮ್ಮ ಬತ್ತವನ್ನು ತಾವೇ ಕುಟ್ಟಿಕೊಂಡರೆ ಅದು ಗಿರಣಿಯ ಅಕ್ಕಿಗಿಂತ ಅಗ್ಗವಾಗುತ್ತದೆ. ಪೇಟೆಯಲ್ಲಿ ಸಿಗುವ ಅಕ್ಕಿಯೆಲ್ಲ–ಕೈಯಿಂದ ಕುಟ್ಟಿದ್ದಿರಲಿ. ಗಿರಣಿಗೆ ಹಾಕಿದ್ದಿರಲಿ– ಪಾಲಿಶ್ ಮಾಡಿದ್ದೇ ಇರುತ್ತದೆ. ಏನೂ ಪಾಲಿಶ್ ಮಾಡದ ಅಕ್ಕಿ ಕೈಯಿಂದ ಕುಟ್ಟಿದ್ದಿರುತ್ತದೆ. ಅದು ಗಿರಣಿಯ ಅಕ್ಕಿಗಿಂತ ಅಗ್ಗ.

ಅಕ್ಕಿಯನ್ನು ತಿನ್ನುವವರು ದುರ್ಲಕ್ಷ್ಯದಿಂದ ಸತ್ವಹೀನ ಅಕ್ಕಿಯನ್ನು ತಿನ್ನುತ್ತಿದ್ದಾರೆಂದು ಕಂಡುಬರುತ್ತದೆ. ಇದು ಸತ್ಯವೋ ಎಂಬುದನ್ನು ಹಳ್ಳಿಯ ಕಾರ್ಯಕರ್ತರು ಪರೀಕ್ಷಿಸಲಿ.

(ಹ., 1935)

* * *

<u>ಗೋಧಿ :</u> ಕಳೆದ ವಾರ ಅಕ್ಕಿಯ ಬಗ್ಗೆ ಹೇಳಿದೆ. ಈಗ ಗೋಧಿಯನ್ನು ಕುರಿತು ವಿಚಾರಿಸುವ. ಇದು ಎರಡನೆಯದಾದ ಮಹತ್ವದ ಆಹಾರ. ಸತ್ವದ ದೃಷ್ಟಿಯಿಂದ ಇದು ಆಹಾರ ಧಾನ್ಯಗಳ ರಾಜನೆಂದು ಹೇಳಬಹುದು. ಅಕ್ಕಿಗಿಂತ ಇದು ಹೆಚ್ಚು ಪೂರ್ಣವಾಗಿದೆ. ಹೊಟ್ಟು ಸೇರಿರದ ಹಿಟ್ಟು ಪಾಲಿಶ್ ಮಾಡಿದ ಅಕ್ಕಿಯಷ್ಟೇ ಕೆಟ್ಟದ್ದು. ಪೇಟೆಯಲ್ಲಿ ಬೀಸಿಕೊಂಡ ಇಡೀ ಗೋಧಿಯ ಹಿಟ್ಟು ಯಾವಾಗಲೂ ಒಳ್ಳೆಯದು. ಇಡೀ ಗೋಧಿಯನ್ನು ಹಿಟ್ಟು ಮಾಡಿದಾಗ ಅದು ತೂಕದಲ್ಲಿ ಕಡಿಮೆಯಾಗುವುದಿಲ್ಲ. ನಯವಾದ ಹಿಟ್ಟಿನಲ್ಲಿ ತೂಕ ಕಡಿಮೆಯಾಗಿರುತ್ತದೆ. ಗೋಧಿಯ ಸತ್ವವು ಅದರ ಹಿಟ್ಟಿನಲ್ಲಿ ಬಹಳಷ್ಟಿರುತ್ತದೆ. ಅದನ್ನು ತೆಗೆದು ಒಗೆದಾಗ ಸತ್ವನಾಶವಾಗುತ್ತದೆ. ಇಡೀ ಗೋಧಿಯನ್ನು ಮನೆಯಲ್ಲೇ ಬೀಸದಿರುವುದರಿಂದ ಲಕ್ಷಾಂತರ ರೂಪಾಯಿಗಳು ಬಡವರಲ್ಲೇ ಉಳಿಯುತ್ತವೆ.

ಹಿಟ್ಟು ಬೀಸುವುದು ಬೇಸರದ ಕೆಲಸ. ಬೀಸುವ ಕಲ್ಲಿನಿಂದ ಮಾಡಿದ ಹಿಟ್ಟು ಬಹಳ ಸಲ ಸರಿಯಾಗಿ ಹಿಟ್ಟಾಗಿರುವುದಿಲ್ಲ. ಹಳ್ಳಿಗರು ತಮ್ಮ ಹಿಟ್ಟು ತಾವೇ ಬೀಸಿಕೊಳ್ಳುವುದರಿಂದ ಲಾಭವಿಲ್ಲ ಎಂದೆಲ್ಲಾ ಹೇಳಲಾಗುತ್ತದೆ. ಹಿಂದಿನ ಕಾಲದವರಿಗೆ ಹಿಟ್ಟು ಬೀಸಿಕೊಳ್ಳುವುದು ಲಾಭದಾಯಕವಾಗಿದ್ದರೆ ಗಿರಣಿಗಳು ಬಂದದ್ದರಿಂದ ಅಂಥ ವ್ಯತ್ಯಾಸವೇನೂ ಆಗಬೇಕಾಗಿಲ್ಲ. ತಮಗೆ ವೇಳೆ ಸಿಗುವುದಿಲ್ಲವೆಂದು ಅವರು ಹೇಳುವಂತಿಲ್ಲ. ಶ್ರಮದ ಜೊತೆಗೆ ಬುದ್ಧಿಯನ್ನು ಉಪಯೋಗಿಸಿದರೆ ಬೀಸುವ ಕಲ್ಲಿನಲ್ಲಿ ಸುಧಾರಣೆ ಮಾಡಲು ಬರುತ್ತದೆ. ಕಲ್ಲಿನಲ್ಲಿ ಹಿಟ್ಟು ಸರಿಯಾಗಿ ಆಗುವುದಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಹಾಗಿದ್ದರೆ ಅದು ಅನಾದಿಕಾಲದಿಂದಲೂ ಬಳಕೆಯಲ್ಲಿ ಬಂದು ಉಳಿಯುತ್ತಿದ್ದಿಲ್ಲ. ಹಿಟ್ಟು ಸರಿಯಾಗಿಲ್ಲವೆಂದು ಕಂಡಾಗ ಅದನ್ನು ಜರಡಿಗೆ ಹಿಡಿದು ನುಚ್ಚನ್ನು ಬೇರ್ಪಡಿಸಬಹುದು. ನುಚ್ಚಿನ ದಪ್ಪ ಗಂಜಿ ಮಾಡಿ ಚಪಾತಿಯೊಡನೆ ಅಥವಾ ನಂತರ ತೆಗೆದುಕೊಳ್ಳಬಹುದು. ಹೀಗೆ ಮಾಡುವುದರಿಂದ ಬೀಸುವುದು ಬಹಳ ಸುಲಭವಾಗುತ್ತದೆ. ಬಹಳಷ್ಟು ವೇಳೆಯೂ ಶ್ರಮವೂ ಉಳಿಯುತ್ತದೆ.

ಬೆಲ್ಲ : ಬೆಲ್ಲವು ನಾವು ವಿಚಾರಿಸತಕ್ಕ ಇನ್ನೊಂದು ವಸ್ತು. ಹಿಂದೆ ಹೇಳಿದಂತೆ ಇದರಲ್ಲಿ ಸಕ್ಕರೆಗಿಂತ ಆಹಾರಸತ್ವ ಹೆಚ್ಚು. ಹಳ್ಳಿಗರು ಬೆಲ್ಲ ತಯಾರಿಸಿಕೊಳ್ಳುವುದನ್ನು ಬಿಟ್ಟರೆ ಈಗಾಗಲೇ ಬಿಡಹತ್ತಿದ್ದಾರೆ. ಅವರ ಮಕ್ಕಳ ಆಹಾರದ ಸತ್ವಾಂಶವನ್ನು ಕಡಿಮೆ ಮಾಡಿದಂತಾಗುತ್ತದೆ. ದೊಡ್ಡವರು ಬೇಕಾದರೆ ಬೆಲ್ಲವನ್ನು ಬಿಡಬಹುಮ. ಚಿಕ್ಕವರಿಗೆ ಅದು ಬೇಕೇಬೇಕು. ಬೆಲ್ಲವನ್ನುಪಯೋಗಿಸುವುದರಿಂದ ಕೋಟ್ಯಂತರ ರೂಪಾಯಿಗಳು ಹಳ್ಳಿಗಳಲ್ಲಿ ಉಳಿಯುತ್ತವೆ.

ಅದಕ್ಕಾಗಿ ಪಟ್ಟಣಿಗರು ಕೆಲವು ಕಾಸು ಹೆಚ್ಚಿಗೆ ಕೊಡುವ ಅಗತ್ಯಬಿದ್ದರೂ ಅಡ್ಡಿಯಿಲ್ಲ.

(ಹ., 1965)

ಕಸದಿಂದ ರಸ : ಹಳ್ಳೀಗಳ ಸ್ವಚ್ಛತೆಯೂ ಅಷ್ಟೇ ಮುಖ್ಯವಾಗಿದೆ. ಬೀದಿ ಓಣಿಗಳನ್ನೆಲ್ಲಾ ಹುಡುಕಿ ಸ್ವಚ್ಛಮಾಡಬೇಕು. ಆ ಕಸಕಡ್ಡಿಯಿಂದ ಗೊಬ್ಬರ ಮಾಡಲು ಬರುತ್ತದೆ. ಕೆಲವನ್ನು ಮಾತ್ರ ಹುಗಿಯಬೇಕಾಗುತ್ತದೆ. ಎಲುಬಿನಿಂದ ಉಪಯುಕ್ತ ಒಡವೆಗಳನ್ನು ಮಾಡಲು ಬರುತ್ತದೆ. ರದ್ದಿಚಿಂದಿಗಳಿಂದ ಕಾಗದ ತಯಾರಿಸಬಹುದು. ಮಲದಿಂದ ಬಂಗಾರದಂಥ ಗೊಬ್ಬರವಾಗುತ್ತದೆ. ಸದ್ಯ

ಲಕ್ಷಾಂತರ ರೂಪಾಯಿ ಬೆಲೆಯ ಇಂಥ ಗೊಬ್ಬರ ಪ್ರತಿನಿತ್ಯ ಹಾಳಾಗುತ್ತಿದೆ. ಮೇಲಾಗಿ ಅದರಿಂದ ಹವೆ ಕೆಟ್ಟು ರೋಗರುಜಿನಗಳು ಬರುತ್ತವೆ.

(ಹ., 1935)

* * *

ಗ್ರಾಮೀಣ ಚರ್ಮೋದ್ಯೋಗ : ಚರ್ಮ ಹದಗೊಳಿಸುವ ವಿದ್ಯೆಯು ಭಾರತದಷ್ಟೇ ಪುರಾತನವಾದದ್ದು. ಈ ಉದ್ಯೋಗವು ಕೀಳು ದರ್ಜೆಯದೆಂದು ಯಾವ ಮಿತಿಗೆ ನಿರ್ಣಯಿಸಲ್ಪಟ್ಟಿತೋ ಏನೋ. ಪ್ರಾಚೀನ ಕಾಲದಲ್ಲಂತೂ ಹೀಗಿದ್ದಿರಲಿಕ್ಕಿಲ್ಲ. ಮಹತ್ವದ್ದಾದ, ಅಗತ್ಯವಾದ ಈ ಉದ್ಯೋಗದಿಂದ ಲಕ್ಷಾಂತರ ಜನ ಆನುವಂಶಿಕವಾಗಿ ಅಸ್ಪೃಶ್ಯರೆನಿಸಿಬಿಟ್ಟಿದ್ದಾರೆ. ದುಡಿದು ತಿನ್ನುವುದು ಹೇಯವೆಂದು ಅದನ್ನು ಕಡೆಗಣಿಸಿದ ದಿನ ಈ ದೇಶಕ್ಕೆ ವಿಪತ್ತೊದಗಿತು. ದುಡಿಯುವವರ ವರ್ಗ ಕೆಳಗಿನದೆಂದು ಪರಿಗಣಿಸಲ್ಪಟ್ಟಂದು ಈ ದೇಶಕ್ಕೆ ನೈತಿಕ ಹಾಗೂ ಸಾಂಪತ್ತಿಕ ಕೇಡೊದಗಿತು. ರೈತರನ್ನೂ ಕಸುಬುದಾರರನ್ನೂ ಕಡೆಗಣಿಸಿದ್ದರಿಂದ ನಾವು ದಾರಿದ್ರ್ಯ, ಆಲಸ್ಯಗಳಲ್ಲಿ ಬಿದ್ದೆವು. ಉತ್ತಮ ಹವೆ, ಎತ್ತರದ ಪರ್ವತಗಳು, ದೊಡ್ಡ ದೊಡ್ಡ ನದಿಗಳು, ವಿಶಾಲವಾದ ಸಮುದ್ರತೀರ – ಇಷ್ಟೊಂದು ಅಪರಿಮಿತ ಸಂಪತ್ತು ಇರುವಾಗ, ಹಳ್ಳಿಗಳಲ್ಲಿ ಇವುಗಳ ಸಂಪೂರ್ಣ ಉಪಯೋಗ ತೆಗೆದುಕೊಂಡು ದಾರಿದ್ರ್ಯವನ್ನು ತಡೆಯಬಹುದಿತ್ತು. ಆದರೆ ಬುದ್ಧಿಶ್ರಮ ದೇಹಶ್ರಮಗಳ ಸಂಬಂಧ ತಪ್ಪಿದ್ದರಿಂದ ಇಷ್ಟು ಸಂಪತ್ತು ಇದ್ದರೂ ನಾವು ಬಡವರಾಗಿದ್ದೇವೆ; ಸುಲಿಗೆಗೆ ಒಳಗಾಗಿದ್ದೇವೆ; ಅಲ್ಪಾಯುಗಳಾಗಿದ್ದೇವೆ. ಈ ಮಾತಿಗೆ ಗ್ರಾಮೀಣ ಚರ್ಮೋದ್ಯೋಗದ ಸ್ಥಿತಿಯೇ ಉತ್ತಮ ನಿದರ್ಶನವಾಗಿದೆ.

ವರ್ಷಕ್ಕೆ ಸುಮಾರು ಒಂಭತ್ತು ಕೋಟಿ ರೂಪಾಯಿಗಳ ಬೆಲೆಯಷ್ಟು ಕಚ್ಚಾ ಚರ್ಮವನ್ನು ಭಾರತದಿಂದ ರಫ್ತು ಮಾಡಲಾಗುತ್ತಿದೆಯಂತೆ. ಅದರಲ್ಲಿ ಬಹಳಷ್ಟು ಚರ್ಮವು ಪಕ್ಕಾ ಮಾಲಿನ ರೂಪದಿಂದ ಈ ದೇಶಕ್ಕೆ ತಿರುಗಿ ಬರುತ್ತದೆ. ಇದರಿಂದ ನಮ್ಮ ಸಂಪತ್ತೊಂದೇ ಅಲ್ಲ, ಬುದ್ಧಿಶಕ್ತಿಯೂ ಹಳ್ಳ ಹಿಡಿದಂತೆ.

ಚರ್ಮ ಹದಗೊಳಿಸಲಿಕ್ಕೆ ತಾಂತ್ರಿಕ ನೈಪುಣ್ಯ ಬೇಕು. ರಸಾಯನ ವಿಜ್ಞಾನಿಗಳಿಗೆ ತಮ್ಮ ಸಂಶೋಧನಾಶಕ್ತಿಯನ್ನು ತೋರಿಸಲು ಈ ಉದ್ಯೋಗದಲ್ಲಿ ತುಂಬ ಅವಕಾಶವಿದೆ.

ಹಳ್ಳಿಯ ಚರ್ಮಕಾರರಿಗೆ ಸತ್ತ ಪ್ರಾಣಿಗಳನ್ನು ಯೋಗ್ಯ ರೀತಿಯಿಂದ ತಂದುಕೊಳ್ಳುವ ಅನುಕೂಲತೆಯಿರುವುದಿಲ್ಲ. ಅವರು ಅವನ್ನು ಎಳೆದು ತರುತ್ತಾರೆ. ಅದರಿಂದ ಚರ್ಮಕ್ಕೆ ಧಕ್ಕೆ ತಗಲಿ ಅದರ ಬೆಲೆ ಕಡಿಮೆಯಾಗುತ್ತದೆ.

ಚರ್ಮ ಸುಲಿಯಲಿಕ್ಕೂ ಕೌಶಲ್ಯ ಬೇಕು. ಸರ್ಜನರ ಶಸ್ತ್ರಕ್ರಿಯೆಗಿಂತ ಚುರುಕಾಗಿ ಹಳ್ಳಿಯ ಸಮಗಾರರು ಚರ್ಮ ಸುಲಿಯುತ್ತಾರೆಂದು ಕೇಳಿದ್ದೇನೆ. ಅಂದಮಾತ್ರಕ್ಕೆ ಇದರಲ್ಲಿ ಸುಧಾರಣೆಯಾಗುವುದೇನೋ ಇಲ್ಲವೆಂದಲ್ಲ.

ಹಳ್ಳಿಯ ಸಮಗಾರರು ಎಲುಬನ್ನು ಉಪಯೋಗಿಸುತ್ತಿಲ್ಲ. ಅದನ್ನು ಒಗೆದುಬಿಡುತ್ತಾರೆ. ಸತ್ತ ಪ್ರಾಣಿಗಳ ಸುತ್ತಲೂ ಸೇರುವ ನಾಯಿಗಳು ಕೆಲವು ಎಲುಬನ್ನು ಎಳೆದುಕೊಂಡು ಹೋಗುತ್ತವೆ. ಇದರಿಂದ ರಾಷ್ಟ್ರಕ್ಕೆ ತುಂಬ ಹಾನಿ. ಎಲುಬನ್ನು ಪುಡಿ ಮಾಡಿದರೆ ಉತ್ತಮ ಗೊಬ್ಬರವಾಗುತ್ತದೆ. ನಾಯಿಗಳೂ ಕಚ್ಚಿಕೊಂಡು ಹೋಗಿ ಉಳಿದ ಎಲುಬುಗಳು ವಿದೇಶಗಳಿಗೆ ಹೋಗಿ, ಹಿಡಿಕೆ, ಬಟನ್ ಮುಂತಾದ ರೂಪದಲ್ಲಿ ತಿರುಗಿ ಈ ದೇಶಕ್ಕೆ ಬರುತ್ತವೆ.

ಸ್ವದೇಶಿ ಪ್ರೇಮಿಗೆ ಕೆಲಸ ಮಾಡಲು, ತಾಂತ್ರಿಕ ನೈಪುಣ್ಯವನ್ನು ಉಪಯೋಗಿಸಲು ಇಲ್ಲಿ ಸಾಕಷ್ಟು ಅನುವಿದೆ. ಈ ಕಾರ್ಯದಿಂದ ಒಂದೇ ಏಟಿಗೆ ಮೂರು ಹಣ್ಣುಗಳನ್ನು ಉದುರಿಸಬಹುದು. ಇದರಿಂದ ಹರಿಜನರ ಸೇವೆಯಾಗುತ್ತದೆ; ಹಳ್ಳಿಗರ ಸೇವೆಯಾಗುತ್ತದೆ. ಕೆಲಸ ಬೇಕೆನ್ನುವ ಕಲಿತ ಮಧ್ಯಮ ವರ್ಗದವರಿಗೆ ಗೌರವಯುತ ಉದ್ಯೋಗ ದೊರೆಯುತ್ತದೆ. ಇದಲ್ಲದೆ ಸುಶಿಕ್ಷಿತರಿಗೆ ಹಳ್ಳಿಗರ ನೇರವಾದ ಸಂಪರ್ಕ ದೊರೆಯುತ್ತದೆ.

(ಹ., 1934)

* * *

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896 ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906 ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915
ಸಾಬರಮತಿ ಆಶ್ರಮ ಸ್ಥಾಪನೆ	1915

ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಯಾತ್ರೆ	1933
ಹರಿಜನ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿಯವರ ಮೈಲಿಗಲ್ಲು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00
24.	ಸ್ವಾತಂತ್ರ್ಯ	25–00
25.	ಅಸ್ಪೃಶ್ಯತೆ	30–00
26.	ಒಳ್ಳೆಯ ಜೀವನ	25–00
27.	ಪ್ರಾರ್ಥನೆ	25–00
28.	ಗಾಂಧೀ ಮತ್ತು ಕರ್ನಾಟಕ	200–00
29.	ಸತ್ಯ	30–00
30.	ವಿದ್ಯಾರ್ಥಿಗಳಿಗಾಗಿ	30–00
31.	ಸರ್ವೋದಯ	30–00

32.	ಖಾದಿ ಗ್ರಾಮೋದ್ಯೋಗ	30-00
33.	ನನ್ನ ಬಾಲ್ಯದ ನೆನಪುಗಳು	30-00
34.	ಗ್ರಾಮರಾಜ್ಯ ಆಡಳಿತ	5-00
35.	ನನ್ನ ಕನಸಿನ ಸ್ವರಾಜ್ಯ	5-00
36.	ಗಾಂಧೀ ಮತ್ತು ಹಾಸ್ಯ	20-00
37.	ನನ್ನ ಆದರ್ಶಗ್ರಾಮ	5-00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48-00
39.	ಸತ್ಯಾಗ್ರಹಿ	40-00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25-00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5-00
43.	ಸತ್ಯಾಗ್ರಹ	5-00
44.	ಹಿಂದ್ ಸ್ವರಾಜ್	5-00
45.	ಆರೋಗ್ಯ	5-00
46.	ಮಹಾತ್ಮ ಗಾಂಧಿ ಪ್ರಸ್ತುತತೆ	10-00
47.	ಬಹುರೂಪಿ ಗಾಂಧಿ	10-00
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30-00
49.	ಕೃತಯುಗಿ ವಿನೋಬಾ ಭಾವೆ	15-00
50.	ಮೋಹನ ತರಂಗ	40-00
51.	ನಮ್ಮ ಗಾಂಧಿ ತಾತ	5-00
52.	ಗೀತಾ ಪ್ರವಚನ	80-00
53.	ಜೆ.ಪಿ. ಜೀವನ ಹಾದಿ	45-00
54.	ಗಣ್ಯರು ಕಂಡಂತೆ ಗಾಂಧಿ	20.0
55.	ಗೀತಾಮಾತೆ	80.00
56.	Temple & Mosque	10-00
57.	Rastrapita Mahatma Gandhi	25-00
58.	Swarajya of Dreams	5-00
59.	Gandhi My Grand Father	5-00
60.	Grand Pa Gandhi	5-00
61.	Relevance of Gandhi	20-00
62.	Vinoba age of the sage	20.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ, ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-05-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927
● ನಿಪ್ಪಾಣಿ	ದಿ. 28-03-1927 ರಿಂದ ದಿ. 30-12-1924 ರವರೆಗೆ

• ಬೆಳಗಾವಿ	ದಿ. 19-04-1027 ರಿಂದ ದಿ. 20-04-1927ರವರೆಗೆ
• ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
• ತುಮಕೂರು	ದಿ. 14-07-1927
• ತುಮಕೂರು, ಮಧುಗಿರಿ	ದಿ. 15-07-1927
• ತುಮಕೂರು	ದಿ. 16-07-1927
• ಬೆಂಗಳೂರು	ದಿ. 17-07-1927
• ಬೆಂಗಳೂರು	ದಿ. 18-07-1927
• ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ	ದಿ. 19-07-1927
• ಮೈಸೂರು	ದಿ. 22-07-1927
• ಬೆಂಗಳೂರು	ದಿ. 12-07-1927 ರಿಂದ ದಿ. 30-07-1927 ರವರೆಗೆ
• ಕ್ಲೊಸ್‌ಪೇಟೆ (ರಾಮನಗರ)	ದಿ. 31-07-1927
• ಕಾನಕನಹಳ್ಳಿ (ಕನಕಪುರ)	
• ಬೆಂಗಳೂರು	ದಿ. 01-08-1927
• ಅರಸೀಕರೆ, ಹಾಸನ	ದಿ. 02-08-1927
• ಹಾಸನ	ದಿ. 03-08-1927
• ಹಾಸನ, ಹೊಳೆನರಸೀಪುರ	ದಿ. 04-08-1927
• ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
• ದಾವಣಗೆರೆ	ದಿ. 12-08-1927
• ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927
• ಶಿವಮೊಗ್ಗ	ದಿ. 15-08-1927

● ಆಯನೂರು, ಕುಂಸಿ, ಸಾಗರ ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಶಿವಮೊಗ್ಗ	ದಿ. 15-08-1927
● ಭದ್ರಾವತಿ, ತರೀಕೆರೆ	ದಿ. 18-08-1927
● ಬೀರೂರು, ಕಡೂರು	
● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು	ದಿ. 20-08-1927
● ಅರಸೀಕರೆ	
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934
● ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ

- ಪೊನ್ನಂಪೇಟೆ, ಹುದಿಕೇರಿ ದಿ. 22-02-1934
- ವಿರಾಜಪೇಟೆ, ಬೆಳ್ಳೂರು ದಿ. 23-02-1934
- ಸೋಮವಾರ ಪೇಟೆ
- ಗುಂಡುಕಟ್ಟೆ
- ಮಡಿಕೇರಿ, ಸಂಪಾಜೆ, ಸುಳ್ಯ ದಿ. 24-02-1934
- ಪುತ್ತೂರು, ಉಪ್ಪಿನಂಗಡಿ
- ವಿಠಲಗಬ್ಬ, ಕಲ್ಲಡ್ಕ, ಪಾಣೆ
- ಮಂಗಳೂರು, ಬಂಟ್ವಾಳ
- ಮಂಗಳೂರು
- ಮಂಗಳೂರು, ಗುರುಪುರ, ಬಜ್ಪೆ ದಿ. 25-02-1934
  ಯಳ್ಳೂರು, ಕಟೀಲು, ಕಿನ್ನಗೋಳಿ
  ಮೂಲ್ಕಿ, ಪಡುಬಿದ್ರಿ, ಕಾಟಪಾಡಿ
  ಗುರುಪುರ, ಉದಯಪುರ
  ಉಡುಪಿ, ಬ್ರಹ್ಮಾವರ, ಸಿದ್ದಾಪುರ
- ಕುಂದಾಪುರ ದಿ. 26-02-1934
- ಕುಂದಾಪುರ, ಭಟ್ಕಳ ದಿ. 27-02-1934
  ಹೊನ್ನಾವರ, ಕಾರವಾರ
- ಕಾರವಾರ, ಕುಮುಟಾ, ಅಂಕೋಲ ದಿ. 28-02-1934
  ಚಂದಿಯಾ, ಶಿರಸಿ
- ಶಿರಸಿ, ಸಿದ್ದಾಪುರ, ದಾಸನಕೊಪ್ಪ ದಿ. 01-03-1934
  ಇಸಲೂರು, ಏಕಾಂಬಿ, ಆಲೂರು
  ಬ್ಯಾಡಗಿ, ಮೋಟೆಬೆನ್ನೂರು
- ಹಾವೇರಿ, ರಾಣೆಬೆನ್ನೂರು, ಹರಿಹರ ದಿ. 02-03-1934
  ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು
  ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ
  ಸೊಂಡೂರು
- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾವಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ

- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ದಿ. 04-03-1934
  ಹಿರೇಉಳ್ಳಗೇರಿ, ಬೈಲಹೊಂಗಲ
  ಉಪ್ಪಿನ, ಬೆಟಗೇರಿ, ಸೌಂದತ್ತಿ
  ಸಂಪಗಾಂವ್, ಹೊಸೂರು, ಬೆಳಗಾವಿ
- ಬೆಳಗಾವಿ ದಿ. 05-03-1934
- ಬೆಳಗಾವಿ ದಿ. 06-03-1934
- ಬೆಳಗಾವಿ, ಯಮಕನಮರಡಿ ದಿ. 07-03-1934
  ಹುಕ್ಕೇರಿ, ಗೋಕಾಕ, ಸಂಕೇಶ್ವರ
  ನವಲೀಹಾಳ, ಚಿಕ್ಕೋಡಿ, ಅಂಕಲಿ
  ಶೆಡಬಾಳ, ಬನಹಟ್ಟಿ, ಅಥಣಿ
  ಬಿಜಾಪುರ, ತಿಕೋಟ, ತೊರವಿ
  ಇಳಕಲ್
- ನಂದಿ ಬೆಟ್ಟ 10-05-1936 ರಿಂದ
  30-05-1936 ರವರೆಗೆ
- ಚಿಕ್ಕಬಳ್ಳಾಪುರ, ಚಿಂತಾಮಣಿ 31-05-1936
  ಕೋಲಾರ, ಬಂಗಾರ ಪೇಟೆ, ಕೆ.ಜಿ.ಎಫ್
- ಬೆಂಗಳೂರು 01-06-1936 ರಿಂದ
  12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ 16-04-1936 ರಿಂದ
  21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	Communal Unity
ಅಸ್ಪೃಶ್ಯತಾ ನಿವಾರಣೆ	Removal of Untouchability
ಪಾನನಿರೋಧ	Prohibition
ಖಾದಿ	Khadi
ಇತರೆ ಗ್ರಾಮೋದ್ಯೋಗ	Other village industries
ಗ್ರಾಮ ನೈರ್ಮಲ್ಯ	Village Sanitation
ಮೂಲ ಶಿಕ್ಷಣ	Basic Education
ವಯಸ್ಕರ ಶಿಕ್ಷಣ	Adult Education
ಮಹಿಳಾ ಸಬಲೀಕರಣ	Women Empowerment
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	Hygiene & Health Education
ಪ್ರಾದೇಶಿಕ ಭಾಷೆ	Provincial Languages
ರಾಷ್ಟ್ರಭಾಷೆ	National Language
ಆರ್ಥಿಕ ಸಮಾನತೆ	Economic Equality
ರೈತರ ಸಬಲೀಕರಣ	Empowerment of Farmers
ಕಾರ್ಮಿಕರ ಸಬಲೀಕರಣ	Empowerment of Labours
ಆದಿವಾಸಿ ಸಬಲೀಕರಣ	Tribal Empowerment
ಕುಷ್ಠರೋಗ ನಿರ್ಮೂಲನೆ	Cure of Lepracy
ವಿದ್ಯಾರ್ಥಿ	Students

ಗಾಂಧೀಜಿ ಅವರು ದಾರಿದ್ರ್ಯ ನಿವಾರಣೆಗೆ ಖಾದಿಯೇ ಮೂಲವೆಂದು ನಂಬಿದ್ದರು. ಅದಕ್ಕಾಗಿ ಚರಕವನ್ನು ಆಶ್ರಯಿಸಿದರು. ಅವರು ಹೀಗೆ ಹೇಳುತ್ತಾ ಹಣ ಇಲ್ಲದಿರುವುದು ಜನತೆಗೆ ಅಂಟಿದ ರೋಗವಲ್ಲ, ಕೆಲಸ ಇಲ್ಲದಿರುವುದೇ ರೋಗವಾಗಿದೆ. ಶ್ರಮವೇ ಧನವು. ಲಕ್ಷಾಂತರ ಜನರಿಗೆ ಅವರ ಗುಡಿಸಿಲಿನಲ್ಲಿ ಮರ್ಯಾದೆಯಿಂದ ಬಾಳಲು ಕೆಲಸ ಒದಗಿಸಿದರೆ, ಅವರಿಗೆ ಅನ್ನವಸ್ತ್ರ–ಅರ್ಥಾತ್ ಹಣ ದೊರಕಿಸಿ ಕೊಟ್ಟಂತಾಗುವುದು.

– ಡಾ॥ ಹೊ. ಶ್ರೀನಿವಾಸಯ್ಯ

ಭಾರತೀಯರ ಸ್ವಾವಲಂಬನೆ, ಸ್ವಾಭಿಮಾನ, ಸ್ವದೇಶಿಯತೆಯಿಂದ ಮಾತ್ರ ಭಾರತ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವೆಂಬುದನ್ನು ಒಂದು ನಿಮಿಷ ಕೂಡ ವ್ಯರ್ಥಗೊಳಿಸದೆ ಚರಕದಿಂದ ನೂಲುತ್ತಾ ತಾವೇ ಸ್ವತಃ ಬಹುದೊಡ್ಡ ನಿದರ್ಶನವಾದರು. ಭಾರತೀಯರ ನಿರುದ್ಯೋಗ ನಿವಾರಣೆಗೆ ಪರ್ಯಾಯಾವಾಗಿ ಖಾದಿ ಮತ್ತು ಗ್ರಾಮೋದ್ಯೋಗವೇ ಹೊಸ ಆರ್ಥಿಕ ನೀತಿಯನ್ನು ಸೃಜಿಸಿದರು.

– ಡಾ. ವೂಡೇ ಪಿ. ಕೃಷ್ಣ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು